ಸಂಪುಟ ೧೯ ಸಂಚಿಕೆ ೪ ಡಿಸೆಂಬರ್ ೧೯೯೮

ಬ್ಯಾಂಕಿಂಗ್ ಪ್ರಪಂಚ

ಸಂಪಾದಕರು
ಎಚ್ಚೆಸ್ಕೆ

ಸಮನ್ವಯ ಸಮಿತಿ
ಆಡಳಿತ ವರ್ಗ

ಅಧ್ಯಕ್ಷ
ಮೇ. ಕೃ. ಅನಂತಸ್ವಾಮಿ

ಕಾರ್ಯಾಧ್ಯಕ್ಷ
ಬಿ. ಎಸ್. ಚಂದ್ರಶೇಖರ

ಉಪಾಧ್ಯಕ್ಷ
ಬೆಂ. ಶ್ರೀ. ರವೀಂದ್ರ

ಪ್ರಧಾನ ಕಾರ್ಯದರ್ಶಿ
ಪಾ. ರಾಜಗೋಪಾಲ

ಉಪ ಪ್ರಧಾನ ಕಾರ್ಯದರ್ಶಿಗಳು
ಮಿರ್ಲೆ ಸುದರ್ಶನ
ಕ. ನ. ಜಯರಾಮ
ಹು. ವಾ. ಶ್ರೀಪ್ರಕಾಶ

ಸಹಾಯಕ ಪ್ರಧಾನ ಕಾರ್ಯದರ್ಶಿ
ಕೆ. ಎನ್. ಮಹಾಬಲ

ಖಜಾಂಚಿ
ಧನಂಜಯ ಭಂಡಿ

ಉಪ ಖಜಾಂಚಿ
ಉಮಾ ಶಂಕರ್

ಕಛೇರಿ ಕಾರ್ಯದರ್ಶಿ
ದೇವರಾಯ

ಆಂತರಿಕ ಲೆಕ್ಕ ಪರಿಶೋಧಕ
ಕೋದಂಡ ರಾಂ

ವಾರ್ಷಿಕ ಚಂದಾ : ರೂ. 30
ಆಜೀವ ಚಂದಾ : ರೂ. 300

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦ ೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

With best compliments from

WORLD WIDE TRADERS

Manufacturers and Exporters of

READYMADE GARMENTS

No. 5, 4th Main, S. K. Garden

BANGALORE–560 046

ಉದ್ಯಮ ಸಂಪನ್ಮೂಲ ಯೋಜನೆ

ಜಿ. ಎಸ್. ರವೀಂದ್ರ

ಭಾರತೀಯ ಸ್ಟೇಟ್ ಬ್ಯಾಂಕ್, ವಿ.ವಿ. ಪುರಂ ಶಾಖೆ, ಬೆಂಗಳೂರು 560 004

ಸ್ಪರ್ಧಾತ್ಮಕ ವ್ಯವಸ್ಥೆಯಲ್ಲಿ ಉದ್ಯಮಗಳು ಗ್ರಾಹಕನ ಹೊಸ ಅಗತ್ಯಗಳನ್ನು ಪೂರೈಸುತ್ತ, ಮಾರುಕಟ್ಟೆಯಲ್ಲಿ ಲಭ್ಯವಿರುವ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವ ಜಾಣ್ಮೆಯೇ ಅವುಗಳ ಅಳಿವು–ಉಳಿವುಗಳನ್ನು ನಿರ್ಣಯಿಸುವ ಅಂಶವಾಗಿದೆ.

ಕಳೆದ ಐದು ವರ್ಷಗಳಲ್ಲಿ ಉದ್ಯಮರಂಗದಲ್ಲಿ ಆಗಿರುವಷ್ಟು ಬೆಳವಣಿಗೆ ಪ್ರಾಯಶಃ ಹಿಂದಿನ ಐದು ದಶಕದಲ್ಲೂ ಆಗಿರಲಿಲ್ಲ. ಬ್ಯಾಂಕಿಂಗ್ ಉದ್ಯಮವಾಗಲಿ, ಕೈಗಾರಿಕೋದ್ಯಮವಾಗಲಿ, ಯಾವುದೇ ಉದ್ಯಮವಾಗಲಿ ಸತತವಾಗಿ ಬದಲಾವಣೆಯನ್ನು ಕಾಣುತ್ತಿರುವುದು ಇತ್ತೀಚಿನ ದಿನಗಳಲ್ಲಷ್ಟೇ. ಬದಲಾವಣೆ, ಪೈಪೋಟಿ, ಬೆಳವಣಿಗೆ, ಹೊಸ ತಂತ್ರಜ್ಞಾನ ಎಲ್ಲವನ್ನೂ ಮೈಗೂಡಿಸಿಕೊಂಡು ಮುಂದುವರಿಯಬೇಕಾಗಿರುವುದು ಇಂದಿನ ಉದ್ಯಮಗಳ ವಿಶೇಷತೆ. ಈ ಚಲನಶೀಲಗತಿ ಇನ್ನೊಂದು ದಶಕದ ವರೆಗಾದರೂ ಇರುವುದರಲ್ಲಿ ಸಂದೇಹವಿಲ್ಲ. ಈ ಪರಿಸ್ಥಿತಿಯಲ್ಲಿ ಉದ್ಯಮಗಳು ಪುನಶ್ಚೇತನಗೊಂಡು ಸತ್ವಶಾಲಿಗಳಾಗದಿದ್ದರೆ, ಹೊಸ ಶೋಧನೆಗಳಲ್ಲಿ ತೊಡಗಿಸಿಕೊಳ್ಳದಿದ್ದರೆ, ಹೊಸ ತಂತ್ರಜ್ಞಾನಕ್ಕೆ ಸ್ಪಂದಿಸದಿದ್ದರೆ 21ನೆಯ ಶತಮಾನದ ಮಾರುಕಟ್ಟೆಯಲ್ಲಿ ತಮ್ಮ ಅಸ್ತಿತ್ವವನ್ನೆ ಕಳೆದುಕೊಳ್ಳಬೇಕಾಗುತ್ತದೆ.

ಗ್ರಾಹಕನ ಹೊಸ ಅಗತ್ಯಗಳನ್ನು ಪೂರೈಸುತ್ತ, ಮಾರುಕಟ್ಟೆಯಲ್ಲಿ ಲಭ್ಯವಿರುವ ಅವಕಾಶವನ್ನು ತಮ್ಮದಾಗಿಸಿಕೊಳ್ಳುವ ಜಾಣ್ಮೆಯಲ್ಲಿ ಉದ್ಯಮಗಳ ಅಳಿವು-ಉಳಿವಿನ ಪ್ರಶ್ನೆ ಅಡಗಿದೆ. ಇಂದಿನ ಸ್ಥಿತಿಯಲ್ಲಿ ಉದ್ಯಮಗಳು ಸಫಲವಾಗಬೇಕಾದರೆ :

(ಅ) ಉದ್ಯಮದ ಎಲ್ಲಾ ವಿಭಾಗಗಳ ನಡುವೆ ಸಂಪರ್ಕವಿದ್ದು ಮಾಹಿತಿ ವಿನಿಮಯ ಸಮರ್ಪಕವಾಗಿರಬೇಕಾಗುತ್ತದೆ ;

(ಆ) ಗುಣಮಟ್ಟ, ಗ್ರಾಹಕಸೇವೆ, ಲಾಭಗಳಿಕೆ, ಸಿಬ್ಬಂದಿ ಕ್ಷೇಮ ಈ ಎಲ್ಲಾ ಅಂಶಗಳತ್ತಲೂ ಜಾಗರೂಕತೆಯಿಂದಿರಬೇಕಾಗುತ್ತದೆ;

(ಇ) ಮಾರುಕಟ್ಟೆಗೆ ತಕ್ಕಂತೆ ಸಂರಚನೆಯಲ್ಲಿ ಸುಧಾರಣೆ ಮಾಡಿಕೊಳ್ಳುತ್ತಾ ಹೊಸ ಉತ್ಪನ್ನಗಳನ್ನು ಕೊಡಬೇಕಾಗುತ್ತದೆ.

ಮಾಹಿತಿ

ಈ ಎಲ್ಲದರ ಮೂಲ ಹಾಗೂ ಮುಖ್ಯ ಕೊಂಡಿಯೆಂದರೆ ಮಾಹಿತಿ. ಮಾಹಿತಿಯನ್ನಾಧರಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುವುದರಿಂದ ಇದು ಒಂದು ಉದ್ಯಮದ ಭವಿಷ್ಯವನ್ನೇ ನಿರ್ಧರಿಸುವಷ್ಟು ಶಕ್ತಿಶಾಲಿ.

ಐದು ದಶಕಗಳ ಹಿಂದೆ ಮಾಹಿತಿಗೆ ಹೆಚ್ಚಿನ ಒತ್ತು ಇರಲಿಲ್ಲ. ಮಾಹಿತಿ ವಿನಿಮಯ ಹಾಗೂ ವಿಶ್ಲೇಷಣೆಗೆ ಪೂರಕವಾದ ಒಂದು ಸಂರಚನೆಯೂ ಇರಲಿಲ್ಲ. ಗಣಕಗಳ ಪ್ರವೇಶದಿಂದ ಈ ಕೊರತೆ ದೂರವಾಯಿತೆನ್ನಬಹುದು. ಉದ್ಯಮಗಳು ಕಂಪ್ಯೂಟರ್‌ಗಳನ್ನು ತಮ್ಮ ಪ್ರಮುಖ ಕಾರ್ಯಭಾರಾತ್ಮಕ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳುವ ಒಂದು ವ್ಯವಸ್ಥೆ ಜಾರಿಗೆ ಬಂತು. ಮಾಹಿತಿ ಪ್ರಸರಣ ಇದರಿಂದ ಸುಲಭವಾಯಿತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ವ್ಯವಸ್ಥೆಯಲ್ಲಿಯೂ ನ್ಯೂನತೆಗಳಿರುವುದು ಉದ್ಯಮರಂಗದ ವ್ಯವಸ್ಥಾಪನ ವರ್ಗದ ಅನುಭವಕ್ಕೆ ಬಂತು.

ಗಣಕಗಳನ್ನು ಉದ್ಯಮದ ಪ್ರತಿಯೊಂದು ವಿಭಾಗದಲ್ಲೂ ಪ್ರತ್ಯೇಕವಾಗಿ ಅಳವಡಿಸಿಕೊಂಡಿದ್ದರಿಂದ ಸಕಾಲದಲ್ಲಿ ಇಡೀ ಉದ್ಯಮದ ಬಗ್ಗೆ ಮಾಹಿತಿಯ ಕ್ರೋಡೀಕರಣ ಕಷ್ಟವಾಗುತ್ತಿತ್ತು.

ಉದ್ಯಮ ತನ್ನ ವ್ಯವಹಾರದ ಸ್ವರೂಪದಲ್ಲಿ ಬದಲಾವಣೆಯನ್ನು ಅಳವಡಿಸಿಕೊಂಡರೆ ಗಣಕದ ಕಾರ್ಯವಿಧಾನದ ವ್ಯವಸ್ಥೆಯನ್ನೇ ಬದಲಾಯಿಸಬೇಕಾಗುತ್ತಿತ್ತು. ಹೊರಗಿನ ಮಾರುಕಟ್ಟೆಯ ಸ್ಥಿತಿ-ಗತಿಗಳಿಗೆ ಸ್ಪಂದಿಸಿ ಬದಲಾವಣೆಯನ್ನು ಮಾಡಿಕೊಳ್ಳಬೇಕಾದರೆ ತನ್ನ ಮಾಹಿತಿ ಸಂರಚನೆಗಾಗಿ ಮಾಡಿಕೊಂಡ ಗಣಕ ವ್ಯವಸ್ಥೆಯನ್ನೆ ಬದಲಾಯಿಸುವುದಕ್ಕೆ ಅಪಾರ ಪರಿಶ್ರಮ, ಹಣ ವ್ಯರ್ಥವಾಗಿ ಬಳಕೆಯಾಗುತ್ತಿತ್ತು.

ಉದ್ಯಮ ಸಂಪನ್ಮೂಲ ಯೋಜನೆ

ಈ ನ್ಯೂನತೆಗಳನ್ನು ಸರಿಪಡಿಸಿ ಉದ್ಯಮರಂಗ ಅತ್ಯಂತ ಶಕ್ತವಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗುವಂತೆ ನಿರ್ಮಿಸಲಾದ ಒಂದು ಹೊಸ ವ್ಯವಸ್ಥೆಯೆ ಉದ್ಯಮ ಸಂಪನ್ಮೂಲ ಯೋಜನೆ. ಗಣಕಗಳ ಸಾರ್ಥಕ ಬಳಕೆಯಿಂದ ಅಳವಡಿಸಿಕೊಳ್ಳ

ಬಹುದಾದ ಈ ಉದ್ಯಮ ಸಂಪನ್ಮೂಲ ಯೋಜನೆಯ ಬಹಳ ಮುಖ್ಯ ಅಂಶಗಳೆಂದರೆ :

(ಅ) ಈ ಯೋಜನೆ ಇಡೀ ಉದ್ಯಮವನ್ನ ಒಂದು ಘಟಕವನ್ನಾಗಿ ಪರಿಭಾವಿಸುವುದು ;

(ಆ) ಉದ್ಯಮದ ಪ್ರತಿಯೊಂದು ವಿಭಾಗದೊಡನೆ—ಆ ವಿಭಾಗಗಳು ಎಲ್ಲೇ ಇರಲಿ—ಸಂಪರ್ಕವಿರಿಸಿಕೊಂಡು ಮಾಹಿತಿ ಪಡೆಯುವುದು ;

(ಇ) ದತ್ತಾಂಶಗಳ ಕ್ರೋಢೀಕರಣ ಮತ್ತು ವ್ಯವಸ್ಥಾಪನವರ್ಗ ತನಗೆ ಬೇಕಾದ ಮಾಹಿತಿಯನ್ನು ಕ್ಷಣದಲ್ಲೆ ಪಡೆಯಬಹುದಾದ ಸೌಲಭ್ಯ.

ಉದ್ಯಮ ಸಂಪನ್ಮೂಲ ಯೋಜನೆಯ ವ್ಯವಸ್ಥೆ ಎಲ್ಲವನ್ನೂ ಒಳಗೊಂಡಿರುತ್ತದೆ. ಉದ್ಯಮದ ಗ್ರಾಹಕರ ಮಾಹಿತಿ, ಹಣಕಾಸಿನ ಮಾಹಿತಿ, ಮಾನವ ಸಂಪನ್ಮೂಲದ ಮಾಹಿತಿ, ಮಾರುಕಟ್ಟೆಯ ಸ್ಥಿತಿ-ಗತಿಗಳ ಬಗ್ಗೆ ಮಾಹಿತಿ ಇತ್ಯಾದಿ. ಪ್ರತಿಯೊಂದು ವಿಭಾಗದಲ್ಲೂ ಇನ್ನೂ ಅನೇಕ ವಿವರಗಳ ವಿಶ್ಲೇಷಣೆ ಇರುತ್ತದೆ.

ಉದಾಹರಣೆಗೆ ಹಣಕಾಸಿನ ವಿಭಾಗದಲ್ಲಿ (1) ಹಣಕಾಸಿನ ಲೆಕ್ಕ, (2) ಖಜಾನೆ ವ್ಯವಸ್ಥಾಪನೆ, (3) ಆಸ್ತಿ-ಹೊಣೆ ವ್ಯವಸ್ಥಾಪನೆ ಇತ್ಯಾದಿ ಸೂಕ್ಷ್ಮ ವಿವರಗಳೂ ಇವೆ. ಉದ್ಯಮ ಸಂಪನ್ಮೂಲ ಯೋಜನೆಯನ್ನು ಒಂದು ಉದ್ಯಮ ಅಳವಡಿಸಿಕೊಳ್ಳಲು ತೀರ್ಮಾನಿಸಿದಾಗ ಆ ಉದ್ಯಮಕ್ಕೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನು ಕಲೆಹಾಕಿ, ಅಭ್ಯಾಸಮಾಡಿ ಆ ಉದ್ಯಮದ ಯಶಸ್ವಿ ನಿರ್ವಹಣೆಗೆ ತಂತ್ರಾಂಶವನ್ನು ರೂಪಿಸಲಾಗುತ್ತದೆ. ಜೊತೆಗೆ ಸರಿಹೊಂದುವ ಸೂಕ್ತ ಯಂತ್ರಾಂಶವನ್ನು ಗುರುತಿಸಿ ಒಂದು ಹೊಸ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ.

ಬ್ಯಾಂಕಿಂಗ್ ಉದ್ಯಮದಲ್ಲಿ

ಉದ್ಯಮ ಸಂಪನ್ಮೂಲ ಯೋಜನೆಯನ್ನು ಅತಿ ಹೆಚ್ಚಾಗಿ ಅಳವಡಿಸಿಕೊಂಡಿರುವುದು ಕಾರ್ಖಾನೆಗಳಲ್ಲಿ. ಬ್ಯಾಂಕಿಂಗ್‌ನಲ್ಲಿ, ವಿಮಾ ಕ್ಷೇತ್ರದಲ್ಲಿ ಇದು ಅಷ್ಟಾಗಿ ಬಳಕೆಗೆ ಬಂದಿಲ್ಲ. ಆದರೆ ಯಾವುದೇ ಉದ್ಯಮದಲ್ಲಾದರೂ ಹಣಕಾಸಿನ ವಿಶ್ಲೇಷಣೆ, ಮಾನವ ಸಂಪನ್ಮೂಲ, ಮಾಹಿತಿಯ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳುವುದು ಸಮಾನವಾಗಿರುವುದರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲೂ ಈ ಯೋಜನೆಯನ್ನು ಇತ್ತೀಚೆಗೆ ಅಳವಡಿಸಿಕೊಳ್ಳಲಾಗುತ್ತಿದೆ. ಬಹು ಶಾಖಾ ವ್ಯವಸ್ಥೆಯಿರುವ ಬ್ಯಾಂಕಿಂಗ್ ಉದ್ಯಮದಲ್ಲಿ ಸಕಾಲಿಕ ಪರಿಪೂರ್ಣ ಮಾಹಿತಿ ಬಹಳ ಮುಖ್ಯ. ಈ ಯೋಜನೆಯ ವ್ಯವಸ್ಥೆಯನ್ನು ಅಳವಡಿಸಿಕೊಂಡಾಗ ಬ್ಯಾಂಕಿನಲ್ಲಿ ಆಸ್ತಿ–ಹೊಣೆ ವ್ಯವಸ್ಥಾಪನೆ ಹಾಗೂ ತೀರ್ಮಾನಗಳನ್ನು ಸರಿಯಾಗಿ ತೆಗೆದುಕೊಳ್ಳಲು ಸಾಧ್ಯವೆಂಬುದಕ್ಕೆ ಒಂದು ಉದಾಹರಣೆಯನ್ನು ಗಮನಿಸೋಣ.

ಬಹುಶಾಖಾ ವ್ಯವಸ್ಥೆಯಿರುವ ಬ್ಯಾಂಕೊಂದರ ಉನ್ನತ ವ್ಯವಸ್ಥಾಪನ ವರ್ಗದಲ್ಲಿ ನೀವಿದ್ದೀರಿ ಎಂದು ಊಹಿಸಿಕೊಳ್ಳೋಣ. ಬ್ಯಾಂಕಿನ ಕೇಂದ್ರ ಕಛೇರಿ ಹಾಗೂ ಶಾಖೆಗಳ ನಡುವೆ ನೇರ ಸಂಪರ್ಕವನ್ನು ಸಾಧಿಸುವುದರ ಜೊತೆಗೆ ಉದ್ಯಮ ಸಂಪನ್ಮೂಲ ಯೋಜನೆಯನ್ನು ಬ್ಯಾಂಕಿನಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದಿಟ್ಟುಕೊಳ್ಳೋಣ.

ಬ್ಯಾಂಕಿಂಗ್ ಉದ್ಯಮ ಸಮರ್ಪಕವಾಗಿ ಮುಂದುವರಿಯಲು ಆಸ್ತಿ-ಹೊಣೆಗಳ ನಿರ್ವಹಣೆ ಬಹಳ ಮುಖ್ಯ. ಆಸ್ತಿ-ಹೊಣೆ ವ್ಯವಸ್ಥಾಪನೆ ಎಂಬ ಒಂದು ಸಾಧನ ಉದ್ಯಮ ಸಂಪನ್ಮೂಲ ಯೋಜನೆಯಲ್ಲಿದೆ. ಈ ಸಾಧನ ಮಾರುಕಟ್ಟೆಯ ನಷ್ಟಸಂಭಾವ್ಯತೆ ಬಗ್ಗೆ ಮಾಹಿತಿ ನೀಡುವುದಲ್ಲದೆ ಬ್ಯಾಂಕು ಅನುಸರಿಸಬಹುದಾದ ಪರ್ಯಾಯ ಮಾರ್ಗಗಳ ಬಗ್ಗೆ ಹಾಗೂ ಅಲ್ಲಿರುವ ನಷ್ಟಸಂಭಾವ್ಯತೆಯ ಬಗ್ಗೆಯೂ ಮಾಹಿತಿ ನೀಡುತ್ತದೆ. ಬ್ಯಾಂಕಿನ ಎಲ್ಲ ಶಾಖೆಗಳ ವಹಿವಾಟುಗಳನ್ನು ಕೇಂದ್ರ ಕಛೇರಿಯಲ್ಲಿ ಆಯಾ ದಿನಗಳಂದೇ ದಾಖಲಿಸಲು ಸಾಧ್ಯ. ಆದ್ದರಿಂದ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿರುವ ನಿಮಗೆ ಬ್ಯಾಂಕಿನ ಆಸ್ತಿ-ಹೊಣೆಗಳ ಸ್ಥಿತಿ-ಗತಿಗಳು ಯಾವ ಕ್ಷಣದಲ್ಲಿ ಬೇಕಾದರೂ ಲಭ್ಯ. ವ್ಯಾಪಕವಾದ ಬದಲಾವಣೆಯನ್ನು ಕಾಣುತ್ತಿರುವ ಬ್ಯಾಂಕಿಂಗ್ ಉದ್ಯಮದಲ್ಲಿ ನಿಮ್ಮ ಬ್ಯಾಂಕಿನ ಶಾಖೆಗಳು ಯಾವ ರೀತಿಯ ಠೇವಣಿ ಯೋಜನೆಗಳನ್ನು ಪ್ರೋತ್ಸಾಹಿಸಬೇಕು ಮತ್ತು ಯಾವ ಬಡ್ಡಿ ದರವನ್ನು ಈ ಠೇವಣಿಗಳಿಗೆ ನೀಡಬೇಕೆಂಬುದರ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಎಂದುಕೊಳ್ಳೋಣ. ಈ ತೀರ್ಮಾನ ತೆಗೆದುಕೊಳ್ಳಲು ಅನೇಕ ಮಾಹಿತಿಗಳ ಜೊತೆಗೆ ಬಹಳ ಮುಖ್ಯವಾಗಿ ನಿಮ್ಮ ಬ್ಯಾಂಕಿನ ಇತ್ತೀಚಿನ ನಗದು ಹರಿವಿನ ಒಟ್ಟು ಸ್ವರೂಪ ನಿಮಗೆ ತಿಳಿದಿರಬೇಕಾಗುತ್ತದೆ. ಕೇಂದ್ರೀಕೃತವಾದ ಉದ್ಯಮ ಸಂಪನ್ಮೂಲ ಯೋಜನೆಯ ವ್ಯವಸ್ಥೆಯಲ್ಲಿನ ಮಾಹಿತಿ ವ್ಯವಸ್ಥಾಪನ ವ್ಯವಸ್ಥೆಯಿಂದಾಗಿ ನಿಮಗೆ ಈ ಮಾಹಿತಿ ತತ್‌ಕ್ಷಣದಲ್ಲಿ ಲಭ್ಯವಾಗುತ್ತದೆ. ಬ್ಯಾಂಕಿನ ಒಟ್ಟು ಆಸ್ತಿ–ಹೊಣೆಗಳನ್ನು ಗಮನಿಸಿದಾಗ ಬ್ಯಾಂಕಿನ ಆಸ್ತಿಗಳ ಪರಿಪಕ್ವತೆ ಹೊಣೆಗಳ ಪರಿಪಕ್ವತೆಗಳಿಗಿಂತ ದೀರ್ಘವಾಗಿರುವುದು ಕಂಡುಬರುತ್ತದೆ. ಈ ಪರಿಸ್ಥಿತಿಯಲ್ಲಿ ಬ್ಯಾಂಕು ಬಡ್ಡಿದರ ನಷ್ಟಸಂಭಾವ್ಯತೆಗೆ ಒಳಗಾಗಿರುವುದನ್ನು ನೀವು ಗಮನಿಸಬಹುದು. ಒಂದು ವೇಳೆ ಬಡ್ಡಿ ದರಗಳು ಮಾರುಕಟ್ಟೆ ನೀತಿಗೆ ಅನುಸಾರವಾಗಿ ಏರಿದರೆ ಅದು ಬ್ಯಾಂಕಿನ ನಿವ್ವಳ ಬಡ್ಡಿ ಆದಾಯದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವುದನ್ನು ನೀವು ಊಹಿಸಬಹುದು. ಈ ನಷ್ಟಸಂಭಾವ್ಯತೆಯನ್ನು ಕಡಿಮೆಮಾಡಿಕೊಳ್ಳಲು ಬ್ಯಾಂಕು ಈ ವಿಧಾನಗಳನ್ನು ಅನುಸರಿಸಬಹುದು :

(ಅ) ಆಸ್ತಿಗಳ ಸರಾಸರಿ ಪರಿಪಕ್ವತೆಯನ್ನು ಕಡಿಮೆಮಾಡಿಕೊಳ್ಳಬಹುದು (ಪ್ರಾಯಶಃ ಸರಕಾರಿ ಪ್ರತಿಭೂತಿಗಳ ಮೇಲೆ ಇರುವ ತನ್ನ ಹಿಡಿತವನ್ನು ಕಡಿಮೆಮಾಡಿಕೊಳ್ಳುವುದರ ಮೂಲಕ) ;

(11ನೇ ಪುಟ ನೋಡಿ)

ಗುಪ್ತ ಸಮಿತಿ ವರದಿ—ಒಂದು ಕಿರು ಪರಿಚಯ

ಕೆ. ಎಸ್. ಭದ್ರಣ್ಣ

ವ್ಯವಸ್ಥಾಪಕರು, ಮೈಸೂರು ಬ್ಯಾಂಕ್ (ಉದರಿಕೋಶ) ವಲಯ ಕಛೇರಿ, ಹುಬ್ಬಳ್ಳಿ

ಇಂದಿಗೂ ಕೃಷಿಪ್ರಧಾನ ದೇಶವಾಗಿರುವ ಭಾರತದಲ್ಲಿ ಬೇಸಾಯ ಪ್ರಗತಿಪರವಾಗಿಲ್ಲ; ಉತ್ಪಾದಕತೆ ಬೆಳೆದಿಲ್ಲ; ರೈತನ ಅಗತ್ಯಗಳ ಪೂರೈಕೆಯಾಗುತ್ತಿಲ್ಲ; ಬಡತನದ ರೇಖೆಯ ಕೆಳಗಿನ ಜನರ ಉದ್ಧಾರವಾಗಿಲ್ಲ. ನಮ್ಮ ಯೋಜನೆಗಳೆಲ್ಲ ಬಹುತೇಕ ವ್ಯರ್ಥವಾಗಿವೆ. ಏಕೆ ಹೀಗೆ?

ಭಾರತ ಕೃಷಿ ಪ್ರಧಾನವಾದ ದೇಶ. ಕೃಷಿಯ ಮೂಲಕ ಆಹಾರದಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶ ಈಡೇರಿದೆ. ಆದರೆ ಕೃಷಿ ಇನ್ನೂ ಒಂದು ಲಾಭದಾಯಕ ಉದ್ಯಮವಾಗಿ ಬೆಳೆದಿಲ್ಲ. ದೇಶದ ಶೇ. 80ರಷ್ಟು ಜನತೆ ಜೀವನಕ್ಕಾಗಿ ಆಧರಿಸಿರುವ ಕೃಷಿ ಅವರನ್ನು ಬಡತನದ ರೇಖೆಯಿಂದ ಮೇಲೆ ಬರಲು ಸಹಾಯ ಮಾಡಿಲ್ಲ. ಕೃಷಿಯ ಸಮೃದ್ಧಿ ಹಾಗು ಅಭಿವೃದ್ಧಿಗೆ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಯೋಜನೆಗಳನ್ನು ಜಾರಿಗೆ ತರಲು, ಮೇಲ್ವಿಚಾರಣೆ ಮಾಡಲು ಅನೇಕ ಅಭಿಕರಣಗಳು ಹುಟ್ಟಿಕೊಂಡಿವೆ. ಉದಾ: ರೈತ ಸಹಕಾರ ಸಂಘಗಳು, ಜಿಲ್ಲಾ ಸಹಕಾರಿ ಬ್ಯಾಂಕು, ಭೂ ಅಭಿವೃದ್ಧಿ ಬ್ಯಾಂಕು, ಗ್ರಾಮೀಣ ಬ್ಯಾಂಕ್ ಇತ್ಯಾದಿ.

ಭಾರತೀಯ ಸ್ಟೇಟ್ ಬ್ಯಾಂಕ್, ಅದರ ಸಹವರ್ತಿ ಬ್ಯಾಂಕುಗಳು ಹಾಗೂ ರಾಷ್ಟ್ರೀಯ ಕೃಷಿ ಅಭಿವೃದ್ಧಿ ಬ್ಯಾಂಕು ದೇಶದ ಕೃಷಿಯೋಜನೆಗಳನ್ನು ಜಾರಿಗೆ ತರುವಲ್ಲಿ ತಮ್ಮದೆ ಆದ ಪಾತ್ರವನ್ನು ನಿರ್ವಹಿಸಿವೆ. ಭಾರತೀಯ ಬ್ಯಾಂಕುಗಳು ನೀಡಿದ ಸಾಲ ಉತ್ಪಾದನೆಯ ಮೂಲಕ ಪ್ರತಿಫಲಿಸಿಲ್ಲ. ಎಂದರೆ, ಉತ್ಪಾದನೆಯ ಪ್ರಮಾಣ ನೀಡಿದ ಸಾಲದ ಪ್ರಮಾಣಕ್ಕೆ ಅನುಗುಣವಾಗಿಲ್ಲ.

ಕೃಷಿ ಸಾಲ ನೀಡಿಕೆ, ನಿರ್ವಹಣೆ, ವಿಧಿವಿಧಾನಗಳನ್ನು ರೂಪಿಸಲು ಅನೇಕ ಸಮಿತಿಗಳು ರಚನೆಗೊಂಡವು. ಸಮಿತಿಗಳ ಶಿಫಾರಸುಗಳು ಜಾರಿಗೆ ಬಂದವು. ಕೃಷಿ ಸಾಲ ನೀಡಿಕೆ ಸಾಕಷ್ಟು ಸರಳ ಹಾಗು ರೈತ ಸ್ನೇಹಮಯಿಯಾಗಿದ್ದರೂ ತೃಪ್ತಿಕರವಾಗಿಲ್ಲ. ಇದರ ಕಾರಣ ತಿಳಿಯಲು ಗುಪ್ತ ಸಮಿತಿ ರಚನೆಯಾಯಿತು. ಗುಪ್ತ ಸಮಿತಿಯ ಶಿಫಾರಸುಗಳ ಕಿರು ಪರಿಚಯವೇ ಈ ಲೇಖನದ ಆಶಯ.

ಶಿಫಾರಸುಗಳು

1 ಕೃಷಿ ಸಾಲಕ್ಕಾಗಿ ತೆಗೆದುಕೊಳ್ಳುವ ಒಪ್ಪಂದ ಪತ್ರ ಹಾಗು ಇತರ ದಾಖಲೆಗಳು ಸಂಕೀರ್ಣವಾಗಿವೆ. ಭಾರತೀಯ ಸ್ಟೇಟ್ ಬ್ಯಾಂಕ್ ಮಾದರಿಯಲ್ಲಿ, ಬೇರೆ ಬ್ಯಾಂಕುಗಳು ಅವುಗಳನ್ನು ಸರಳೀಕರಿಸಲು ಆಲೋಚಿಸಬೇಕು.

2 ಕೃಷಿ ಸಾಲ ಮೌಲ್ಯಾಂಕವು ಸಾಲಗಾರನ ಆದಾಯದ ಅರಿವಿನ ಮೇಲೆ ನಿರ್ಧಾರವಾಗಬೇಕು. ಸಾಲಗಾರ ತನ್ನ ಸಾಲವನ್ನು ಹಿಂದೆ ನಿರ್ವಹಿಸಿದ ರೀತಿ, ಅವನ ಶಕ್ತಿ, ತಾಂತ್ರಿಕ ಸಾಧ್ಯತೆ. ವಿಶ್ವಾಸಾರ್ಹತೆ, ಉದರಿ ಪರಿಗಣನೆಗೆ ಮೂಲ ಅಂಶಗಳಾಗಬೇಕು.

3 ಸಾಲದ ಶೀಘ್ರ ವಿಲೆವಾರಿಗೆ, ಅಂದರೆ ಶೇ. 90ರಷ್ಟು ವಿಲೆವಾರಿ ಶಾಖೆಯಲ್ಲಿ ಸಾಧ್ಯವಾಗುವಂತೆ, ಶಾಖಾ ವ್ಯವಸ್ಥಾಪಕರ "ಸಾಲ ಮಂಜೂರಾತಿ" ಅಧಿಕಾರದ ವ್ಯಾಪ್ತಿ ಹೆಚ್ಚು ಮಾಡುವಲ್ಲಿ ಬ್ಯಾಂಕುಗಳು ತಮ್ಮ ನಿಯಮಾವಳಿಗಳಲ್ಲಿ ಮಾರ್ಪಾಡು ಮಾಡಿಕೊಳ್ಳಬೇಕು.

4 ರೈತರ ಉತ್ಪಾದನೆಯ ಖರ್ಚು, ಮನೆಯ ಖರ್ಚು, ಸುಗ್ಗಿ ನಂತರದ ಖರ್ಚುಗಳನ್ನು ಅಲ್ಪಾವಧಿ ಸಾಲದ ಮಿತಿಯನ್ನು ನಿರ್ಧರಿಸುವಾಗ ಗಣನೆಗೆ ತೆಗೆದುಕೊಳ್ಳಬೇಕು. ಸಾಲದ ಮರುಪಾವತಿ ಕಾಲಮಿತಿಯನ್ನು ನಿರ್ಧರಿಸುವಾಗ, ಇಡೀ ಕುಟುಂಬದ ಆದಾಯವನ್ನು ಪರಿಗಣಿಸಿ ನಿರ್ಧರಿಸಬೇಕು.

5 ಕೃಷಿ ಸಾಲವನ್ನು ಸಂಯುಕ್ತ ಅವಧಿ ಸಾಲವಾಗಿ ನೀಡಬೇಕು. ಮೊದಲು ಒಂದು ವರ್ಷದ ಅವಧಿಗೆ ನೀಡಿ ಆಮೇಲೆ ಅವಧಿ ವಿಸ್ತರಿಸಬೇಕು. ಸಾಲಗಾರ ತನ್ನ ಸಾಲದ ಖಾತೆಯನ್ನು ವರ್ಷಕ್ಕೆ ಒಂದು ಬಾರಿ ಜಮಾ ಶಿಲ್ಕಿಗೆ ತರಬೇಕು. ಜಮಾಶಿಲ್ಕಿಗೆ ಬ್ಯಾಂಕು ಬಡ್ಡಿ ನೀಡಬೇಕು (ಋಣ ಶಿಲ್ಕಿದ್ದಾಗ ಬಡ್ಡಿ ಹಾಕುವಂತೆ).

6 ಅರ್ಜಿಗಳನ್ನು ಮೇಲ್ಕಂಡ ಸಾಲಕ್ಕೆ ಪೂರಕವಾಗುವಂತೆ ರಚಿಸಬೇಕು. ಅದರಲ್ಲಿ "ವಿನಿಯೋಜನಾ ಉಪರಿಗೆ ಸಂಬಂಧಿಸಿದಂತೆ" ಭಾರತೀಯ ರಿಸರ್ವ್ ಬ್ಯಾಂಕು ಒಂದು ಸಮಿತಿಯನ್ನು ರಚಿಸಿ, ಹೊಸ ನಮೂನೆ ಅರ್ಜಿಗಳನ್ನು ರಚಿಸಲು ತಿಳಿಸಬೇಕು.

7 ಸಣ್ಣಪುಟ್ಟ ಅಲ್ಪಾವಧಿ ವಿನಿಯೋಜನೆಗಳನ್ನು ಸಂಯುಕ್ತ ಅವಧಿ ಸಾಲದೊಳಗೆ ಅಳವಡಿಸಬೇಕು. ದೊಡ್ಡ ಯೋಜನೆಯ

ವಿನಿಯೋಗಕ್ಕೆ ಬೇರೆ ಸಾಲವನ್ನು ಕೊಡಬೇಕು. ಈ ಸಾಲ ನೀಡುವಾಗ ದೀರ್ಘಾವಧಿ ಸಾಲದ ಪ್ರಕ್ರಿಯೆಯನ್ನು ಅನುಸರಿಸಬೇಕು. ದೀರ್ಘಾವಧಿ ಸಾಲವನ್ನು ನೀಡುವಾಗ (ಅಮೂರ್ತವಾದ) ಭವಿಷ್ಯನಿಧಿ ಹರಿವು ತಃಖ್ತೆಗಿಂತ ಸಂಬಂಧಿಸಿದ ಕೃಷಿ ಆಧಾರಿತ ಚಟುವಟಿಕೆಯ ಲಾಭಪ್ರದತೆಯ ಮೇಲೆ ಒತ್ತು ಕೊಡಬೇಕು.

8 ರೈತರ ಕೈಯಲ್ಲಿ ಸುಗ್ಗಿಯ ಕಾಲದಲ್ಲಿ ನಗದು ಸಮೃದ್ಧವಾಗಿರುತ್ತದೆ. ಆಗ ರೈತರು ಅದನ್ನು ಚಿನ್ನ, ಜಮೀನಿನ ಮೇಲೆ ವಿನಿಯೋಗಿಸುತ್ತಾರೆ. ಮಾರುಕಟ್ಟೆಯ ಏರಿಳಿತದಲ್ಲಿ ರೈತರು ನಷ್ಟಸಂಭಾವ್ಯತೆಗೆ ಒಳಗಾಗುತ್ತಾರೆ. ಇದನ್ನು ಪರಿಹರಿಸಲು ಬ್ಯಾಂಕುಗಳು ದ್ರವತ್ವವಿರುವ ಉಳಿತಾಯ ವ್ಯವಸ್ಥೆಯನ್ನು (ಯೋಜನೆಯನ್ನು) ಪ್ರಾರಂಭಿಸಬೇಕು. ಇದು ಸಾಲ ನೀಡಿಕೆಯ ಒಂದು ಭಾಗವಾಗಬೇಕು. ರೈತರ ಉಳಿತಾಯಕ್ಕೆ ತಕ್ಕ ಬಡ್ಡಿ ನೀಡಬೇಕು.

9 ಸಾಲ ನೀಡಿಕೆಯ ಪ್ರಮಾಣವನ್ನು ನಿರ್ಧರಿಸುವ ಈಗಿನ ರೀತಿಯನ್ನು ಕೈಬಿಡಬೇಕು. ಸಾಲ ನಿರ್ಧರಿಸುವ ಈಗಿನ ಪದ್ಧತಿ ತೃಪ್ತಿಕರವಾಗಿಲ್ಲ. ಬೆಳೆ ಸಾಲದ ಪ್ರಮಾಣ ಒಂದು ಘಟಕದ ಮೌಲ್ಯ ನಿರ್ಧಾರ ರೀತಿಗಳು ವಿರೂಪಗೊಂಡಿವೆ. ಬ್ಯಾಂಕುಗಳು ಕೃಷಿಸಾಲ ನೀಡಿಕೆಯಲ್ಲಿ ಸಾಕಷ್ಟು ಅನುಭವ ಪಡೆದುಕೊಂಡಿರುವುದರಿಂದ, ಅವು ಆವಶ್ಯಕತೆಗಳಿಗೆ ತಕ್ಕಂತೆ ಬೆಳೆ ಸಾಲದ ಪ್ರಮಾಣ, ಘಟಕದ ಮೌಲ್ಯ ನಿರ್ಧರಿಸಬೇಕು.

10 ಕೃಷಿಸಾಲವನ್ನು ನಗದು (ಪ್ರತ್ಯಕ್ಷ) ಹಾಗು ಪರೋಕ್ಷ ಭಾಗವಾಗಿ ನೀಡುತ್ತಿರುವುದರಿಂದ, ರೈತರಿಗೆ ತಮ್ಮ ಅಭಿಲಾಷೆಯಂತೆ ಕೊಳ್ಳುವ ಆಯ್ಕೆ ಇಲ್ಲದಂತೆ ಮಾಡಿದೆ. ರೈತ ಸುಳ್ಳು ರಶೀತಿಗಳನ್ನು ಕೊಡುವಂತೆ ಮಾಡಿದೆ. ಬ್ಯಾಂಕು ಹಾಗು ರೈತರ ನಡುವೆ ನಂಬಿಕೆಯನ್ನು ಉಂಟುಮಾಡುವಲ್ಲಿ ನೆರವಾಗುವ ಸಾಲವನ್ನು ನಗದಾಗಿ ನೀಡುವ ಕ್ರಮ ಜಾರಿಗೆ ತರಬೇಕು. ಪರೋಕ್ಷ ಭಾಗ ರದ್ದಾಗಬೇಕು.

11 ಕಾಲ ವ್ಯಯಕ್ಕೆ ಕಾರಣವಾಗುವ "ಬೇಬಾಕಿ ಪತ್ರ" ತರುವಂತೆ ಹೇಳುವ ಪರಿಪಾಟ ಬಿಡಬೇಕು. ಇದು ಅನಾವಶ್ಯಕ. ಸಾಲಗಾರನ ಹಳೆಯ ಖಾತೆಯ ನಿರ್ವಹಣೆಯ ಆಧಾರದ ಮೇಲೆ "ಬೇಬಾಕಿ ಪತ್ರ" ಕೇಳುವ ಆಯ್ಕೆಯನ್ನು ಆಯಾ ಬ್ಯಾಂಕಿಗೆ ಬಿಡಬೇಕು.

12 ಬಾಕಿ ಮರುಪಾವತಿಯಲ್ಲಿ ಆಡಳಿತ ಹಾಗು ಕಾನೂನಿಗೆ ಸಂಬಂಧಿಸಿದ ವಿಷಯಗಳಿವೆ. ಇದರ ಪ್ರಕಟಣೆ ಹಾಗೂ ಜಾಹೀರಾತಿನ ಆವಶ್ಯಕತೆಯಿದೆ. ಸರಕಾರೀ ಸಾಲ ವಸೂಲಾತಿಗಾಗಿ ಒಂದು ವಿಶೇಷ ತಂಡವನ್ನು ರಚಿಸಬೇಕು. ಬ್ಯಾಂಕುಗಳು ಸಂಭಾವ್ಯ ಸಾಲಗಾರರಿಗೆ ಸಾಲ ನೀಡುತ್ತವೆ ಎನ್ನುವುದನ್ನು ಜಾಹಿರಾತಿನ ಮೂಲಕ ಪ್ರಚಾರ ಮಾಡಬೇಕು. ನಿಧಿ ಪುನರಾವರ್ತನೆಯಿಲ್ಲದೆ, ಬರೀ ಯಾಂತ್ರಿಕ ಸಾಲ ನೀಡಿಕೆಯಿಂದ ರೈತ ಹಾಗು ಬ್ಯಾಂಕುಗಳ ನಡುವೆ ದೀರ್ಘಕಾಲದ ಸಂಬಂಧ ಸೃಷ್ಟಿಸಲು ಸಾಧ್ಯವಾಗುವುದಿಲ್ಲ.

13 ಶಾಖಾ ವ್ಯವಸ್ಥಾಪಕರು ಬಾಕೀದಾರರ ಪಟ್ಟಿಯನ್ನು ಯಾವಾಗಲೂ ಇಂತೇದಿಸಿ (update) ಇಟ್ಟುಕೊಂಡಿರಬೇಕು. ಕ್ಲುಪ್ತಸಮಯಕ್ಕೆ ಸಾಲ ಮರುಪಾವತಿ ಮಾಡಿದವರಿಗೆ ಪ್ರೋತ್ಸಾಹಕರ ಸವಲತ್ತುಗಳನ್ನು ನೀಡುವ ಕ್ರಮ ಜಾರಿಯಾಗಬೇಕು. ಇದು ಬಡ್ಡಿದರ ಕಡಿಮೆ ಮಾಡುವ ಮತ್ತಿತರ ಸೌಲಭ್ಯ ಹಾಗು ಸವಲತ್ತುಗಳನ್ನು ಒಳಗೊಂಡ ಯೋಜನೆಗಳನ್ನು ರೂಪಿಸಲು ಆಲೋಚಿಸಬೇಕು. ರೈತರ ಉಳಿತಾಯದ ಹಣಕ್ಕೆ ಒಳ್ಳೆಯ ಬಡ್ಡಿ ನೀಡಬೇಕು.

14 ಕೃಷಿ ಸಾಲಕ್ಕೆ ಸ್ಟಾಂಪ್ ಶುಲ್ಕ ತೆಗೆದು ಹಾಕಬೇಕು.

15 ಹಳ್ಳಿಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಆಸ್ತಿ ವರ್ಗವಾದಾಗ ಅಧಿಕೃತ ದಾಖಲೆಗಳಿರುವುದಿಲ್ಲ. ಸರ್ಕಾರ ನೀಡಿದ ಪುಸ್ತಕದಲ್ಲಿ ಅಧಿಕೃತ ವಿವರಣೆಗಳಿದ್ದಲ್ಲಿ ಅದನ್ನೆ ಅಧಿಕೃತ ದಾಖಲೆಯೆಂದು ಪರಿಗಣಿಸಬೇಕು. ಅದರ ಮೇಲೆ 'ಸಾಮ್ಯ ಅಡಮಾನ' ಸೃಷ್ಟಿಸಲು ಅವಕಾಶ ನೀಡಬೇಕು.

16 ಆಧಾರದ ಮೌಲ್ಯವು ಸಾಲಕ್ಕೆ ಪೂರಕವಾಗಬೇಕು. ಹೆಚ್ಚು ಆಧಾರ ಹಾಗು ಖಾತ್ರಿ ಕೇಳುವ ಅಭ್ಯಾಸವನ್ನು ಪ್ರೋತ್ಸಾಹಿಸಬಾರದು.

17 ಸ್ವಭಾಗ ಹಾಗು ಆಧಾರವನ್ನು ರಿಸರ್ವ್ ಬ್ಯಾಂಕ್ ನಿರ್ಧರಿಸಬಾರದು. ಅದನ್ನು ಆಯಾ ಬ್ಯಾಂಕುಗಳ ವಿವೇಚನೆಗೆ ಬಿಡಬೇಕು.

18 ವಿಮೆ ಮಾಡುವುದನ್ನು ಸಾಲಗಾರನ ಇಷ್ಟಕ್ಕೆ ಬಿಡಬೇಕು ಆದರೆ ಅದು ಶಾಸನಬದ್ಧ ಆವಶ್ಯಕತೆಗೆ ಅನುಗುಣವಾಗಿರಬೇಕು.

19 ಪಾರದರ್ಶಕತೆಗಾಗಿ, ರೈತರಿಗೆ ಸಾಲದ ವಿವರ, ಅದಕ್ಕೆ ಹಾಕುವ ವೆಚ್ಚ, ಬಡ್ಡಿ ಇತರೆ ಖರ್ಚುಗಳ ವಿವರ, ಬಡ್ಡಿಯನ್ನು ಹಾಕುವ ಅಂತರದ ವಿವರ, ಸುಸ್ತಿ ಬಡ್ಡಿಯಾಗುವ ವಿವರಗಳನ್ನು ಪ್ರಕಟಿತ ರೀತಿಯಲ್ಲಿ ನೀಡಬೇಕು.

20. ಸೇವಾಕ್ಷೇತ್ರ ಅಭಿಗಮನದ ಹಳ್ಳಿಗಳನ್ನು ಸಂದರ್ಶಿಸಲು ಆಂತರಿಕ ಮೇಲ್ವಿಚಾರಣೆಯಲ್ಲಿ ಅವಕಾಶವಿರಬೇಕು. ಆ ಸಂದರ್ಭದಲ್ಲಿ ಗ್ರಾಮಸಭೆ ನಡೆಸಿ, ಅವರ ಕಷ್ಟ ಹಾಗೂ ತೊಂದರೆಗಳನ್ನು ಅಂದಾಜು ಮಾಡಬೇಕು. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಗ್ರಾಮಗಳಿಗೆ ಅನಿರೀಕ್ಷಿತ ಭೇಟಿ ನೀಡಬೇಕು. ಇದರಿಂದ ಕ್ಷೇತ್ರ ಮಟ್ಟದ ಪರಿಸ್ಥಿತಿ ಅವರಿಗೆ ಅರ್ಥವಾಗುತ್ತದೆ.

21 ಶಾಖಾ ವ್ಯವಸ್ಥಾಪಕನ ಬಹುಪಾಲು ಸಮಯ ಪರತ ಮಾಹಿತಿಗಳನ್ನು ತಯಾರಿಸುವುದರಲ್ಲೇ ಕಳೆದುಹೋಗುತ್ತದೆ. ಈಗಿನ ಅನೇಕ ರೀತಿಯ ಪರತ ಮಾಹಿತಿಗಳನ್ನು ಕಡಿಮೆ ಮಾಡಬೇಕು. ಇದರಲ್ಲಿ ಬ್ಯಾಂಕ್ ಆಫ್ ಬರೋಡ ಅನುಸರಿಸುತ್ತಿರುವ ರೀತಿಯನ್ನು ಉದಾಹರಣೆಯಾಗಿ ಇಟ್ಟುಕೊಳ್ಳಬೇಕು.

22 ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ನೈತಿಕಮಟ್ಟ ಕುಸಿದಿದೆ. ಕೆಳಮಟ್ಟದಲ್ಲಿ ಬದ್ಧತೆಗಳಿಲ್ಲ. ಅವರ ಧ್ಯೇಯಗಳು ನಿಶ್ಯಕ್ತವಾದವು.

23 ಗ್ರಾಮೀಣ ಶಾಖೆಯಲ್ಲಿ ಕೆಲಸ ಮಾಡಲೇಬೇಕು ಎನ್ನುವ

ಅನಿವಾರ್ಯತೆಯನ್ನು ತೆಗೆದುಹಾಕಬೇಕು. ಬ್ಯಾಂಕಿನ ಅಗತ್ಯಕ್ಕೆ ತಕ್ಕಂತೆ ಗ್ರಾಮೀಣ ಶಾಖೆಗಳಿಗೆ ಕೆಲಸಗಾರರನ್ನು ನಿಯಮಿಸುವುದನ್ನು ಆಯಾ ಬ್ಯಾಂಕು ನಿರ್ವಾಹಕರಿಗೆ ಬಿಡಬೇಕು.

24 ಗ್ರಾಮೀಣ ಶಾಖೆಗಳ ಮೌಲ್ಯಾಂಕನ ಮಾಡುವಾಗ, ಠೇವಣಿ ಸಂಗ್ರಹಕ್ಕೆ ನೀಡುವ ಒತ್ತನ್ನು ಬಿಟ್ಟು ಹೊಸ ಗ್ರಾಹಕರ ಲೆಕ್ಕ, ನಗದು ಸಾಲ ನೀಡಿದ ಪ್ರಮಾಣ, ಕೃಷಿಕ್ಷೇತ್ರಕ್ಕೆ ಹರಿದ ಸಾಲದ ಪ್ರಮಾಣ, ಮರುಪಾವತಿಯ ಮಟ್ಟ ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳಾಗಬೇಕು.

25 ಗ್ರಾಮೀಣ ನೌಕರರಲ್ಲಿ ಬದಲಾವಣೆ ತರಲು ಅವರಿಗೆ ಪ್ರೋತ್ಸಾಹಕ ಯೋಜನೆಗಳನ್ನು ಜಾರಿಗೆ ತರಬೇಕು. ವಿದೇಶಕ್ಕೆ ನಿಯೋಗ, ಹೆಸರುವಾಸಿಯಾದ ತರಬೇತಿ ಕೇಂದ್ರಗಳಲ್ಲಿ ತರಬೇತಿ, ಪದೋನ್ನತಿಯಲ್ಲಿ ಪರಿಗಣನೆ ಹಾಗೂ ಅವರು ಕೇಳಿದ ಸ್ಥಳಕ್ಕೆ ವರ್ಗಾವಣೆ ಇತ್ಯಾದಿ. ಇವು ಮಾರ್ಗದರ್ಶಿ ಸೂಚನೆಗಳು ಮಾತ್ರ. ಬ್ಯಾಂಕುಗಳು ತಮ್ಮವೇ ಆದ ಯೋಜನೆಗಳನ್ನು ಆಚರಣೆಗೆ ತರಬಹುದು.

26 ಕೃಷಿಯೇತರ ಚಟುವಟಿಕೆಗಳು: ಇವಕ್ಕೆ ಸಾಲ ಅರಗಿಸಿಕೊಳ್ಳುವ ಶಕ್ತಿ ಇದೆ. ಗ್ರಾಮೀಣ ಕುಟುಂಬಗಳಿಗೆ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಣ್ಣ ಪ್ರಮಾಣದ ದುಡಿಮೆ ಬಂಡವಾಳ ಬೇಕಾಗುತ್ತದೆ. ಈ ನಗದು ಸಾಲವನ್ನು ಅವರಿಗೆ ನೀಡಿ ವಾರ್ಷಿಕ ಇಲ್ಲವೇ ಮಾಸಿಕ ಕಂತುಗಳಲ್ಲಿ ವಸೂಲು ಮಾಡಬೇಕು. ಇದು ಯಶಸ್ವಿಯಾದರೆ ದೀರ್ಘಾವಧಿ ಹಾಗೂ ಹೆಚ್ಚು ಬಂಡವಾಳದ ಸಾಲ ನೀಡಬಹುದು.

27 ಸ್ವಸಹಾಯ ಗುಂಪುಗಳು ಸಾಲ ನೀಡಿಕೆಯಲ್ಲಿ ಅರ್ಥಪೂರ್ಣ ಮಧ್ಯವರ್ತಿಗಳಾಗಬಲ್ಲವು. ಸ್ವಸಹಾಯ ಗುಂಪುಗಳಿಗೆ ಸಾಲ ನೀಡುವ ಆದ್ಯತೆಯನ್ನ ಜಾಹಿರಾತಿನ ಮೂಲಕ ಹೆಚ್ಚು ಪ್ರಚಾರಮಾಡಬೇಕು. ಇದನ್ನು ಜಾರಿಗೊಳಿಸಲು ಶಾಖಾವ್ಯವಸ್ಥಾಪಕರಿಗೆ ತರಬೇತಿ ನೀಡಬೇಕು. ಪ್ರಾದೇಶಿಕ ವ್ಯವಸ್ಥಾಪಕರು ಇದಕ್ಕೆ ಸ್ಪಂದಿಸುವಂತೆ ಮಾಡಬೇಕು. ಈ ರೀತಿಯ ಸಾಲಗಳಿಗೆ ಪೂರಕವಾದ ದಾಖಲೆಗಳನ್ನು ಸಿದ್ಧಪಡಿಸಬೇಕು.

28 ಸಕಾಲದ ಹಾಗು ಆವಶ್ಯಕತೆಗೆ ಅನುಗುಣವಾಗುವಷ್ಟು ಸಾಲ ನೀಡುವಿಕೆ ಕೃಷಿ ಸಾಲ ಹೆಚ್ಚಿಸುವಲ್ಲಿ ಮುಖ್ಯವಾದ ಅಂಶಗಳು. ಸಣ್ಣ ಸಾಲಗಳ ನಿರ್ವಹಣಾ ವೆಚ್ಚ ಹೆಚ್ಚು. ಅದರಿಂದ ಹೆಚ್ಚು ಬಡ್ಡಿ ಬರುವ ದೊಡ್ಡ ಸಾಲಗಳ ಕಡೆ ವ್ಯವಸ್ಥಾಪಕರ ದೃಷ್ಟಿ ಇರುತ್ತದೆ. ಆದ್ದರಿಂದ ಸಹಕಾರಿ ಹಾಗು ಗ್ರಾಮೀಣ ಬ್ಯಾಂಕುಗಳಂತೆ ವಾಣಿಜ್ಯ ಬ್ಯಾಂಕುಗಳು ಸಾಲದ ಮೇಲಿನ ಬಡ್ಡಿಯನ್ನು ತಾವೆ ನಿರ್ಧರಿಸುವ ಅವಕಾಶವಿರಬೇಕು.

29 ಸಹಾಯಧನ ಸಂಬಂಧವುಳ್ಳ ಸಾಲಗಳನ್ನು ಸಮಿತಿ ಪರಿಶೀಲಿಸಿದಾಗ ಕಂಡುಬಂದದ್ದು: ಸಾಲಗಳು ಅತಿ ಶೀಘ್ರ ಸಾಲಗಳಾಗುತ್ತಿವೆ, ಮರುಪಾವತಿ ಶೇ. 30 ಮಾತ್ರ. ಬ್ಯಾಂಕು ತಾನೆ ಆಯ್ಕೆ ಮಾಡಿ ನೀಡಿದ ಸಾಲದ ಮರುಪಾವತಿ ಉತ್ತಮವಾಗಿರುತ್ತದೆ. ಸಹಾಯಧನ ಸಾಲ ಯೋಜನೆಗಳಲ್ಲಿ ಗುರಿ ಮುಖ್ಯವಾಗಿರುತ್ತದೆಯೇ ವಿನಾ ಗುಣಮಟ್ಟವಲ್ಲ. ಈ ಯೋಜನೆಗಳು ಸಫಲವಾಗಿಲ್ಲ.

30 ಬ್ಯಾಂಕುಗಳು ತೊಡಗಿಸಬೇಕಾದ ನಿಬಂಧಗಳು ಶೇ. 63 ರಿಂದ ಶೇ. 37ಕ್ಕೆ ಇಳಿದಿರುವುದರಿಂದ, ಬ್ಯಾಂಕುಗಳಲ್ಲಿ ಸಾಲ ನೀಡಬೇಕಾದ ನಿಧಿ ಶೇ. 37ರಿಂದ 67ಕ್ಕೆ ಏರಿದೆ. ಬ್ಯಾಂಕುಗಳಲ್ಲಿ ಈಗ ಸಾಕಷ್ಟು ದ್ರವತ್ವವಿದೆ. ಕೃಷಿ ಸಾಲದ ಮಟ್ಟ ಶೇ. 18ರಷ್ಟಿರಬೇಕು. ಇದನ್ನು ಮುಟ್ಟಲು ಬ್ಯಾಂಕುಗಳು ಸಾಲ ಮಿತಿಯನ್ನು ದ್ವಿಗುಣಗಳಿಸಬೇಕು. ಕೃಷಿ ಬೆಳವಣಿಗೆಯೇ ಶೇ. 2.1 ಇರುವಾಗ ಶೇ. 18ರ ಮಿತಿ ಮುಟ್ಟುವುದು ಸಾಧ್ಯವಾಗದು. ಮರುಪಾವತಿಯಿಂದ ಸಾಲದ ಮಟ್ಟ ಕಡಿಮೆಯಾದರೆ ಸಾಲ ನೀಡಿಕೆಯೂ ಕಡಿಮೆಯಾಗುತ್ತದೆ.

31 ವಿಶೇಷ ಸಾಲ ಯೋಜನೆ ತಯಾರಿಸಿ ಅದರಂತೆ ಸಾಲ ಮಟ್ಟ ನಿಗದಿಪಡಿಸಬೇಕು. ಕೃಷಿ ಸಾಲದ ಗುಣಮಟ್ಟ ಕಾಪಾಡಬೇಕು, ಹಾಗು ಇದಕ್ಕೆ ನಿಧಿ ಹರಿವು ನಿರಂತರವಾಗಿರಬೇಕು. ಭಾರತೀಯ ರಿಸರ್ವ್ ಬ್ಯಾಂಕು ಪ್ರತಿವರ್ಷ ಕೃಷಿ ಸಾಲದ ಏರಿಕೆಯ ಮಟ್ಟವನ್ನು ಸೂಚಿಸಬೇಕು. ಇದರ ಆಧಾರದ ಮೇಲೆ ಕೃಷಿ ವಿಶೇಷ ಸಾಲ ಯೋಜನೆ ತಯಾರಾಗಬೇಕು. ಇದು ಜಾರಿಗೆ ಬಂದಲ್ಲಿ ಶೇ. 18ರ ಪ್ರಸ್ತುತತೆ ಕಡಿಮೆಯಾಗುತ್ತದೆ.

32 ಸೇವಾಕ್ಷೇತ್ರ ಅಭಿಗಮನದ ಆದೇಶಗಳಲ್ಲಿ ಅನೇಕ ಬದಲಾವಣೆಗಳು ಅಗತ್ಯವಾಗಿವೆ. ಸಾಲಗಾರರಿಗೆ, ಬ್ಯಾಂಕುಗಳಿಗೆ ಬ್ಯಾಂಕು ಹಾಗು ಸಾಲಗಾರನ ಆಯ್ಕೆ ಮಾಡಲು ಅವಕಾಶವಿರಬೇಕು. ಸಾಲಗಾರರು ತಮ್ಮ ಉದರಿ ಅಗತ್ಯಗಳಿಗೆ ತಕ್ಕಂತೆ ವಾಣಿಜ್ಯ ಬ್ಯಾಂಕುಗಳನ್ನು ಆಯ್ಕೆಮಾಡಲು ಸ್ವಾತಂತ್ರ್ಯ ಹೊಂದಿರಬೇಕು. ಹಾಗು ಸಾಲ ನೀಡುವ ಇಷ್ಟಾನಿಷ್ಟಗಳನ್ನು ಬ್ಯಾಂಕುಗಳಿಗೆ ಬಿಡಬೇಕು. ಬ್ಯಾಂಕುಗಳು ಸೇವಾಕ್ಷೇತ್ರದ ಹೊರಗೂ ಸಾಲ ನೀಡಲು ಸ್ವತಂತ್ರರಿರಬೇಕು. ನಿರ್ದೇಶಿತ ಶಾಖೆಗೆ ಆ ಗ್ರಾಮದ ಉದರಿ ಅಗತ್ಯವನ್ನು ಪೂರೈಸುವ ಜವಾಬ್ದಾರಿ ಇರಬೇಕು. ಎಲ್ಲಾ ಗ್ರಾಮಗಳು ಯಾವುದಾದರೂ ಒಂದು ಬ್ಯಾಂಕಿಗೆ, ಅದರ ಸಾಲದ ಅಗತ್ಯಗಳಿಗಾಗಿ ಜೋಡಿಯಾಗಿರಬೇಕು.

33 ಸ್ಥಳೀಯ ಬ್ಯಾಂಕರುಗಳ ಸಂಘ, ಬ್ಲಾಕ್ ಮಟ್ಟದ ಬ್ಯಾಂಕರುಗಳ ಸಮಿತಿ, ಜಿಲ್ಲಾ ಉದರಿ ಸಮಿತಿ ಹಾಗು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಗಳಲ್ಲಿ ನಡೆಯುತ್ತಿರುವ ಚರ್ಚೆ ಬದಲಾಗಬೇಕು. ಗುರಿ ನಿಗದಿ, ಸೇವಾಕ್ಷೇತ್ರ ಯೋಜನೆಗಳ ವಿಚಾರದಿಂದ ಕ್ಷೇತ್ರ ಅಭಿವೃದ್ಧಿ, ಹೊಸ ಯೋಜನೆಗಳ ಅನುಷ್ಠಾನದ ಮೌಲ್ಯಾಂಕ, ಉದರಿ ನೀಡುವ ಹೊಸ ಬಗೆಗಳ ಕಡೆ ಗಮನ ಹರಿಯಬೇಕು.

34 ಕೃಷಿ ಭೂಮಿಯ ಶೇ. 30 ಕೃಷಿಕಾರರು ಬಾಯಿ ಮಾತಿನ ಒಡೆಯರು. ಇವರು ಬ್ಯಾಂಕಿನ ವ್ಯವಸ್ಥೆಯೊಳಗೆ ಬಂದರೆ,

(13ನೇ ಪುಟ ನೋಡಿ)

ಸ್ವಿಸ್ ಬ್ಯಾಂಕಿಂಗ್ ಪಥದಲ್ಲಿ

ಪ್ರೊ. ಸಿ. ಗೋವಿಂದಾಚಾರ್

ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕ, ಆಚಾರ್ಯ ಪಾಠಶಾಲಾ ಕಾಲೇಜು, ಬೆಂಗಳೂರು

ಕಾನೂನಿನ ಕಣ್ಣು ತಪ್ಪಿಸಿ, ಕಾನೂನನ್ನೇ ಜಾರಿಗೊಳಿಸುವವರನ್ನು ತಪ್ಪು ಜಾಡಿನಲ್ಲಿ ಹಚ್ಚಿ, ರಹಸ್ಯ ವ್ಯವಹಾರಗಳನ್ನು ನಡೆಸುತ್ತ ಅಗಾಧ ಲಾಭದ ಕೊಳ್ಳೆ ಹೊಡೆಯುತ್ತಿರುವ ಬ್ಯಾಂಕಿಂಗ್ ಇಂದು ವಿಶ್ವವ್ಯಾಪಿಯಾಗಿದೆ. ಇದರ ನಿಯಂತ್ರಣ ಅಥವಾ ನಿವಾರಣೆ ಬಹುತೇಕ ಅಸಾಧ್ಯ.

ರಹಸ್ಯ ಕಲಮುಗಳನ್ನೊಳಗೊಂಡ ಬ್ಯಾಂಕಿಂಗ್ ಕಾನೂನು ಇಂದು ವಿಶ್ವದಲ್ಲಿ ಗುಪ್ತ ವ್ಯವಹಾರ ಮತ್ತು ಮೋಸಗಳಿಗೆ ಎಡೆಗೊಟ್ಟಿದೆ. ಇದನ್ನು 'ಗೋಪ್ಯ ಬ್ಯಾಂಕಿನ ವಿಶ್ವವ್ಯಾಪೀಕರಣ' ಎನ್ನಬಹುದು. ಗೋಪ್ಯ ಬ್ಯಾಂಕಿಂಗಿನ ಗೀಳು ಸ್ವಿಸ್ ಬ್ಯಾಂಕುಗಳ ಮೌನವ್ರತದ ಫಲವೇ ಆಗಿದೆ. ಮೌನ ಬ್ಯಾಂಕಿಂಗ್ ಪರಂಪರೆ ಸ್ವಿಟ್ಜರ್‌ಲೆಂಡಿನ ಅರ್ಥವ್ಯವಸ್ಥೆಗೆ ಅಂಟಿಕೊಂಡಂತಿದೆ. ಅದು ದೇಶದ ವರಮಾನ ಗಳಿಕೆಗೆ ಪ್ರಮುಖ ಕೊಡುಗೆಯಾಗಿದೆ. ಸ್ವಿಸ್ ಬ್ಯಾಂಕುಗಳ ಗುಪ್ತ ಕಲಾಪಗಳಿಗೆ ಕಾನೂನಿನ ಹೊದಿಕೆ, ರಕ್ಷಣೆ ಹಾಗೂ ಸಂಸತ್ತಿನ ಒಪ್ಪಿಗೆ ಇದೆ. ಕೇವಲ ವಾಣಿಜ್ಯ ಬ್ಯಾಂಕ್ ಕಾರ್ಯ ಒಂದರಿಂದ ಯಾವ ರೀತಿಯಲ್ಲಿ ಸಲೀಸಾಗಿ ಲಾಭದಾಯಕವಾದ ವ್ಯಾಪಾರ ಮಾಡಿ ಯಶಸ್ವಿಯಾಗಬಹುದು ಎಂಬುದನ್ನು ಸ್ವಿಸ್ ಬ್ಯಾಂಕುಗಳು ವಿಶ್ವಕ್ಕೆ ತೋರಿಸಿಕೊಟ್ಟಿವೆ. ಸ್ವಿಸ್‌ಬ್ಯಾಂಕುಗಳ ಪ್ರವೃತ್ತಿಯನ್ನು ಬ್ಯಾಂಕಿಂಗ್ ಪಂಡಿತರು ದೈತ್ಯ ಡಿನೋಸಾರ್ ಮತ್ತು ಪಿರಮಿಡ್‌ಗೆ ಹೋಲಿಸಿರುತ್ತಾರೆ. ಹಿಟ್ಲರ್ ಕಾಲದಿಂದಲೂ ಸೋಲನ್ನೇ ನೋಡದ ಇದು ಒಂದು ಅದ್ವಿತೀಯವಾದ ಉದ್ಯಮವಾಗಿ ನಡೆದು ಬಂದಿದೆ. ಆದರೆ ಕಾಳ್ಗಿಚ್ಚಿನಂತೆ ಇತರ ಪ್ರದೇಶಗಳಿಗೂ ವ್ಯಾಪಿಸಿದೆ. ಲಗ್ಸೆಂಬರ್ಗ್ (ಯೂರೋಪ್), ಕೇಮನ್ ದ್ವೀಪ, ಸೇಂಟ್ ಕಿಟ್ಸ್, ಬರ್ಮುಡ, ಬಹಾಮಾಸ್, ಆಂಟಿಲ್ಸ್, ಟ್ರಿನಿಡಾಡ್, ಟೊಬ್ಯಾಗೊ (ಇವೆಲ್ಲಾ ಅಟ್ಲಾಂಟಿಕ್–ಕೆರೀಬಿಯನ್ ಸಮುದ್ರ–ಮೆಕ್ಸಿಕೊ ಕೊಲ್ಲಿಯ ಮಧ್ಯೆ ಇವೆ), ಆಂಡೋರಾ (ಸ್ಪೇನ್) ಮುಂತಾದ ದೇಶಗಳು ಚುರುಕಾದ ಪಟುಗಳಾಗಿ ಈಗ ಗುಪ್ತ ಬ್ಯಾಂಕಿಂಗ್ ತಾಣಗಳಾಗಿ ಕಣಕ್ಕಿಳಿದಿವೆ. ಸ್ವಿಟ್ಜರ್‌ಲೆಂಡಿನ ನೆರೆ ರಾಷ್ಟ್ರಗಳಾದ ಆಸ್ಟ್ರಿಯಾ, ಲಗ್ಸೆಂಬರ್ಗ್, ಬೆಲ್ಜಿಯಂ ಹಿಟ್ಲರನ ಭಯ ಶಂಕೆಯಿಂದಲೇ ಈ ವ್ಯವಹಾರಗಳಿಗೆ ತಲೆ ಇಟ್ಟುವು. ಈ ದೇಶಗಳಲ್ಲಿ ಕಾಣಬರುವ ರಹಸ್ಯ ಕಲಾಪಗಳು ಬಹುತೇಕ ಕಾರ್ಬನ್ ಪ್ರತಿಗಳಂತೆ ಸ್ವಿಸ್ ಬ್ಯಾಂಕ್ ನಿಯಮಗಳನ್ನೇ ಹೋಲುವುವು.

ಲಗ್ಸೆಂಬರ್ಗ್

ಲಗ್ಸೆಂಬರ್ಗ್ ಬ್ಯಾಂಕುಗಳ ಲಕ್ಷಣಗಳು ಆಶ್ಚರ್ಯ ತರುವಂಥವು : 1 ಕೇಂದ್ರ ಬ್ಯಾಂಕ್ ಇಲ್ಲ. 2 ಆದ್ದರಿಂದ ಬ್ಯಾಂಕುಗಳಿಗೆ ಕಡ್ಡಾಯ ಮೀಸಲು ಹಣ ನಿಯಮವಿಲ್ಲ. 3 ಇಲ್ಲಿಯ ಕಾನೂನು ವ್ಯವಸ್ಥೆ ಫ್ರಾನ್ಸ್‌ನ ನೆಪೋಲಿಯನ್ ಸಂಹಿತೆ ಮತ್ತು ಬೆಲ್ಜಿಯಂ ಕಾನೂನಿನ ವ್ಯವಸ್ಥೆಯ ಆಧಾರ ಹೊಂದಿದೆ. 4 ದೇಶದ ಚಲಾರ್ಥ ಫ್ರಾಂಕ್ ಜೊತೆಗೆ ಬೆಲ್ಜಿಯಂ ಫ್ರಾಂಕುಗಳೂ ಸಹ ವಿಧಿಬದ್ಧ ಹಣವಾಗಿ ಚಾಲನೆಯಲ್ಲಿವೆ. 5 ಬ್ಯಾಂಕುಗಳಲ್ಲಿ 160 ಮಿಲಿಯನ್ ಡಾಲರ್ ವಿದೇಶಿ ಠೇವಣಿ ಇದೆ. ಇದರಿಂದಾಗಿ ವಿಶ್ವದಲ್ಲಿರುವ ಪ್ರಮುಖ ಬ್ಯಾಂಕಿಂಗ್ ಕೇಂದ್ರಗಳ ಪೈಕಿ ಲಗ್ಸೆಂಬರ್ಗ್ 9ನೇ ಸ್ಥಾನ ಗಳಿಸಿದೆ. 6 ವಕೀಲ, ನ್ಯಾಸಧಾರಿ, ಲೆಕ್ಕಿಗ ಅಥವಾ ಯಾವುದೇ ವೃತ್ತಿಪರನಾಗಲಿ ವಿದೇಶಿ ಗ್ರಾಹಕನ ಪರವಾಗಿ ಗುರುತುರಹಿತವಾದ ಖಾತೆಯನ್ನು ಆರಂಭಿಸಬಹುದು. 1989ರಲ್ಲಿ ಬ್ಯಾಂಕಿಂಗ್ ಕಾರ್ಯಾಚರಣೆಯ ಸಂಹಿತೆಯನ್ನು ನವೀಕರಿಸಿ ಬಿಗಿಪಡಿಸಲಾಯಿತು. ಅನಧಿಕೃತವಾಗಿ ಗೋಪ್ಯತೆಯನ್ನು ಬಹಿರಂಗಪಡಿಸುವವನಿಗೆ ಜೈಲುಶಿಕ್ಷೆಯೂ ವಿಧಿತವಾಯಿತು.

ಆಸ್ಟ್ರಿಯಾ

ಆಸ್ಟ್ರಿಯಾದ ಬ್ಯಾಂಕಿಂಗ್ ಕಲಾಪಗಳು ಸ್ವಿಸ್ ಬ್ಯಾಂಕಿನಂತೆ ಇದ್ದರೂ, ವಿಯನ್ನ ಒಪ್ಪಂದದ ಪ್ರಭಾವಕ್ಕೆ ಒಳಗಾಗಿವೆ. ಬಿರುಸಾದ ವ್ಯಾಪಾರ ಕಾಣಸಿಗದು. ದಿ ಕ್ರೆಡಿಟಾ ಸ್ಟಾಲ್ಟ್ ಬ್ಯಾಂಕ್, ಬುಡಾಪೆಸ್ಟ್ ಬ್ಯಾಂಕ್ ಈ ದಿಸೆಯಲ್ಲಿ ಪ್ರಮುಖ ಪಟುಗಳಾಗಿವೆ. ನಿರ್ದಿಷ್ಟ ಪ್ರಶ್ನೆಗಳಿಗೆ ಮಾತ್ರ ಒಂದು ಬಾರಿ ಉತ್ತರ ಕೊಡಲಾಗುವುದು.

ಆಂಟ್‌ವರ್ಪ್ (ಬೆಲ್ಜಿಯಂ) ವಜ್ರವ್ಯಾಪಾರದಲ್ಲಿ ಶ್ರೀಮಂತ ಗ್ರಾಹಕರ ಗೋಪ್ಯತೆಯನ್ನು ಕಾಪಾಡುವುದರ ಮೂಲಕ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸಿವೆ. 1991ರಲ್ಲಿ ಮ್ಯಾಕ್ಸ್ ಫಿಷರ್ ಬ್ಯಾಂಕ್‌ನ ಫೌದ್ ಅಬ್ಬಾಸ್ ಎಂಬ ಶ್ರೀಮಂತ ಗ್ರಾಹಕ ತನ್ನ ನಿಜವಾದ ಗುರುತನ್ನು ಕೊಡದೆ 'ಡಾಮ್‌ಪೆಡ್ರೊ' ಎಂಬ ಕಾಲ್ಪನಿಕ

ಹೆಸರಿನಿಂದ ಖಾತೆ ತೆರೆದು ಅದೇ ಹೆಸರನ್ನು ಎಲ್ಲಾ ಕಾಗದಪತ್ರ ವ್ಯವಹಾರಗಳಲ್ಲಿ ಉಪಯೋಗಿಸಿ ಯಶಸ್ವಿಯಾದ. ಸ್ವಿಸ್ ಬ್ಯಾಂಕು ಗಳಲ್ಲಿಯೂ 'ಲೋಟಸ್', 'ಮಾಂಟ್‌ಬ್ಲಾಂಕ್'ಮುಂತಾದ ಸಂಕೇತ ನಾಮಗಳಿರುವುದನ್ನು ಇಲ್ಲಿ ಸ್ಮರಿಸಬಹುದು. ಅಂದಿನಿಂದ 'ಡಾವರ್ ಪೆಡ್ರೊ' ವ್ಯವಹಾರಗಳಿಂದ ಸುಮಾರು ಒಂದು ಬಿಲಿಯನ್ ಡಾಲರ್ ಗಳಷ್ಟು ಗುಪ್ತ ಹಣ ವ್ಯವಹಾರಗಳು ಜರುಗಿವೆ ಎಂದು ಬೆಲ್ಜಿಯಂ ಪೊಲೀಸ್ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಲಿಕ್ಟೆನ್‌ಸ್ಟೀನ್ (ಸ್ವಿಸ್-ಆಸ್ಟ್ರಿಯಾ ಮಧ್ಯೆ) ಹಾಗೂ ಚಾನಲ್ ದ್ವೀಪಗಳಲ್ಲಿ (ಇಂಗ್ಲಿಷ್ ಚಾನೆಲ್) ವಂಶಪರಂಪರೆಯ ಅಧಿಷ್ಠಾನಗಳ ಮತ್ತು ನಿಗಮ ಸಂಸ್ಥೆಗಳ ಹುಟ್ಟಿನಲ್ಲಿ ಸಂಪೂರ್ಣ ಗೋಪ್ಯತೆಯನ್ನು ಪಾಲಿಸಲು ಬ್ಯಾಂಕುಗಳು ಖಾತರಿ ನೀಡುವುವು. ರಷ್ಯಾದ ಆಶ್ಚರ್ಯ ಸಂಗತಿ ಎಂದರೆ ಸುಮಾರು 200ಕ್ಕೂ ಹೆಚ್ಚು ಬ್ಯಾಂಕುಗಳು ಭೂಗತ ಜಗತ್ತಿನ ಕಳ್ಳಕೂಟದ ನಿಯಂತ್ರಣೆ ಯಲ್ಲಿವೆ. ಸೋವಿಯತ್ ಒಕ್ಕೂಟ ಛಿದ್ರವಾದ ಮೇಲೆ ಅನೇಕ ವಾಣಿಜ್ಯ ಬ್ಯಾಂಕುಗಳು ಹುಟ್ಟಿಕೊಂಡುವು.

ಸೇಂಟ್ ಕಿಟ್ಸ್ ಮತ್ತು ಕೇಮಾನ್ ದ್ವೀಪ ವಿಶ್ವದಲ್ಲಿ 3ನೇ ಸ್ಥಾನ ಗಳಿಸಿದೆ. ಭಾರತಕ್ಕೆ ಇವು ಗೋಚರಿಸಿದ್ದು ವಿ. ಪಿ. ಸಿಂಗರ ಆಳ್ವಿಕೆಯಲ್ಲಿ. ಅಮೆರಿಕಾದಲ್ಲಿ ಭಾರಿ ವ್ಯಾಪಾರ ಮಾಡಿ ದೋಚುವ ಉದ್ದೇಶವುಳ್ಳ ಕೊಲಂಬಿಯಾದ ಮಾದಕ ದೊರೆಗಳಿಗೆ ಪನಾಮ ಕಾಲುವೆ ಹಾಗೂ ಪನಾಮ ಬ್ಯಾಂಕುಗಳು ಒಂದು ಅದ್ಭುತ ಸಾಧನ. ಹಾಂಕಾಂಗ್ ಮತ್ತು ಬರ್ಮುಡಾದಿಂದ ಗುಪ್ತ ಬ್ಯಾಂಕಿಂಗ್ ಬಗ್ಗೆ ಮಾಹಿತಿ ದೊರೆಯುವುದು ಸಾಧ್ಯವೇ ಇಲ್ಲ.

ಹಾಂಕಾಂಗ್

ಹಾಂಕಾಂಗ್ ಕೇವಲ ಬ್ಯಾಂಕಿಂಗ್ ಕ್ಷೇತ್ರ ಮಾತ್ರವಲ್ಲ. ಅದು ಗುಪ್ತ ಹಣಕ್ಕೆ ಸುರಕ್ಷಿತ ತಾಣವೂ ಆಗಿದೆ. ಒಟ್ಟು 182 ಅಧಿಕೃತ ಲೈಸನ್ಸ್ ಪಡೆದಿರುವ ಬ್ಯಾಂಕುಗಳಿವೆ. ಮುಕ್ತ ವ್ಯಾಪಾರ ಕಲಾಪ ಗಳು ಹಾಗೂ ಉನ್ನತ ಮಟ್ಟದ ಉಸ್ತುವಾರಿ ಹಾಂಕಾಂಗ್ ಬ್ಯಾಂಕುಗಳ ಯಶಸ್ಸಿನ ಗುಟ್ಟಾಗಿದೆ. ಹಾಂಕಾಂಗ್ ಹಣಕಾಸು ಪ್ರಾಧಿಕಾರ ಮತ್ತು ಪ್ರತಿಭೂತಿಗಳ ಭವಿಷ್ಯ ವ್ಯವಹಾರಗಳ ಆಯೋಗ ಈ ಯಶಸ್ಸಿನ ಹಿನ್ನೆಲೆಯಲ್ಲಿದೆ. ರಹಸ್ಯ ಕಲಮುಗಳ ನ್ನೊಳಗೊಂಡ ಬ್ಯಾಂಕಿಂಗ್ ಕಾರ್ಯಾಚರಣೆಯ ಸಂಹಿತೆಯನ್ನು ಎಲ್ಲಾ ಬ್ಯಾಂಕುಗಳು ಒಪ್ಪಿ ಅವಕ್ಕೆ ಬದ್ಧವಾಗಿವೆ.

ಸಿಂಗಪುರದಲ್ಲಿ

ವಿಶ್ವದಲ್ಲೇ ಅತಿ ಚುರುಕಾದ, ಬಿಗಿಯಾದ ಕಾನೂನಿನ ಚೌಕಟ್ಟು ಸಿಂಗಪೂರ್‌ನಲ್ಲಿದೆ. ಇದನ್ನು ತಜ್ಞರು 'ದಿ ಲಾಂಗ್ ಆರ್ಮ್ ಆಫ್ ದಿ ಲಾ' ಎಂದು ಕರೆಯುವರು. ಉನ್ನತ ಅಧಿಕಾರ ಸ್ಥಾನ, ಸ್ತರ ಗಳಲ್ಲಿ ಅಪರಾಧಗಳನ್ನು ತಡೆಗಟ್ಟಲು ಸಿಂಗಪೂರ್ ವಾಣಿಜ್ಯ ಕಲಾಪಗಳ ಇಲಾಖೆ ಇದೆ. ಪೂರ್ವ ಏಷ್ಯಾದಲ್ಲಿ 8 ಬಹಳ ಅದೃಷ್ಟ ಸಂಖ್ಯೆ ಎಂದು ಎಲ್ಲರೂ ನಂಬುವರು. ಇದರಡಿಯಲ್ಲೇ ಗುಪ್ತ ವ್ಯವಹಾರಗಳೂ ನಡೆಯುವುದುಂಟು. ಬೇರಿಂಗ್ಸ್ ಸಂಸ್ಥೆಯ ಮುಳುಗಡೆಗೆ ಮೂಲಕಾರಣನಾದ ಬ್ರಿಟನ್ನಿನ ನಿಕ್‌ಲೀಸನ್ ಬಹು ಸಂಖ್ಯೆಯ ಖಾತೆಗಳನ್ನು ಹೊಂದಿದ್ದ. ಇವುಗಳ ಪೈಕಿ 88888 ಸಂಖ್ಯೆಯ ಖಾತೆಯೂ ಒಂದು. ಇದರ ಮೂಲಕ ಅನಧಿಕೃತ, ಗುಪ್ತ ಮತ್ತು ಮೋಸ ವ್ಯವಹಾರಗಳನ್ನು ಮಾಡಿ ಕೊನೆಗೂ ಬ್ರಿಟಿಷ್-ಸಿಂಗಪೂರ್ ಪೊಲೀಸರಿಗೆ ಸಿಕ್ಕಿಬಿದ್ದು ಇಂದು ಜೈಲು ವಾಸ ಅನುಭವಿಸುತ್ತಿದ್ದಾನೆ. ಇವನ ಅವ್ಯವಹಾರಗಳ ಬಗ್ಗೆ ನಮಗೇನೂ ತಿಳಿಯದೆಂದು ಸಂಸ್ಥೆ ಹೇಳಿಕೆಯನ್ನಿತ್ತಿದೆ.

ಪಾಕಿಸ್ತಾನದಲ್ಲಿ

ಪಾಕಿಸ್ತಾನದಲ್ಲಿ ಸ್ವಿಸ್ ಬ್ಯಾಂಕಿಂಗ್ ಪ್ರವೃತ್ತಿ ಉದಾರೀಕರಣದ ಅಂಗವಾಗಿ 1991ರಲ್ಲಿ ರಾಷ್ಟ್ರಾಧ್ಯಕ್ಷರ ಡಿಕ್ರಿಯಿಂದ ಜಾರಿಗೆ ಬಂತು. ವಿದೇಶಿ ವಿನಿಮಯ ನಿಯಂತ್ರಣವನ್ನು ಸಂಪೂರ್ಣವಾಗಿ ತೆಗೆದು ಹಾಕುವುದು, ಸಂಪೂರ್ಣ ಗೋಪ್ಯತೆಯ ಖಾತರಿಯ ಮೇರೆಗೆ ವಿದೇಶಿ ಚಲಾರ್ಥ ಖಾತೆ ತೆರೆಯುವುದು ಇಲ್ಲಿಯ ಪ್ರಮುಖ ಆಕರ್ಷಣೆ. ಇದರ ಪರಿಣಾಮ 1 ಬಿಲಿಯನ್ ಡಾಲರ್ ಪಾಕಿ ಸ್ತಾನಕ್ಕೆ ಒದಗಿತು! ಇದರಲ್ಲಿ ಶೇ. 25ರಷ್ಟು ಸಾಂಸ್ಥಿಕ ಹಣ; ಇನ್ನು ಮಿಕ್ಕವು ಮಾದಕವಸ್ತು ಕಲಾಪದಿಂದ ಹಾಗೂ ತೆರಿಗೆ ಕೊಡದೆ ಬಂದ ಹಣ. ಈ ಸಂದರ್ಭದಲ್ಲೇ ವಿಶ್ವಸಂಸ್ಥೆಯು ಪಾಕಿ ಸ್ತಾನದ ಮಾದಕವಸ್ತು ವ್ಯಾಪಾರವನ್ನು ಆಕ್ಷೇಪಿಸಿ ವಿಯನ್ನಾ ಒಪ್ಪಂದಕ್ಕೆ ಸಹಿ ಹಾಕುವುದರ ಮೂಲಕ ಪಾಕಿಸ್ತಾನವೂ ಬದ್ಧ ದೇಶವಾಗಿದೆ ಎಂದು ಎತ್ತಿ ತೋರಿಸಿತು.

ಶ್ರೀಲಂಕಾ

ಶ್ರೀಲಂಕಾದ 27 ಪ್ರಮುಖ ಬ್ಯಾಂಕುಗಳ ಪೈಕಿ ಶ್ರೀಲಂಕಾ ವಿನಿಯೋಜನ ಬ್ಯಾಂಕ್, ಸಿಲೋನ್ ವಾಣಿಜ್ಯ ಬ್ಯಾಂಕ್, ಸಂಪತ್ ಬ್ಯಾಂಕ್ ಮುಂತಾಗಿ ಒಟ್ಟು 9 ಬ್ಯಾಂಕುಗಳು ಈ ಕ್ಷೇತ್ರದಲ್ಲಿ ಚುರುಕಾಗಿವೆ. ಉದಾರೀಕರಣದ ಅಂಗವಾಗಿ ಬ್ಯಾಂಕ್ ಆಫ್ ಸಿಲೋನ್, ಚೆನ್ನೈ, ಕರಾಚಿ, ಮಾಲಡೀವ್ಸ್, ನ್ಯೂಯಾರ್ಕ್ ಮುಂತಾದ ಪ್ರಮುಖ ಪಟ್ಟಣಗಳಲ್ಲಿ ಶಾಖೆಗಳನ್ನು ತೆರೆಯುವುದರ ಮೂಲಕ ಬಿರುಸಿನ ಪ್ರಚಾರ ಕೈಗೊಂಡು ವಿಶ್ವವ್ಯಾಪಿಯಾಗು ತ್ತಿದೆ.

ಯು.ಎ.ಇ., ದುಬಾಯ್ ಮುಂತಾದ ಕೊಲ್ಲಿ ದೇಶಗಳಲ್ಲಿ ಇಂಥ ರಹಸ್ಯ ತಾಣಗಳನ್ನು ಸ್ಥಾಪಿಸಲು ನಾ ಮುಂದು ತಾ ಮುಂದು ಎಂದು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು, ಬ್ಯಾಂಕು ಗಳು ತೀವ್ರ ಆಸಕ್ತಿ ತೋರಿವೆ. ಯು.ಎ.ಇ.ನಲ್ಲಿ 49 ಬ್ಯಾಂಕುಗಳು (400 ಶಾಖೆಗಳು) ಮತ್ತು 30 ವಿದೇಶಿ ಬ್ಯಾಂಕುಗಳಿವೆ (ಪ್ರತಿ ವಿದೇಶಿ ಬ್ಯಾಂಕಿಗೆ ತಲಾ 8 ಶಾಖೆಗಳಿವೆ).

ಮಾರಿಷಸ್

ಈ ಕ್ರೀಡೆಯಲ್ಲಿ ಮಾರಿಷಸ್ (ಹಿಂದೂ ಮಹಾಸಾಗರ) ಹೊಸ ಪಟು. ಶೇ. 60ರಷ್ಟು ರಾಷ್ಟ್ರೀಯ ವರಮಾನ ಪ್ರವಾಸೋದ್ಯಮದಿಂದಲೇ. "ಶೇ. 1ರಷ್ಟು ಭೂಮಿ, 99ರಷ್ಟು ಸೇವೆ" ಈ ಪ್ರಚಾರ ವಿಶ್ವವನ್ನೇ ಆಕರ್ಷಿಸಿದೆ. ರಹಸ್ಯ ಬ್ಯಾಂಕಿಂಗ್ ಚಟುವಟಿಕೆಗಳಿಗೆ ಒಳ್ಳೆಯ ಬುನಾದಿ ಮತ್ತು ವೃತ್ತಿಪರ ಸೇವಾ ಸೌಲಭ್ಯಗಳಿವೆ. 1992ರ ಸಾಗರೋತ್ತರ ವ್ಯಾಪಾರ ಚಟುವಟಿಕೆಗಳ ಕಾಯ್ದೆಯ 15ನೇ ಕಲಮು ಹಾಗೂ ಅಂತರರಾಷ್ಟ್ರ ಕಂಪೆನಿಯ ಕಾಯ್ದೆ 1994 3ನೇ ಕಲಮಿನ ಪ್ರಕಾರ ಮಾರಿಷಸ್‌ನಲ್ಲಿರುವ ಎಲ್ಲಾ ಸಂಸ್ಥೆಗಳ ಗೋಪ್ಯತೆಯನ್ನು ಕಾಪಾಡುವ ಬ್ಯಾಂಕ್ ಖಾತರಿ ಇದೆ. ಈ ಸಂಸ್ಥೆಗಳ ಖಾತೆ ಪುಸ್ತಕಗಳು ಪರಿವೀಕ್ಷಣೆಗೆ ಒಳಪಡುವುದಿಲ್ಲ. ಮಾರಿಷಸ್‌ನಲ್ಲಿ ಸುಮಾರು 2,000 ವ್ಯಾಪಾರೋದ್ಯಮಗಳಿವೆ.

ಹಗರಣಗಳ ಸರಮಾಲೆ

1997ರಲ್ಲಿ ಚಿಯಾಸ್ಸೋ ಹಗರಣದಿಂದ ಸ್ವಿಸ್ ಬ್ಯಾಂಕ್ ಪ್ರವೃತ್ತಿಗೇ ಜಖಂ ಆಯಿತು. 3ನೇ ಸ್ಥಾನದಲ್ಲಿರುವ ಕ್ರೆಡಿಟ್ ಸ್ವಿಸ್ ಬ್ಯಾಂಕು ಟೆಕ್ಸಾನ್ ಎಂಬ ಸಂಸ್ಥೆಗೆ ಚಿಯಾಸ್ಸೋ ಶಾಖೆಯಿಂದ ವ್ಯಾನುಗಳ ಗುಪ್ತಸ್ಥಳದಲ್ಲಿ (ಪೊಲೀಸರು ಇದನ್ನು ಫಾಲ್ಸ್ ಬಾಟಮ್ ಎಂದು ಕರೆದಿದ್ದಾರೆ) ಕೋಟ್ಯಂತರ ಫ್ರಾಂಕುಗಳನ್ನು ಗುಪ್ತವಾಗಿ ರವಾನಿಸಿತು. ಕ್ರಮೇಣ ಸಂಸ್ಥೆ ಮುಳುಗಿತು. ಬ್ಯಾಂಕಿಗೆ ನಷ್ಟ, ಅವಮಾನ ಎರಡೂ ಆಗಿ ತಲೆ ತಗ್ಗಿಸುವಂತಾಯಿತು. ತಜ್ಞರು ಈ ಹಗರಣವನ್ನು 'ಪಿರಮಿಡ್‌ನಲ್ಲಿ ಬಿರುಕು' ಎಂದು ಟೀಕೆ ಮಾಡಿರುತ್ತಾರೆ. ಇದೇ ಸಂದರ್ಭದಲ್ಲಿ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘ ಇತರ ವಿಶ್ವ ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳು ಸ್ವಿಸ್ ಬ್ಯಾಂಕ್ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸಿ, (ಅ) ಮಾದಕವಸ್ತು ವ್ಯವಹಾರಗಳು ರಹಸ್ಯ ಬ್ಯಾಂಕಿಂಗ್ ಕಾಯ್ದೆಯಿಂದ ಹೊರತಾಗಬೇಕು, (ಆ) ಈ ಅವ್ಯವಹಾರಗಳನ್ನು ಪತ್ತೆಹಚ್ಚುವ ಅಧಿಕಾರಿಗಳಿಗೆ ಬ್ಯಾಂಕ್ ಖಾತೆಗಳನ್ನು ಪರಿವೀಕ್ಷಿಸಲು ಸಂಪೂರ್ಣ ಸ್ವಾತಂತ್ರ್ಯವಿರಬೇಕು ಎಂದು ಒತ್ತಡ ತಂದುವು. ಇದೇ ಸಮಯಕ್ಕೆ ಹಲವಾರು ಹಗರಣಗಳು ಒಂದೊಂದಾಗಿ ಬೆಳಕಿಗೆ ಬಂದುವು:

1 ಅಮೆರಿಕಾ ಷೇರುಪೇಟೆ ಕಾಶಿಯಾದ ವಾಲ್‌ಸ್ಟ್ರೀಟ್‌ನಲ್ಲಿ 1970ರಿಂದಲೇ ಆಂತರಿಕ ಒಳಗುಟ್ಟಿನ ವ್ಯವಹಾರದಿಂದಾಗಿ ಬಿಲಿಯನ್‌ಗಟ್ಟಲೆ ಡಾಲರ್‌ಗಳ ಮಹಾಪೂರ ಸ್ವಿಸ್ ಬ್ಯಾಂಕುಗಳನ್ನು ಸೇರಿತು.

2 ಇದೇ ರೀತಿಯಲ್ಲಿ 80ರ ದಶಕದಲ್ಲಿ ಪಿಜಾರಿಯಾ ಎಂ. ಹೋಟೆಲ್ ಉದ್ಯಮ ಗುಂಪೊಂದು ಮಾದಕವಸ್ತುಗಳ ಉತ್ಪಾದಕರ ಕೊಟಕ್ಕೆ ದಳ್ಳಾಳಿಯಾಗಿ ಯಶಸ್ವಿಯಾಗಿ ಕೆಲಸ ಮಾಡಿತು.

3 1983ರಲ್ಲಿ ಅಮೆರಿಕಾದಿಂದ 30 ಬಿಲಿಯನ್ ಡಾಲರ್ ಕಳ್ಳ ಹಣ ಸ್ವಿಸ್ ಬ್ಯಾಂಕ್ ಸೇರಿ ಕ್ರಮೇಣ ಅದು ಸಾಚಾ ಹಣವಾಗಿ ಪರಿವರ್ತಿಸಲ್ಪಟ್ಟು ಹಲವಾರು ಯೋಜನೆಗಳಿಗೆ ಸಾಲಗಳ ರೂಪದಲ್ಲಿ ಉಪಯೋಗಿಸಲಾಯಿತು. ಈ (ಅ)ವ್ಯವಹಾರವನ್ನು 'ಮನಿ ಲಾಂಡರಿಂಗ್' ಎಂದು ಕರೆಯುವರು. ಈ ದಿಸೆಯಲ್ಲಿ ಸ್ವಿಸ್ ಜೊತೆಗೆ ಬರ್ಮುಡಾ ದೇಶವೂ ಶಾಮೀಲಾಗಿದೆ ಎಂದು ಅಮೆರಿಕಾ ಸೆನೆಟ್ ಸಮಿತಿ ವರದಿ ಮಾಡಿತ್ತು.

4 ಎರಡನೆ ಮಹಾಯುದ್ಧದಲ್ಲಿ ನಾಜಿಗಳು ಯಹೂದಿಗಳಿಂದ ಹಾಗೂ ಸೋತು ಶರಣಾದ ಹನ್ನೊಂದು ದೇಶಗಳ ಕೇಂದ್ರ ಬ್ಯಾಂಕುಗಳಿಂದ ಲೂಟಿ ಹೊಡೆದ 500 ಮಿಲಿಯನ್ ಡಾಲರ್ ಬೆಲೆಯುಳ್ಳ ಚಿನ್ನ ಸ್ವಿಸ್ ಬ್ಯಾಂಕ್ ತಿಜೋರಿ ಸೇರಿತ್ತು. ಕಳೆದ ವರ್ಷ ಆಸ್ಟ್ರೇಲಿಯಾ, ಹಾಲೆಂಡ್, ಸ್ವಿಟ್ಜರ್‌ಲ್ಯಾಂಡ್ ಮುಂತಾದ ದೇಶಗಳ ಕೇಂದ್ರ ಬ್ಯಾಂಕುಗಳು ತಮ್ಮಲ್ಲಿದ್ದ ಚಿನ್ನದಲ್ಲಿ ಸ್ವಲ್ಪ ಚಿನ್ನವನ್ನು ವಿಶ್ವಪೇಟೆಗಳಲ್ಲಿ ಮಾರಲು ಹೊರಟಾಗ ಬಚ್ಚಿಟ್ಟಿದ್ದ ವಿಷಯ ಬಯಲಾಯಿತು. 'ಹಿಟ್ಲರನ ಸುಗ್ರಿವಾಜ್ಞೆಯನ್ನು ಪಾಲಿಸಲು ನಾವು ಗೋಪ್ಯತೆಯನ್ನು ಪಾಲಿಸಬೇಕಾಗಿ ಬಂತು. ಅದೂ ಅಲ್ಲದೆ ಲೂಟಿ ಹೊಡೆದ ವಿಷಯ ನಮಗೆ ತಿಳಿದಿಲ್ಲ. ನಮಗೆ ಬೇಡವೂ ಬೇಡ. ಸಾಕಷ್ಟು ಆಧಾರಗಳೂ ಇಲ್ಲ' ಎಂದು ಸ್ವಿಸ್ ಬ್ಯಾಂಕುಗಳೇ ಹೇಳಿದುವು.

5 ಇತ್ತೀಚಿನ ವರದಿಗಳ ಪ್ರಕಾರ ಸ್ವಿಸ್‌ನ ಪ್ರಮುಖ ಬ್ಯಾಂಕುಗಳಾದ ದಿ ಕ್ರೆಡಿಟ್ ಸ್ವಿಸ್, ಯೂನಿಯನ್ ಬ್ಯಾಂಕ್ ಮತ್ತು ಸ್ವಿಸ್ ಬ್ಯಾಂಕಿಂಗ್ ನಿಗಮ—ಈ ಮೂರು ಬ್ಯಾಂಕುಗಳಲ್ಲಿ ಎರಡನೆ ಮಹಾಯುದ್ಧದಲ್ಲಿ ಬಚ್ಚಿಟ್ಟಿದ್ದ 500 ಮಿಲಿಯನ್ ಡಾಲರ್‌ಗಳ ಸುಪ್ತ ಖಾತೆಯೊಂದು ಹಾಲೋಕಾಸ್ಟ್ ಎಂಬ ಬದುಕುಳಿದ ಸಂಸ್ಥೆ ಹೂಡಿದ ದಾವೆಯಿಂದ ಬಹಿರಂಗವಾಯಿತು. "ಇದರಲ್ಲಿ ನಮ್ಮ ತಪ್ಪೇನಿಲ್ಲ. ನಮ್ಮ ರಹಸ್ಯದ ವ್ಯಾಪ್ತಿ ಗ್ರಾಹಕನ ಮರಣಾನಂತರವೂ ಮುಂದುವರಿಯುವುದು ಹಾಗೂ ನಿಷ್ಕ್ರಿಯ ಖಾತೆಗಳಿಗೂ ಅನ್ವಯಿಸುವುದು" ಎಂದು ಬ್ಯಾಂಕುಗಳು ಸಮರ್ಥಿಸಿಕೊಂಡುವು.

ಸುಧಾರಣೆ

ವಿಶ್ವದ ಎಲ್ಲೆಡೆಗಳಿಂದ ಮೇಲಿಂದಮೇಲೆ ಒತ್ತಡಗಳು ಎರಗಿ ಬರಲು ಸ್ವಿಸ್ ಬ್ಯಾಂಕಿಂಗ್‌ನ ಬಿಗಿಯಾದ ಕಾನೂನಿನ ಚೌಕಟ್ಟನ್ನು ಸಡಿಲಗೊಳಿಸಲಾಯ್ತು. ಪ್ರಥಮ ಬಾರಿಗೆ ಸುಧಾರಣೆ ಮೂಡಿಬಂತು. ಅಕ್ರಮವಾಗಿ ಬಂದ ಹಣ (ಲೂಟಿ, ದೋಚಿದ್ದು, ಕಳ್ಳಸಾಗಣೆ, ದೇಶಭ್ರಷ್ಟರು ತಂದದ್ದು) ಅಪರಾಧಹಣವೆಂದು ಪರಿಗಣಿಸಲಾಯಿತು. ಕಾಲ್ಪನಿಕ ಹೆಸರುಗಳ ಖಾತೆ, ಸಂಖ್ಯಾಖಾತೆ ತೆರೆಯುವುದು ನಿಷಿದ್ಧ. ಆಯಾ ದೇಶದ ಸಂಸತ್ತಿನಿಂದ ಅಂಗೀಕರಿಸಲ್ಪಟ್ಟ ಪ್ರಥಮ ಮಾಹಿತಿ ಪ್ರಕಾರ ಗ್ರಾಹಕನ ಬಗ್ಗೆ ಮಾಹಿತಿಯನ್ನು ಏಕಾಂತದಲ್ಲಿ ಕೊಡಲಾಗುವುದು. ಮಾಹಿತಿ ಪಡೆಯುವ ಸಲುವಾಗಿ ಭಾರತ, ಅಮೇರಿಕಾ ಹಾಗೂ ಇತರ ರಾಷ್ಟ್ರಗಳು ಸ್ವಿಸ್,

ಬ್ಯಾಂಕುಗಳ ಜೊತೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದುದರಿಂದಾಗಿ ಕಳ್ಳ ಹಣ ಸೇರುವುದು ಅನಾಮಿಕ ಖಾತೆಯಾಗಲಿ ಕಾಲ್ಪನಿಕ ಖಾತೆಯಾಗಲಿ ಬ್ಯಾಂಕುಗಳನ್ನು ತೆರೆಯುವುದು ಅಸಾಧ್ಯ. ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲಾ ಎಂಬಂತೆ ಸ್ವಿಸ್ ಬ್ಯಾಂಕ್ ಅನುಯಾಯಿಗಳೂ ಸುಧಾರಣೆಗಳನ್ನು ತಂದುವು.

ಸುರಕ್ಷಿತವಾದ ಗುಪ್ತ ಹಣ ತಾಣಗಳನ್ನು ಹುಡುಕುತ್ತಾ ಅನೇಕ ವಜ್ರ ವ್ಯಾಪಾರಿಗಳು ಬೆಲ್ಜಿಯಂನಿಂದ ಕಾಲ್ತೆಗೆಯುತ್ತಿದ್ದುದನ್ನು ಬೆಲ್ಜಿಯಂ ಪೊಲೀಸರು ಗುರುತಿಸಿ ಒಂದೊಂದಾಗಿ ಪ್ರಕರಣಗಳನ್ನು ಪತ್ತೆ ಹಚ್ಚಿದರು. ಇವುಗಳಲ್ಲಿ ಡಾಮ್‌ಪೆಡ್ರೋ ಹಗರಣವೂ ಒಂದು. ಇದರಲ್ಲಿದ್ದ ಅಲ್ಲಿಯ ಬ್ಯಾಂಕ್ ಅಧಿಕಾರಿಗಳು ಆಂಟ್‌ವರ್ಪ್ ಶಾಖೆಯ ಭಾರತೀಯ ಸ್ಟೇಟ್ ಬ್ಯಾಂಕಿನ ಟಿ.ಎಮ್.ಎನ್. ಸಿಂಗ್ ಎಂಬ ಅಧಿಕಾರಿಯೂ ಶಿಕ್ಷೆ ಅನುಭವಿಸಿದರು. ಪೊಲೀಸರು ಫೌದ್ ಅಬ್ಬಾಸನನ್ನು ಇನ್ನೂ ಹುಡುಕುತ್ತಿದ್ದಾರೆ. ರಹಸ್ಯ ಕಲಮುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ಬ್ಯಾಂಕು ಖಾತೆಗಳಲ್ಲಿ ಇರುವ ಗ್ರಾಹಕರ ಹೆಸರು ಮತ್ತು ವಿಳಾಸವುಳ್ಳ ಗಣಕೀಕರಣದ ಪಟ್ಟಿಯನ್ನು ಕಡ್ಡಾಯವಾಗಿ ಕೊಡಬೇಕೆಂಬ ಹೊಸ ನಿಯಮ ಜಾರಿಗೆ ಬಂತು.

ಲಗ್ಸೆಂಬರ್ಗ್‌ನಲ್ಲಿ ಗ್ರಾಹಕನ ಅಪರಾಧಗಳನ್ನು ಗುರುತಿಸಿದ ನ್ಯಾಯಾಲಯ ನೀಡಿದ ಆದೇಶವಿದ್ದಲ್ಲಿ ಮಾತ್ರ ಬ್ಯಾಂಕುಗಳು ಗೋಪ್ಯತೆಯನ್ನು ಬಯಲು ಮಾಡಬಹುದು ಎಂಬ ಕಟ್ಟಳೆ ಜಾರಿಗೆ ಬಂತು.

ಭಾರತದಲ್ಲಿ

ಭಾರತದಲ್ಲಿ ಈ ಕೆಳಕಂಡ ಮೂರು ಸಂದರ್ಭಗಳಲ್ಲಿ ಬ್ಯಾಂಕುಗಳು ಗೋಪ್ಯತೆಯನ್ನು ಬಹಿರಂಗಪಡಿಸಲು ಅರ್ಹತೆಯನ್ನು ಹೊಂದಿವೆ :

(1) ಕಾನೂನು/ಕಾಯ್ದೆಗಳು—ಕಂಪನಿ ಕಾಯ್ದೆ 1956, ಗಾರ್ನಿಷಿ ಆದೇಶ ಪುಸ್ತಗಳ ಸಾಕ್ಷ್ಯ ಅಧಿನಿಯಮ ನ್ಯಾಯಾಲಯದ ಆದೇಶ, ಬ್ಯಾಂಕಿಂಗ್ ಕಂಪೆನಿಗಳ (ಸ್ವಾಧೀನ ಮತ್ತು ಉದ್ಯಮ ವರ್ಗಾವಣೆ) ಕಾಯ್ದೆ, ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆಗಳನ್ನು ತಡೆಗಟ್ಟುವ ಕಾಯ್ದೆ. ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆಯ 45ನೆ ಕಲಮ್, ಬ್ಯಾಂಕಿಂಗ್ ನಿಯಮ ಕಾಯ್ದೆಯ 26ನೆ ಕಲಮು, ಉಡುಗೊರೆ ಕಾಯ್ದೆಯ 36ನೆ ಕಲಮು, ಅಪರಾಧ ನಿಯಮ ಸಂಹಿತೆಯ 94-(3)ನೆ ಕಲಮು. 'ಫೆರಾ'ದ ಕಲಮು, ಐಡಿಬಿಐ ಕಾಯ್ದೆಯ 29-1ಎ ಕಲಮುಗಳ ಪ್ರಕಾರ. (2) ಗ್ರಾಹಕನ ಅನುಮತಿ. ಬ್ಯಾಂಕರನು ತನ್ನ ಹಿತಾಸಕ್ತಿಯನ್ನು ಕಾಪಾಡಲು ನೆರೆ ಬ್ಯಾಂಕುಗಳ, ಪತ್ತೇದಾರಿ ಸಂಸ್ಥೆಗಳ, ಉದರಿ ಮಾಪನ ಸಂಸ್ಥೆಗಳ ಹಾಗೂ ಜನಹಿತಪಾಲರ (ಒಂಬುಡ್ಸ್‌ಮನ್) ಕೋರಿಕೆ ಮೇರೆಗೆ.

(3) ಸಾರ್ವಜನಿಕ ಹಿತಾಸಕ್ತಿ : ರಾಷ್ಟ್ರ/ಸಮಾಜ/ ಕೋಮು ವಿರುದ್ಧ ಶಕ್ತಿಗಳು ಪಟ್ಟಭದ್ರಹಿತಾಸಕ್ತಿಗಳು ಬ್ಯಾಂಕುಗಳಲ್ಲಿ ವ್ಯವಹರಿಸುತ್ತಿದ್ದಲ್ಲಿ ಅಥವಾ ಗ್ರಾಹಕನಿಗೂ ಶತ್ರು ರಾಷ್ಟ್ರಗಳಿಗೂ ಸಂಬಂಧವಿದ್ದಲ್ಲಿ, ಭಯೋತ್ಪಾದಕ, ಆತಂಕವಾದಿ ತೀವ್ರವಾದಿಗಳ ಸಂಪರ್ಕವಿದ್ದಲ್ಲಿ ಕಾನೂನಿನಡಿಯಲ್ಲೇ ಹೆಚ್ಚು ಪ್ರಕರಣಗಳನ್ನು ಕಾಣಬಹುದು. ಅನೇಕ ಸಂದರ್ಭಗಳಲ್ಲಿ ಬ್ಯಾಂಕರನು ಇಕ್ಕಟ್ಟಿನ ಪರಿಸ್ಥಿತಿಯಲ್ಲಿರುವನು. ಏಕೆಂದರೆ ಮಾಹಿತಿ ಕೊಡುವಾಗ ಹೆಚ್ಚಾಗಲಿ ಕಡಿಮೆಯಾಗಲಿ ಎರಡೂ ಅಪಾಯಕಾರಿ. ಭಾರತೀಯ ಸ್ಟೇಟ್ ಬ್ಯಾಂಕ್‌ನ ನಗರವಾಲ 60 ಲಕ್ಷ ವಂಚನೆ ಪ್ರಕರಣದಿಂದಾಗಿ ದೂರವಾಣಿ ಮೂಲಕ ಗೋಪ್ಯತೆಯನ್ನು ಬಹಿರಂಗಪಡಿಸುವುದು ಜಾರಿಯಲ್ಲಿಲ್ಲ. ಮನಿ ಲಾಂಡರಿಂಗ್ ಕಾಯ್ದೆ ಗೌಪ್ಯ ಬ್ಯಾಂಕಿಂಗ್ ಸುಧಾರಣೆಯಲ್ಲಿ ಒಂದು ಮೈಲಿಗಲ್ಲಾಗಿದೆ.

ಬದಲಾವಣೆ

ಸುಧಾರಣೆಗಳ ಮೂಲಕ ಸ್ವಿಸ್ ಬ್ಯಾಂಕ್ ಪ್ರವೃತ್ತಿಯಲ್ಲಿ ಭಾರಿ ಬದಲಾವಣೆ ಉಂಟಾಗಿ ವ್ಯಾಪಾರ ವ್ಯವಹಾರದ ಗಾತ್ರ ಮತ್ತು ಗುಣಮಟ್ಟದಲ್ಲಿ ಪರಿಣಾಮ ಉಂಟಾಗಿದೆ. ಅನುಯಾಯಿ ದೇಶಗಳ ಗತಿ ? ಇವೂ ಒಂದು ಬದಲಿ ವ್ಯವಸ್ಥೆಯನ್ನು ಕಂಡುಕೊಂಡಿವೆ. ಇದೇ ಗುಪ್ತತೆರಿಗೆ ತಾಣಗಳು. ಸ್ವಿಸ್ ದೇಶ ಗುಪ್ತತೆರಿಗೆ ಕೊಡದೆ ತಪ್ಪಿಸಿಕೊಳ್ಳುವುದು ಇಲ್ಲಿ ಅಪರಾಧವಲ್ಲ. ವಿದೇಶಿಯೊಬ್ಬನು ವರ್ಷದಲ್ಲಿ 6 ತಿಂಗಳು ಇಲ್ಲಿ ಪ್ರವಾಸಿಯಂತೆ ಜೀವಿಸಬಹುದು. ಆದರೆ ನಿರಂತರವಾಗಿ ನೆಲೆಸಿ ಪ್ರಜೆಯಾಗುವಲ್ಲಿ ಬ್ಯಾಂಕುಗಳು ಆಸಕ್ತಿ ತೋರವು. ಇಂಥ ನಿದರ್ಶನಗಳು ಹೊಸದಾಗಿ ಅವತರಿಸಿದ ತೆರಿಗೆ ತಾಣಗಳಿಗೆ ಒಳ್ಳೆಯ ಹಿನ್ನೆಲೆಯನ್ನು ಕೊಡುವುದಲ್ಲದೆ ಉತ್ತೇಜನಕಾರಿಯಾಗಿವೆ. ಈ ತಾಣಗಳು ಆರ್ಥಿಕ ಉದಾರೀಕರಣದಿಂದಾದವು ಎಂದು ಈ ದೇಶಗಳು ಸಮರ್ಥಿಸಿಕೊಳ್ಳುವುವು. ಈ ದಿಸೆಯಲ್ಲಿ ಸಿಂಗಪೂರ್, ಬಹಾಮಾಸ್, ಥಾಯ್‌ಲ್ಯಾಂಡ್ ಅಮೇರಿಕಾ ಮುಕ್ತ ಅರ್ಥವ್ಯವಸ್ಥೆಯುಳ್ಳ ದೇಶಗಳು. ಆಸ್ಟ್ರಿಯಾ, ಪನಾಮ, ಶ್ರೀಲಂಕಾ ಇನ್ನೂ 39 ದೇಶಗಳು ಅತಿ ಮುಕ್ತ ರಾಷ್ಟ್ರಗಳು ಭಾರತ, ಪಾಕಿಸ್ತಾನ ಮುಂತಾಗಿ 93 ದೇಶಗಳು ಅಮುಕ್ತ ವ್ಯವಸ್ಥೆ ಇರುವಂಥವು ಎಂದು ವಿಂಗಡಿಸಲಾಗಿದೆ. ವ್ಯಾಪಾರ, ಹಣಕಾಸು, ಬ್ಯಾಂಕಿಂಗ್, ತೆರಿಗೆ ರೀತಿನೀತಿಗಳು, ವೇತನ, ಸಂಬಳ, ಬೆಲೆ ನಿಯಂತ್ರಣ ಮುಂತಾದ ಪ್ರಮುಖ ಅಂಶಗಳ ಮೇಲೆ ಈ ವಿಂಗಡಣೆ ಆಧಾರಗೊಂಡಿದೆ. ಬಹಾಮಾಸ್, ಬರ್ಮುಡ, ಬ್ರೂನಿ, ಕೇಮಾನ್ ದ್ವೀಪಗಳು, ಮೊನಾಕೊ, ಅಂಡೋರಾ, ಒಮನ್, ಯುಎಇ, ಕಾಟಾರ್, ಕುವೈತ್ ಮುಂತಾದವು ತೆರಿಗೆ ಆವಶ್ಯಕತೆ ಇಲ್ಲದಿರುವಷ್ಟು ಸಿರಿವಂತ ರಾಷ್ಟ್ರಗಳಾಗಿವೆ. "ಈ ವರಮಾನ ತೆರಿಗೆ ವಿಚಾರ ಅರ್ಥವಾಗದಷ್ಟು ಕಠಿಣವಾಗಿದೆ" ಎಂದು ಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಹೇಳುವುದು ಜ್ಞಾಪಕಕ್ಕೆ ಬರುವುದು. ಸ್ವರ್ಗವೋ ಎಂಬಂತೆ ಇರುವ ಈ ತಾಣಗಳಲ್ಲಿ ದಿಢೀರ್ ಎಂದು

ವ್ಯಾಪಾರ ಸಂಕೀರ್ಣವನ್ನೇ ಸ್ಥಾಪಿಸಬಹುದು, ದೇಶದ ಪ್ರಜೆಯಾಗಬಹುದು, ಖಾಸಗಿ ನಿವೇಶನ/ಕಟ್ಟಡಗಳ ಒಡೆಯನಾಗಬಹುದು. ಅಷ್ಟೇಕೆ? ನಿಮಗೆ ಬೇಕಾದ ಖಾಸಗಿ ನಿಯಮ/ಕಾನೂನು ಸಿದ್ಧ. ಅಪರಾಧರಹಿತವಾದ ದಾಖಲೆ ಒಂದಿದ್ದರೆ ಸಾಕು. ಆಂಡೋರಾದ ಆಲ್ಪೈನ್‌ನಲ್ಲಿ (ಫ್ರಾನ್ಸ್–ಸ್ಪೇನ್ ನಡುವೆ) ಅನಿಯಂತ್ರಿತ ಬ್ಯಾಂಕುಗಳೇ ಹೆಚ್ಚಾಗಿರುವುವು. ಮೊನಾಕೊ (ಫ್ರಾನ್ಸ್–ಇಟಲಿಗಳಿಗೆ ಸೇರಿದಂತೆ) ದೇಶದಲ್ಲಿ ವಿದೇಶಿ ಲಾಭಕ್ಕೆ ತೆರಿಗೆ ಇರುವುದಿಲ್ಲ. ತೆರಿಗೆಯಿಂದ ನುಸುಳಿಕೊಳ್ಳಬಯಸುವವರಿಗೆ ಇದು ಸುವರ್ಣಾವಕಾಶ. ಹಾಲೆಂಡ್, ಸೈಪ್ರಸ್, ಮಾಲ್ಟ, ಪನಾಮ, ಬಾರ್ಬಡಾಸ್ ಲಿಕ್ಸೆನ್‌ಸ್ಟೀನ್, ಲಗ್ಸೆಂಬರ್ಗ್ ಸೆಶೆಲ್ಸ್ (ಹಿಂದೂ ಸಾಗರ) ಹಾಗೂ ಮಾರಿಷಸ್ ಕಡಿಮೆ ತೆರಿಗೆ ಮತ್ತು ಪ್ರಶ್ನೆ ಕೇಳದ ದೇಶಗಳಾಗಿವೆ. ಇಲ್ಲಿ ಅಳವಡಿಸುವ ಸಾಧನಗಳು ಅದ್ಭುತ. 1 ಪೋಷಕ ಸಂಸ್ಥೆಯನ್ನು ಸ್ಥಾಪಿಸುವುದು. ಇದು ಇನ್ನೊಂದು ದೇಶದಲ್ಲಿ ಹಣ ವಿನಿಯೋಜಿಸುವುದು, ಬಂದ ಲಾಭಕ್ಕೆ ತೆರಿಗೆ ಇಲ್ಲ. ಇದನ್ನು ಗುಪ್ತ ವಿನಿಯೋಜನ ತಾಣ ಎಂದೂ ಕರೆಯಬಹುದು. 2 ರಫ್ತು ವ್ಯಾಪಾರದಲ್ಲಿ ಮೂಲವಾಗಿ ವ್ಯಾಪಾರಿಯು ಸರಕಿಗೆ ಕಡಿಮೆ ಬೆಲೆ ಹಾಕಿರುತ್ತಾನೆ. ಈ ಬೆಲೆ 3–4 ಪಟ್ಟು ಹೆಚ್ಚಾಗಿ ಲಾಭ ತರುವುದು. ಲೈಸನ್ಸ್ ವ್ಯವಹಾರಗಳಿಂದ ಬಂದ ವರಮಾನಕ್ಕೂ ತೆರಿಗೆ ಇಲ್ಲ.

1929ರಿಂದಲೇ ಲಗ್ಸೆಂಬರ್ಗ್‌ನ ಸೂತ್ರಧಾರಿ ಸಂಸ್ಥೆಗಳು ತೆರಿಗೆ ಸೌಲಭ್ಯಗಳನ್ನು ಅನುಭವಿಸುತ್ತಾ ಬಂದಿವೆ. ಇಲ್ಲಿ ಲಾಭಾಂಶದ ಮೇಲಾಗಲಿ, ಹೂಡಿಕೆ ಹಣದ ಮೇಲಾಗಲಿ ತೆರಿಗೆ ಇಲ್ಲ. 5,000 ಡಾಲರ್ ವರೆಗೆ ವರಮಾನದ ತೆರಿಗೆ ಇಲ್ಲ.

ಆಂಟಿಗ್ವಾ, ಪನಾಮ, ಬರ್ಮುಡ, ಬಾಹ್ರೇನ್ ಮುಂತಾದ ದೇಶಗಳಲ್ಲಿ ಕಂಪೆನಿಗಳ ನೋಂದಾವಣೆಯ ಬಗ್ಗೆ ಔಪಚಾರಿಕವಾದ ಕ್ರಮವಿರುವುದಿಲ್ಲ. ವಕೀಲನೊಬ್ಬ ಭಾರತದ ಕೈಗಾರಿಕೋದ್ಯಮಿಯ ಪರವಾಗಿ ಕೇವಲ ದೂರವಾಣಿ ಸಂಪರ್ಕದ ಮೂಲಕ ಕಂಪೆನಿಗಳನ್ನು ಸ್ಥಾಪಿಸಬಹುದು. ನೂರಾರು ಕಂಪನಿಗಳನ್ನು ಕೆಲವೇ ಗಂಟೆಗಳಲ್ಲಿ ಸ್ಥಾಪಿಸಬಹುದು. ಮತ್ತೊಂದು ಆಕರ್ಷಣೆ—ಶೆಲ್ ಕಂಪೆನಿಗಳು ಅಂದರೆ ಮುಂಚೆಯೇ ನೋಂದಾಯಿಸಲ್ಪಟ್ಟಿರುವ ಕಂಪೆನಿಯೊಂದನ್ನು ತಕ್ಷಣ ಸ್ವಾಮಿತ್ವ ಪಡೆಯಲು ಮಾರಾಟಕ್ಕಿಡುವುದು. ಜಿಬ್ರಾಲ್ಟರ್, ಮೊನಾಕೋ, ಬರ್ಮುಡಾ, ಲಿಕ್ಸೆನ್‌ಸ್ಟೀನ್‌ಗಳಲ್ಲಿ ಪಾಸ್‌ಪೋರ್ಟ್‌ಗಳು ಪೇಟೆಯಲ್ಲಿ ಸಿಗುವ ವಸ್ತು. ವ್ಯಕ್ತಿಯ ಖಾಸಾ ಆಸ್ತಿಗಳ ಮೊತ್ತಕ್ಕೆ ಮಿತಿ ಇರುವುದಿಲ್ಲ. ಒಬ್ಬ ವ್ಯಕ್ತಿ ಕೋಟ್ಯಧೀಶನಾಗಿ ಬಹುರಾಷ್ಟ್ರೀಯ ಸಂಸ್ಥೆಗಳಂತೆ ತಾನೊಬ್ಬನೇ ಸಂಸ್ಥೆಗಳ ಸರಪಣಿಯನ್ನೇ ಸೃಷ್ಟಿಸಿಕೊಂಡು ಯಜಮಾನನಾಗಿ ಫಲಾನುಭವಿಯಾಗಬಹುದು. ಮೊನಾಕೋದಲ್ಲಿ ವಿದೇಶೀಯ 6 ತಿಂಗಳು ವಾಸವಾಗಿ ವಾಸಸ್ಥಾನದ ದಾಖಲೆ ಕೊಟ್ಟರೆ ಸಾಕು. ಆತನಿಗೆ ಬೇಕಾದ್ದು ದೊರೆಯುವುದು. ಬ್ಯಾಂಕುಗಳ ಉದರಿ ಕಾರ್ಡುಗಳ ವ್ಯಾಪಾರ ಈ ದಿಸೆಯಲ್ಲಿ ಚೆನ್ನಾಗಿ ಒತ್ತುಕೊಟ್ಟಿವೆ.

"ಪ್ರವಾಸಿ ಹಾಗೂ ತೆರಿಗೆ ಮಿತ್ರ ದೇಶ" ಎಂದು ಮಾರಿಶಸ್ ಖ್ಯಾತಿ ಪಡೆದಿದೆ. ವಿಶ್ವವ್ಯಾಪಿಯಾಗಿ ವ್ಯಾಪಾರ ಮಾಡಲು ಇದೊಂದು ಭರ್ಜರಿ ಸಾಗರೋತ್ತರ ತಾಣ ಎಂದು ಹೆಸರಿದೆ. ವಿದೇಶಿ ವ್ಯಾಪಾರಕ್ಕಾಗಿ ಹಾಗೂ ಸಾಗರೋತ್ತರ ನಿಧಿ ನಿರ್ವಹಣೆಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್, ಹಾಂಕಾಂಗ್ ಬ್ಯಾಂಕ್, ತ್ಯಾಟ್‌ವೆಸ್ಟ್ ಮುಂತಾಗಿ ಏಳು ವಿದೇಶಿ ಬ್ಯಾಂಕುಗಳಿಗೆ ಅನುಮತಿ ನೀಡಲಾಗಿದೆ. ಖ್ಯಾತಿ ಪಡೆದ ಸಿರಿವಂತ ಸಂಸ್ಥೆಗಳನ್ನು ಆರಿಸಿಕೊಂಡು ಪರವಾನಗಿ ನೀಡಲಾಗುವುದು. ಗ್ರಾಹಕನ ಗೋಪ್ಯತೆಯನ್ನು ಎಲ್ಲಾ ಬ್ಯಾಂಕುಗಳು ಶಿರಸಾವಹಿಸಿ ಪಾಲಿಸುವುವು. ಮಾರಿಷಸ್ ಒಂದು ಮುಕ್ತ ವ್ಯಾಪಾರವಲಯ ಎಂದು ಘೋಷಿಸಿರುವುದು ಪೂರ್ವ ಆಫ್ರಿಕಾ ದೇಶಗಳಿಗೆ ಆಕರ್ಷಣೆಯನ್ನು ತಂದಿದೆ. ಸಾಗರೋತ್ತರ ಸಂಸ್ಥೆಗೆ ಸ್ಟಾಂಪ್ ಶುಲ್ಕ ಇಲ್ಲ. ವಿದೇಶಿ ಲಾಭಗಳನ್ನು ಸಲೀಸಾಗಿ ರವಾನಿಸಬಹುದು. ಬಂಡವಾಳ ತೆರಿಗೆ ಇಲ್ಲ. ಉಡುಗೊರೆ ತೆರಿಗೆ, ತಡೆಹಿಡಿಯುವ ತೆರಿಗೆ ಇರುವುದಿಲ್ಲ. ಆದರೂ ಅಪರಾಧದ ಹಣ ಮತ್ತು ವಿದೇಶಿ ವ್ಯಾಪಾರ ನಿಯಂತ್ರಣಕ್ಕಾಗಿ ಮಾರಿಷಸ್ ಸಾಗರೋತ್ತರ ವ್ಯಾಪಾರ ಚಟುವಟಿಕೆಗಳ ಅಧಿನಿಯಮ ಇದೆ. ವಿದೇಶಿ ಸಂಸ್ಥೆಗಳು ವಾರ್ಷಿಕ ಸಭೆಯನ್ನು ಕಡ್ಡಾಯವಾಗಿ ನಡೆಸಿ ವರದಿಯನ್ನು ಸಲ್ಲಿಸಬೇಕು, ಶೆಲ್ ಸಂಸ್ಥೆಗಳ ಸ್ಥಾಪನೆ ನಿಷಿದ್ಧ. ಭಾರತೀಯ ಅನಿವಾಸಿಗಳು ಈ ಮಾರ್ಗವನ್ನನುಸರಿಸಿದರೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಗಳಿಕೆ ರಕ್ಷಣೆಗಾಗಿ ಈ ಮಾರ್ಗವನ್ನು ಅನುಸರಿಸುವರು.

ಭಾರತ ಗುಪ್ತ ಹಣ ಬ್ಯಾಂಕಿಂಗ್ ತಾಣವಲ್ಲ, ಗುಪ್ತ ತೆರಿಗೆ ತಾಣವೂ ಅಲ್ಲ. ಆದರೆ ತೆರಿಗೆ ಕೊಡದೆ ಸತಾಯಿಸುವವರ ದಿವ್ಯಧಾಮವಾಗಿದೆ. ತೆರಿಗೆ ಕೊಡದೆ ತಪ್ಪಿಸಿಕೊಳ್ಳುವವರಿಂದ ಸಮಸ್ಯೆ ತೀವ್ರವಾಗಿದೆ. ನ್ಯಾಯಾಲಯದ ತಡೆಯಾಜ್ಞೆ ಮೂಲಕ ತಿಂಗಳುಗಟ್ಟಲೆ ತೆರಿಗೆ ಕೊಡುವುದನ್ನು ಮುಂತಳ್ಳುವ ಇವರ ಚಾಣಾಕ್ಷತೆಯನ್ನು ಮೆಚ್ಚಬೇಕಾದ್ದಾದರೂ ಇವು ರಾಷ್ಟ್ರೀಯಕ್ರೀಡೆ ಇದ್ದಂತೆ ಮಹಾವಿಷ್ಣು ಧರೆಗಿಳಿದು ಬಂದು ವ್ಯಾಪಾರ ಮಾಡಿದರೂ ಅವನೂ ಕೂಡ ತೆರಿಗೆ ಕೊಡದೆ ಇರಬಹುದು." ಇಂದು ಅಂದಿನ ವಿತ್ತಮಂತ್ರಿ ಚಿದಂಬರಂ ವಿಡಿಐಎಸ್ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಕೊಟ್ಟ ಹೇಳಿಕೆ, ಸ್ವಾತಂತ್ರ್ಯದ ಅನಂತರ ವರಮಾನವನ್ನು ಸ್ವೇಚ್ಛೆಯಿಂದ ಬಹಿರಂಗಪಡಿಸುವ ಒಟ್ಟು 12 ಯೋಜನೆಗಳು ಬಂದುಹೋಗಿವೆ. ಪ್ರಶ್ನೆ ಕೇಳದ ಯೋಜನೆಯೂ ಪ್ರಚಾರದಲ್ಲಿತ್ತು. ವಿದೇಶಿ ಠೇವಣಿ ಮೂಲಗಳ ಬಗ್ಗೆ ಪ್ರಶ್ನೆ ಕೇಳಕೂಡದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕರುಗಳಿಗೆ ಆದೇಶ ನೀಡಿತ್ತು. ದ್ವಿಪಕ್ಷ ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳಲು ಭಾರತವು ಸ್ವಿಸ್, ಮಾರಿಷಸ್, ಕೇಮಾನ್ ದ್ವೀಪ, ಸೇಂಟ್‌ಕಿಟ್ಸ್ ಮುಂತಾಗಿ 47 ದೇಶಗಳೊಂದಿಗೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದೆ.

ವಿಶ್ವದಲ್ಲಿ ಜರುಗುವ ಮೋಸ ಪ್ರಕರಣಗಳಿಗೂ ಈ ದಿವ್ಯ ತಾಣಗಳಿಗೂ ಒಂದಲ್ಲ ಒಂದು ರೀತಿ ಸಂಬಂಧವಿರುವುದನ್ನು ಗುರುತಿಸ

ಲಾಗಿದೆ. ಪ್ರಾಮಾಣಿಕ ಬ್ಯಾಂಕಿಂಗ್ ಪ್ರವೃತ್ತಿ ಇತಿಹಾಸದ ಪುಟಗಳನ್ನು ಸೇರಿದೆ. ಹಣ, ಬ್ಯಾಂಕಿಂಗ್, ತೆರಿಗೆ ತಾಣದಿಂದ ಮುಂದೆ ಇನ್ನಾವುದನ್ನು ಗುರುತಿಸಬಹುದು ಎಂಬ ಪ್ರಶ್ನೆಗೆ ತಜ್ಞರು ಹೇಳುವರು—'ವಿನಿಯೋಜನೆಯ ಗುಪ್ತ ತಾಣಗಳು.' ಅದೇನೇ ಬಿಗಿಯಾದ ಕಾನೂನಿರಲಿ, ನಿಯಂತ್ರಣವಿರಲಿ, 'ನೀನು ಚಾಪೆ ಕೆಳಗೆ ತೂರಿದರೆ ನಾನು ರಂಗೋಲಿ ಕೆಳಗೆ ತೂರುವೆನು' ಎಂಬಂತೆ ಈ ನಾಜೂಕಾದ ಗುಪ್ತ ಸಂಸ್ಥೆಗಳು ನಿರಂತರವಾಗಿ ಮುಂದುವರಿಯುವಂಥವು. ಒಳ್ಳೆಯದು, ಕೆಟ್ಟದ್ದು—ಎರಡಕ್ಕೂ ಸ್ವಿಸ್ ಬ್ಯಾಂಕುಗಳ ಆದರ್ಶವೇ ಕಾರಣ ಎಂಬುದು ಸ್ಪಷ್ಟ. ಅಪಾಯಕರ ಪ್ರವೃತ್ತಿಯನ್ನು ಬಿಟ್ಟು ಆದರ್ಶ ನಿಯಮಗಳನ್ನು ಪಾಲಿಸಿದರೆ ವಿಶ್ವಕ್ಕೆ ಒಳ್ಳೆಯದು. ★

ಉದ್ಯಮ ಸಂಪನ್ಮೂಲ ಯೋಜನೆ

(2ನೇ ಪುಟದಿಂದ)

(ಆ) ತನ್ನ ಹೊಣೆಗಳ ಸರಾಸರಿ ಪರಿಪಕ್ವತೆಯನ್ನು ಕಡಿಮೆ ಮಾಡಿಕೊಳ್ಳಬಹುದು (ಪ್ರಾಯಶಃ ಕರೆ ಹಣ ಮಾರುಕಟ್ಟೆಯ ಮೇಲೆ ಅವಲಂಬಿತವಾಗುವುದನ್ನು ಕಡಿಮೆ ಮಾಡಿಕೊಳ್ಳುವುದರ ಮೂಲಕ) :

ಬ್ಯಾಂಕಿನ ಒಟ್ಟು ನಷ್ಟಸಂಭಾವ್ಯತೆಯು ನಿಖರವಾದ ಮಾಹಿತಿ ನಿಮಗೆ ಲಭ್ಯವಾಗಿರುವುದರಿಂದ ನಿಮ್ಮ ಶಾಖೆಗಳಲ್ಲಿ (ಭವಿತವ್ಯದ ನಷ್ಟಸಂಭಾವ್ಯತೆಯನ್ನು ಕಡಿಮೆಗೊಳಿಸಲು) ದೀರ್ಘಾವಧಿ ಠೇವಣಿಗಳನ್ನು ಪ್ರೋತ್ಸಾಹಿಸುವ ತೀರ್ಮಾನವನ್ನು ನೀವು ತೆಗೆದುಕೊಳ್ಳಬಹುದು. ಬಡ್ಡಿ ದರವನ್ನು ಕೂಡ ಈ ಆಧಾರದ ಮೇಲೆಯೆ ನಿರ್ಧರಿಸಬಹುದು. ಬ್ಯಾಂಕಿನ ಶಾಖೆಗಳು ಎಲ್ಲೇ ಇದ್ದರೂ ಒಟ್ಟು ಬ್ಯಾಂಕಿನ ಆಸ್ತಿ-ಹೊಣೆಗಳ ಸ್ವರೂಪ ತಿಳಿದಿರುವುದರಿಂದ ಸರಿಯಾದ ತೀರ್ಮಾನ ತೆಗೆದುಕೊಳ್ಳುವುದು ಸುಲಭ.

ಮೇಲೆ ಹೇಳಿದ ಉದಾಹರಣೆ ಮಾಹಿತಿಯ ಪ್ರಾಮುಖ್ಯವನ್ನು ಮತ್ತು ಮಾಹಿತಿಯನ್ನಾಧರಿಸಿ ಸರಿಯಾದ ವ್ಯವಹಾರ ತೀರ್ಮಾನಗಳನ್ನು ಹೇಗೆ ತೆಗೆದುಕೊಳ್ಳಬಹುದೆಂಬುದನ್ನು ತಿಳಿಸುತ್ತದೆ. ಬ್ಯಾಂಕಿಂಗ್ ಉದ್ಯಮದಲ್ಲಿ ಇಂತಹ ಅನೇಕ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಜಟಿಲತೆಯಿಂದ ಕೂಡಿದ ಬ್ಯಾಂಕಿಂಗ್ ಬಡ್ಡಿದರದ ನಷ್ಟಸಂಭಾವ್ಯತೆ ಕುರಿತ ಮಾಹಿತಿ ಅನೇಕ ಮಾಹಿತಿಗಳಲ್ಲಿ ಒಂದು ಅಂಶವಷ್ಟೇ. ಬ್ಯಾಂಕಿಗೆ ಸವಾಲೊಡ್ಡುವ ಮೂರು ಮುಖ್ಯ ನಷ್ಟಸಂಭಾವ್ಯತೆಗಳೆಂದರೆ :

(ಅ) ಉದರಿಗೆ ಸಂಬಂಧಿಸಿದ್ದು,
(ಆ) ಮಾರುಕಟ್ಟೆಗೆ ಸಂಬಂಧಿಸಿದ್ದು,
(ಇ) ವಹಿವಾಟಿಗೆ ಸಂಬಂಧಿಸಿದ್ದು.

ಉದ್ಯಮ ಸಂಪನ್ಮೂಲ ಯೋಜನೆ ಇಡೀ ಉದ್ಯಮದ ವ್ಯವಸ್ಥಾಪನೆಗೆ ಇರುವ ಸರಳ, ಸ್ಪಷ್ಟ ಹಾಗೂ ಕ್ರಿಯಾತ್ಮಕವಾದ ಒಂದು ಸಂರಚನೆಯಾದ್ದರಿಂದ ಜಟಿಲವಾದ ಬ್ಯಾಂಕಿಂಗ್ ಉದ್ಯಮವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ದಾರಿದೀಪವಾಗಬಲ್ಲದು. ★

ಆಜೀವ ಸದಸ್ಯರು

(ಸೆಪ್ಟೆಂಬರ್ ಸಂಚಿಕೆಯಿಂದ ಮುಂದುವರಿದುದು)

೧೦೭೮ ಹೆಚ್. ಎ. ಕೇಶವನಾರಾಯಣ
೧೦೭೯ ವೆ. ರಂಗನಾಥ
೧೦೮೦ ಮಾ. ರಂ. ವೆಂಕಟರಮೇಶ್
೧೦೮೧ ಬಿ. ಆರ್. ಸುಂದರರಾಜ
೧೦೮೨ ಪಂಪಾಪತಿ ಹಿರೇಮಠ
೧೦೮೩ ಮಲ್ಹಾರಿ ಮಿಠಾರೆ
೧೦೮೪ ಆರ್. ಟಿ. ಶರಣಬಸವ
೧೦೮೫ ಭಾರತೀಯ ಸ್ಟೇಟ್ ಬ್ಯಾಂಕ್ ಕಾಚರಕನಹಳ್ಳಿ ಶಾಖೆ (ಬೆಂಗಳೂರು)
೧೦೮೬ ಮೂಡಲಗೊಲ್ಲಹಳ್ಳಿ
೧೦೮೭ ಚಂದ್ರಾ ಲೇ ಔಟ್ ಶಾಖೆ (ಬೆಂಗಳೂರು)
೧೦೮೮ ಪಿ. ಮೋಹನರಾಮ್
೧೦೮೯ ವಿ. ರೇಣುಕಾಂಬ
೧೦೯೦ ಎಂ. ಬಾಲರಾಜು

ಮೈಸೂರು ಬ್ಯಾಂಕಿನ ಈ ಮುಂದಿನ ಶಾಖೆಗಳು

೧೦೯೧ ಹಿಂದವಾಡಿ ಶಾಖೆ (ಬೆಳಗಾವಿ)
೧೦೯೨ ನರಸಿಂಹರಾಜಪುರ
೧೦೯೩ ಕೃಷಿ ಅಭಿವೃದ್ಧಿ ಶಾಖೆ (ಸಂಡೂರು)
೧೦೯೪ ಕಲ್ಯಾಣಿ
೧೦೯೫ ಸಿಂಟಲಗೆರೆ
೧೦೯೬ ಮಾಲೂರು
೧೦೯೭ ಇಳಕಲ್
೧೦೯೮ ಥೊಮ್ಮಸಂದ್ರ
೧೦೯೯ ಮೂಡಿಗೆರೆ
೧೧೦೦ ದುಗ್ಗಪ್ಪ, ವಿ.

ಮೈಸೂರು ಬ್ಯಾಂಕಿನ ಈ ಮುಂದಿನ ಶಾಖೆಗಳು

೧೧೦೧ ಸಿದ್ದಗಂಗಾ ಬಡಾವಣೆ ಶಾಖೆ
೧೧೦೨ ಕಂಕನಾಡಿ
೧೧೦೩ ತುಮಕೂರು
೧೧೦೪ ಸಣ್ಣ ಕೈಗಾರಿಕಾ ವಿಶೇಷ ಶಾಖೆ (ಸಿಂಗಸಂದ್ರ)
೧೧೦೫ ಬಿಜಾಪುರ

ಬ್ಯಾಂಕುಗಳ ಬಡ್ಡೀತರ ವರಮಾನ ವೃದ್ಧಿಯಲ್ಲಿ ನಿಧಿ ರವಾನೆಯ ಪಾತ್ರ

ಕೆ. ಎನ್. ಮಹಾಬಲ

ಭಾರತೀಯ ಸ್ಟೇಟ್ ಬ್ಯಾಂಕ್, ನಂಜನಗೂಡು

ಬದಲಾದ ಪರಿಸ್ಥಿತಿಯಲ್ಲಿ ಬ್ಯಾಂಕುಗಳು ಅತ್ಯಂತ ತುರ್ತಾಗಿ ಗಮನ ಹರಿಸಬೇಕಾದ ಅಂಶವೆಂದರೆ ಲಾಭ ಸಂಪಾದನೆ. ಪರಂಪರಾಗತ ಲಾಭಮೂಲಗಳು ಬತ್ತುತ್ತಿವೆ; ಅತಿಯಾದ ಸ್ಪರ್ಧೆಯಿಂದಾಗಿ ಕುಗ್ಗುತ್ತಿವೆ. ನಿಧಿಯನ್ನು ಆಧರಿಸಿದ ಲಾಭಸಂಪಾದನೆಗಿಂತ ಸೇವೆಯನ್ನು ಆಧರಿಸಿದ ಲಾಭದ ಗಳಿಕೆಗೆ ಹೆಚ್ಚು ಒತ್ತು ದೊರಕುತ್ತಿದೆ. ಆದರೆ ಬ್ಯಾಂಕುಗಳು ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ನಡಸಬೇಕಾಗಿದೆ. ನಿಧಿ ರವಾನೆ ಒಂದು ಮುಖ್ಯ ಲಾಭಮೂಲ.

ಇಂದಿನ ದಿನಗಳಲ್ಲಿ ಬ್ಯಾಂಕುಗಳು ತಮ್ಮ ಅಸ್ತಿತ್ವಕ್ಕೆ ಬೆನ್ನೆಲುಬು ಎನಿಸಿರುವ ಲಾಭಪ್ರದತೆಯ ಬಗ್ಗೆ ಹೆಚ್ಚಿನ ಗಮನ ನೀಡುವುದು ಅನಿವಾರ್ಯವಾಗಿದೆ. ಕೇವಲ ಠೇವಣಿ, ಮುಂಗಡಗಳ ಗುರಿ ಸಾಧಿಸುವ ಜೊತೆಗೆ ಲಾಭದ ಹೆಚ್ಚಳಕ್ಕೂ ತಮ್ಮ ಪಾಲನಾ ವರದಿಯಲ್ಲಿ ಮಹತ್ವ ನೀಡುತ್ತಿವೆ.

ಇಂದಿನ ಹೊಸ ಕಟ್ಟುಪಾಡುಗಳು, ಬಡ್ಡಿ ವರಮಾನದ ಬಗ್ಗೆ ಇದ್ದ ಸಂಪ್ರದಾಯಶೀಲ ದೃಷ್ಟಿಕೋನದಲ್ಲಿ ಬೃಹತ್ ಬದಲಾವಣೆ, ಇವೆಲ್ಲ ಬ್ಯಾಂಕುಗಳು ತಮ್ಮ ಲಾಭಪ್ರದತೆಗಾಗಿ ಬೇರೆಡೆ ದೃಷ್ಟಿ ಹರಿಸುವಂತೆ ಮಾಡಿದೆ. ವಿಶೇಷವಾಗಿ ಆದಾಯ ಗ್ರಹಣ ಹಾಗೂ ಆಸ್ತಿ ವರ್ಗೀಕರಣ ಪರಿಕಲ್ಪನೆ ಅನುಷ್ಠಾನಗೊಂಡ ನಂತರ ಬಡ್ಡಿಯು ಆಕರಣೆಗೂ ಸಾಲ ವಸೂಲಾತಿಗೂ ನೇರ ಸಂಬಂಧವಿರುವುದರಿಂದ ಬಡ್ಡಿ ವರಮಾನ ಒಂದು ಸೂಕ್ಷ್ಮ ಹಾಗೂ ಜಟಿಲ ಅಂಶವಾಗಿದೆ. ಬ್ಯಾಂಕುಗಳ ಲಾಭಪ್ರದತೆಯನ್ನೇ ಏರುಪೇರು ಮಾಡುವ ಸಂಭವವನ್ನೂ ಹೊಂದಿದೆ.

ಬ್ಯಾಂಕುಗಳು ತಮ್ಮ ಬಡ್ಡೀತರ ವರಮಾನವನ್ನು ಹೆಚ್ಚಿಸಿಕೊಳ್ಳಲು ಈ ಪರಿಸ್ಥಿತಿ ಅವಕಾಶ ಮಾಡಿಕೊಟ್ಟಿದೆ. ವಿನಿಮಯ ಶುಲ್ಕ ಮತ್ತು ಕಮಿಷನ್ ಬ್ಯಾಂಕುಗಳ ವರಮಾನ ವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸಬಲ್ಲ ಶಕ್ತಿ ಹೊಂದಿವೆ. ಬಡ್ಡಿ ಅಥವಾ ಸೋಡಿಗಳಂತೆ ಇವು ನಿಧಿ ಆಧಾರಿತವಾದುವಲ್ಲ. ಹಾಗಾಗಿ ಈ ಮೂಲಗಳಿಂದ ಬರುವ ವರಮಾನ ಖಚಿತವಾದದ್ದು. ಅಂದರೆ ಬಡ್ಡಿಯಂತೆ, ಬ್ಯಾಂಕುಗಳು ತಮ್ಮ ಸ್ವಂತ ನಿಧಿಯನ್ನು ತೊಡಗಿಸಬೇಕಾಗಿಲ್ಲ. ಅಷ್ಟೇ ಅಲ್ಲದೆ ಡ್ರಾಫ್ಟ್ ನೀಡಿಕೆ, ತಂತಿ ವರ್ಗಾವಣೆ ಮುಂತಾದ ಬಾಬ್ತು ಬ್ಯಾಂಕುಗಳಿಗೆ ಉಚಿತ ನಿಧಿಯನ್ನು ಕೂಡ ಒದಗಿಸಬಲ್ಲದು.

ಜಾನ್ ರೀಡ್ ಹಣವನ್ನು ಚಲನಶೀಲ ಮಾಹಿತಿ ಎಂದಿದ್ದಾನೆ. ಬ್ಯಾಂಕ್/ಅಂಚೆ ಕಛೇರಿಗಳ ಮೂಲಕ ರವಾನೆಯಲ್ಲಿರುವ ಹಣ ಕೂಡ ಇಂಥ ಮಾಹಿತಿಯ ಆಗರವೇ ಆಗಿದೆ. ಉತ್ತಮ ಶಾಖಾ ಜಾಲ ವ್ಯವಸ್ಥೆಯನ್ನು ಹೊಂದಿರುವುದು ಬ್ಯಾಂಕ್/ಅಂಚೆ ಕಛೇರಿಗಳು ನಿಧಿ ರವಾನೆ ಮಾಡಲು ಅನುಕೂಲಕರವಾಗಿದೆ.

ಅಂಚೆ ಕಛೇರಿಗಳು ತಮ್ಮ ಮನಿಯಾರ್ಡರ್ ಸೇವೆಯ ಮೂಲಕ ನಿಧಿರವಾನೆಯ ಜನಪ್ರಿಯ ಮಾಧ್ಯಮವೆನಿಸಿದೆ. ದೇಶದ ಮೂಲೆಯಲ್ಲಿರುವ ಫಲಾನುಭವಿಗಳನ್ನು ತಲುಪಿ, ಅವರನ್ನು ಗುರುತಿಸಿ ಹಣ ಪಾವತಿಸುವ ಮನಿಯಾರ್ಡರ್ ಮಹತ್ವ ಅಬಾಧಿತವಾದದ್ದು. ಉತ್ತರ ಪ್ರದೇಶದ ಅಲ್ಮೋರಾದಂಥ ಜಿಲ್ಲೆ ಇಂದು 'ಮನಿಯಾರ್ಡರ್ ಅರ್ಥ ವ್ಯವಸ್ಥೆ' ಎಂದು ಖ್ಯಾತಿ ಪಡೆದಿದೆ. ಇದಕ್ಕೆ ಕಾರಣವಾದುದು ದೇಶದ ಮೂಲೆಮೂಲೆಗಳಿಂದ ರಕ್ಷಣಾ ಸೇವೆಯಲ್ಲಿರುವ ಜನ ತಮ್ಮ ಅವಲಂಬಿತರಿಗೆ ಮನಿಯಾರ್ಡರ್ ಮೂಲಕ ಹಣ ರವಾನೆ ಮಾಡುತ್ತಿರುವುದೇ ಆಗಿದೆ.

ಮನಿಯಾರ್ಡರ್ ವ್ಯವಸ್ಥೆಗೆ ಲಭಿಸಿರುವ ಯಶಸ್ಸಿನಿಂದ ಉತ್ತೇಜನಗೊಂಡು ಅಂಚೆ ಕಛೇರಿಗಳು ಈಗ ಹಲವಾರು ತಂತ್ರಜ್ಞಾನ ಅವಲಂಬಿತ ಸುಧಾರಣೆಗಳನ್ನು ಅಳವಡಿಸುತ್ತಿವೆ. ವಿಸ್ಯಾಟ್ ತಂತ್ರಜ್ಞಾನ ಅವುಗಳಲ್ಲಿ ಒಂದು. ದೇಶದ ಮೂಲೆಮೂಲೆಯ ಸ್ಥಳಗಳಾದ ಐಜಾವಲ್, ಧರ್ಮಶಾಲ, ಶವರತ್ತಿ, ಕೊಹಿಮಾ, ಮಂಡಿ, ಸಿಲ್ಚಾರ್, ತೇಜ್‌ಪುರ ಮುಂತಾದ ದುರ್ಗಮ ಕೇಂದ್ರಗಳನ್ನೂ ಒಳಗೊಂಡಂತೆ ದೇಶಾದ್ಯಂತ 65 ವಿಸ್ಯಾಟ್ ಕೇಂದ್ರದ ಮೂಲಕ 300 ರೂಪಾಯಿಂದ 5000 ರೂಪಾಯಿ ವರೆಗಿನ

ಮೊಬಲಗನ್ನು ಸ್ವೀಕರಿಸಿದ ಮಾರನೆಯ ಕೆಲಸದ ದಿನ ಬಟವಾಡೆ ಮಾಡುವ ಖಾತರಿ ನೀಡುತ್ತದೆ. ಫಲಾನುಭವಿ ವಿಸ್ಯಾಟ್ ಕೇಂದ್ರದ ವ್ಯಾಪ್ತಿಯಲ್ಲಿದ್ದರೆ ಸಾಮಾನ್ಯ ಮನಿಯಾರ್ಡರ್ ಶುಲ್ಕವನ್ನು ಮಾತ್ರ ವಿಧಿಸಲಾಗುತ್ತದೆ.

ವ್ಯಕ್ತಿಗತ ಫಲಾನುಭವಿಗಳು ಮಾತ್ರವಲ್ಲದೆ ಸಾಂಸ್ಥಿಕ ಗ್ರಾಹಕರಿಗೂ ಕಾರ್ಪೊರೇಟ್ ಮನಿಯಾರ್ಡರ್ ಸರ್ವಿಸ್ (ಸಿಎಂಎಸ್) ಸೌಲಭ್ಯವನ್ನು ಅಂಚೆ ಇಲಾಖೆ ನೀಡುತ್ತಿದೆ.

ಇದಕ್ಕೆ ಹೋಲಿಸಿದರೆ, ಅಂಚೆ ಕಛೇರಿಯಷ್ಟು ಶಾಖಾ ಜಾಲ ಹೊಂದಿರದಿದ್ದರೂ, ಸಾಕಷ್ಟು ಶಾಖೆಗಳನ್ನು ಹೊಂದಿರುವ ಬ್ಯಾಂಕುಗಳ ನಿಧಿ ರವಾನೆ ವ್ಯವಸ್ಥೆ ಅಂಚೆ ಕಛೇರಿಯಷ್ಟು ಮಹತ್ವವನ್ನು ವಹಿಸುತ್ತಿಲ್ಲ. ಇದಕ್ಕೆ ಕಾರಣಗಳೆಂದರೆ :

ಮೊದಲನೆಯದಾಗಿ ಫಲಾನುಭವಿಗಳನ್ನು ಗುರುತಿಸಿ ಹಣ ಪಾವತಿಮಾಡುವಲ್ಲಿ ವಿಳಂಬ, ಅಡ್ಡಿ ಇತ್ಯಾದಿ. ಉದಾಹರಣೆಗೆ ಡ್ರಾಫ್ಟ್ ಪಡೆದ ಫಲಾನುಭವಿ ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ ಹೋಗಿ, ತನ್ನ ಪರಿಚಯ ಸ್ಥಾಪಿಸಿ ಹಣ ಪಡೆಯಬೇಕು. ಅಶಿಕ್ಷಿತರಿಗಂತೂ ಇದು ಕಷ್ಟದ ಕೆಲಸ. ಪರಾವಲಂಬನೆಯಂತೂ ತಪ್ಪಿದ್ದಲ್ಲ.

ಮತ್ತೊಂದು ಬೆಳವಣಿಗೆಯೆಂದರೆ, ನಿಧಿ ರವಾನೆಯ ಇನ್ನೂ ಹೊಸ ಮಾರ್ಗವನ್ನು ಆವಿಷ್ಕರಿಸುವ ಬದಲು, ಇತ್ತೀಚೆಗೆ ಹಲವು ಬ್ಯಾಂಕುಗಳು ಈವರೆಗೆ ಚಾಲ್ತಿಯಲ್ಲಿದ್ದ ಅಂಚೆ ವರ್ಗಾವಣೆ ಸೌಲಭ್ಯವನ್ನು ಹಿಂತೆಗೆದುಕೊಂಡಿವೆ. ನಿಗದಿತ ಅವಧಿಯಲ್ಲಿ ಸ್ಥಾಯೀ ಆದೇಶದ ಮೂಲಕ ಹಣ ರವಾನಿಸುವ ಸೌಲಭ್ಯವನ್ನು ಗ್ರಾಹಕರಿಂದ ಕಸಿದುಕೊಂಡಿದೆ. ಇದೊಂದು ಹಿನ್ನಡೆಯ ಕ್ರಮವಲ್ಲವೆ ಎಂದು ಹಲವರು ಭಾವಿಸುವಂತಾಗಿದೆ.

ಇತ್ತೀಚೆಗೆ ಖಾಸಗಿ ಬ್ಯಾಂಕುಗಳು ಕೂಡ ವಾಣಿಜ್ಯ ಬ್ಯಾಂಕುಗಳ ಶಾಖಾ ಜಾಲವನ್ನೇ ಬಳಸಿಕೊಂಡು ಡ್ರಾಫ್ಟ್ ನೀಡಿಕೆ ಮುಂತಾದ ಸೌಲಭ್ಯವನ್ನು ನೀಡುತ್ತಿವೆ ಮತ್ತು ಬ್ಯಾಂಕುಗಳಿಗೆ ಪ್ರಬಲವಾದ ಸ್ಪರ್ಧೆಯನ್ನು ಒಡ್ಡುತ್ತಿವೆ.

ಬಡ್ಡೀತರ ವರಮಾನಮೂಲವಾಗಿ ಪ್ರಧಾನ ಪಾತ್ರ ವಹಿಸುತ್ತಿರುವ ನಿಧಿ ರವಾನೆಯ ಮಹತ್ವವನ್ನು ಬ್ಯಾಂಕುಗಳು ಲಘುವಾಗಿ ಪರಿಗಣಿಸುವಂತಿಲ್ಲ. ಬ್ಯಾಂಕುಗಳು ತುರ್ತಾಗಿ ಕೈಗೊಳ್ಳಬೇಕಾದ ತುರ್ತಿನ ಕ್ರಮಗಳೆಂದರೆ :

1 ಫಲಾನುಭವಿಗಳಿಗೆ ಅಡ್ಡಿಆತಂಕಗಳಿಲ್ಲದೆ ಹಣ ಪಾವತಿಯಾಗುವ ಸಹಾಯಕ ವ್ಯವಸ್ಥೆ ಬ್ಯಾಂಕುಗಳಲ್ಲಿ ಸ್ಥಿರವಾಗಬೇಕು. ಕಾನೂನುಗಳನ್ನು ಪಾಲಿಸಿಯೂ ವಿಳಂಬವಿಲ್ಲದೆ ಹಣ ಪಾವತಿಯಾಗುವುದು ಅಗತ್ಯ.

2 ಆಧುನಿಕ ಯುಗದ ವರದಾನವೆನಿಸಿರುವ ತಂತ್ರಜ್ಞಾನವನ್ನು ನಿಧಿ ರವಾನೆಯಲ್ಲಿ ಪರಿಣಾಮಕಾರಿಯಾಗಿ ಬಳಸುವುದು ಅತ್ಯಗತ್ಯ. ಡ್ರಾಫ್ಟ್ ನೀಡಿಕೆ ಯಂತ್ರದ ಸ್ಥಾಪನೆ, ಡ್ರಾಫ್ಟ್ ತಿಳಿವಳಿಕೆ ನೀಡಿಕೆ ರವಾನೆ, ಯಾಂತ್ರೀಕೃತ ಲೆಕ್ಕಸಮನ್ವಯ ಇತ್ಯಾದಿ. ತಂತಿ ವರ್ಗಾವಣೆಯಲ್ಲಿ ಕರಾರುವಾಕ್ ಸಂಕೇತಪದ ನೀಡಿಕೆ, ಫ್ಯಾಕ್ಸ್, ದೂರವಾಣಿ ಮೂಲಕ ಸಂದೇಶದ ತ್ವರಿತ ರವಾನೆ ಇತ್ಯಾದಿ ಕ್ರಮವೂ ಲಾಭಕರ.

3 ದಿನಂಪ್ರತಿ ಹೆಚ್ಚು ಮೊಬಲಗಿನ ನಿಧಿ ರವಾನೆ ಮಾಡುವ ವ್ಯಾಪಾರಿಗಳಿಗೆ ರಿಯಾಯಿತಿ ದರದಲ್ಲಿ ಸೇವೆ ನೀಡುವ ಬಗ್ಗೆಯೂ ಬ್ಯಾಂಕುಗಳು ಆಲೋಚಿಸಬೇಕಾಗಿವೆ.

ಇಂಥ ರಚನಾತ್ಮಕ ಕ್ರಮಗಳು ಅನುಷ್ಠಾನಗೊಂಡಲ್ಲಿ ಹಣ ರವಾನೆ ಪದ್ಧತಿ ಬ್ಯಾಂಕುಗಳ ಲಾಭವನ್ನು ವಿಸ್ತರಿಸುವಲ್ಲಿ ಸಂಶಯವೇನಿಲ್ಲ. ಇತ್ತೀಚೆಗೆ ರಿಸರ್ವ್ ಬ್ಯಾಂಕ್ ಹೈದರಾಬಾದ್‌ನಲ್ಲಿ ವಿಸ್ಯಾಟ್ ಜಾಲ ಸ್ಥಾಪಿಸಲು ಯೋಜಿಸಿದೆ, ಅಂತೂ ಇದೊಂದು ಶುಭ ಸೂಚನೆ. ★

'ಬ್ಯಾಂಕಿಂಗ್ ಪ್ರಪಂಚ'ಕ್ಕೆ ಆಜೀವ ಚಂದಾದಾರರಾಗಿರಿ

ಚಂದಾ ವಿವರ

ವಾರ್ಷಿಕ ರೂ. 30   ಆಜೀವ ರೂ. 300

ಗುಪ್ತ ಸಮಿತಿ ವರದಿ— ಒಂದು ಕಿರು ಪರಿಚಯ

(5ನೇ ಪುಟದಿಂದ)

ರೈತರ ಆದಾಯ ಹಾಗು ಕೃಷಿ ಉತ್ಪಾದನೆಗೆ ಸಹಾಯವಾಗುತ್ತದೆ. ಇದು ಸಾಧ್ಯವಾಗಲು ಬದಲಾಗಬೇಕು. ಜಮೀನನ್ನು ಅದರ ಹಕ್ಕು ಬಿಟ್ಟುಕೊಡದೆ ಬಾಡಿಗೆಗೆ ಕೊಡುವಂತೆ ಆಗಬೇಕು. ಗುಪ್ತ ಸಮಿತಿ ಹೊಸತಾಗಿ ಏನನ್ನೂ ಹೇಳಿಲ್ಲ. ಆದರೆ ರೈತರು ಮತ್ತು ಬ್ಯಾಂಕುಗಳ ನಡುವೆ ವಿಶ್ವಾಸ ಹುಟ್ಟಿಸುವಂತೆ ಅನೇಕ ಸಲಹೆಗಳನ್ನು ನೀಡಿದೆ.

ಕೃಷಿ ಸಾಲ ಲಾಭದಾಯಕ ಉದ್ಯಮವಾಗಬೇಕು. ರೈತನಿಗೆ ತನ್ನ ಉತ್ಪಾದನೆಯ ನಿಜವಾದ ಬೆಲೆ ಸಿಗಬೇಕು. ಮಧ್ಯವರ್ತಿಗಳ ವ್ಯವಸ್ಥೆ ದೂರವಾಗಬೇಕು. ಅವನ ವೆಚ್ಚಕ್ಕೆ ತಕ್ಕಂತೆ, ಅವನ ಬೆಳೆಗೆ ಬೆಲೆ ಸಿಗಬೇಕು. ಮಾರುಕಟ್ಟೆಯ ಏರಿಳಿತಕ್ಕೆ ವಿಮೆ ಜಾರಿಗೆ ಬರಬೇಕು. ಬ್ಯಾಂಕಿನಲ್ಲಿ ವಿಶ್ವಾಸ ಬೆಳೆಯಬೇಕು. ಅವನಿಗೆ ನಿರಂತರ ನಿಧಿಯ ಹರಿವು ಇರಬೇಕು. ತಾಂತ್ರಿಕತೆಯಿಂದ ಬೆಳೆ ಉತ್ಪಾದನೆ ಹೆಚ್ಚಾಗಬೇಕು. ನೀರಾವರಿ ನಿರಂತರವಾಗಿರಬೇಕು. ಆಗ ಹಸಿರು ಕ್ರಾಂತಿಯಾಗಬಹುದು. ಗುಪ್ತಾ ಸಮಿತಿಯ ಆಲೋಚನೆಯೂ ಆ ದಿಕ್ಕಿನಲ್ಲಿ ಇದೆ. ಇದರ ಫಲಾಫಲಗಳು ಭವಿಷ್ಯದಲ್ಲಿದೆ. ★

ರಿಸರ್ಜೆಂಟ್ ಇಂಡಿಯಾ ಬಾಂಡುಗಳು

ಪಿ. ಎಸ್. ರಮೇಶ್
ಭಾರತೀಯ ಸ್ಟೇಟ್ ಬ್ಯಾಂಕ್, ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು

ಸರ್ಕಾರ ಈಚೆಗೆ ಪೋಖರಾನದಲ್ಲಿ ನಡೆಸಿದ ಪರಮಾಣು ಶಕ್ತಿ ಪ್ರಯೋಗದ ಅನಂತರ ಮುಂದುವರಿದ ದೇಶಗಳು ವಿಧಿಸಿದ ಆರ್ಥಿಕ ದಿಗ್ಬಂಧನ ಹಾಗೂ ಇತರ ಕಾರಣಗಳಿಂದಾಗಿ ಎದುರಿಸ ಬೇಕಾಗಿ ಬಂದ ಮುಗ್ಗಟ್ಟಿನ ಪರಿಹಾರಕ್ಕಾಗಿ ಸರಕಾರ 1998–99ರ ಮುಂಗಡ ಪತ್ರದ ಮಂಡನೆ ಸಂದರ್ಭದಲ್ಲಿ ''ರಿಸರ್ಜೆಂಟ್ ಇಂಡಿಯಾ ಬಾಂಡ್''ಗಳ (ಪುನರುಜ್ಜೀವನ ಭಾರತ ಬಾಂಡ್, ಮೂಲಕ ಸುಮಾರು 200 ಕೋಟಿ ಡಾಲರ್‌ಗಳ ಠೇವಣಿ ಸಂಗ್ರಹಿಸುವ ಉದ್ದೇಶವನ್ನು ಘೋಷಿಸಿತು. ಈ ಬಾಂಡುಗಳನ್ನು ಹೊರ ತರಲು ಭಾರತದ ಅತಿ ದೊಡ್ಡ ಬ್ಯಾಂಕ್ ಆದ ಭಾರತೀಯ ಸ್ಟೇಟ್ ಬ್ಯಾಂಕಿಗೆ ಜವಾಬ್ದಾರಿಯನ್ನು ಕೊಡಲಾಯಿತು. ಅದರಂತೆ ಬ್ಯಾಂಕು ಈ ಬಾಂಡುಗಳನ್ನು ಆಗಸ್ಟ್ 5ರಂದು ಜಾರಿಗೊಳಿಸಿತು, ಭಾರತದಲ್ಲಿ ಮತ್ತು ಎಲ್ಲಾ ಹೊರ ರಾಷ್ಟ್ರಗಳಲ್ಲಿ ಬಾಂಡುಗಳು ಮಾರಾಟಕ್ಕೆ ಬಂದುವು. ಗುರಿ ಮೀರಿ ಮಾರಾಟ ಸಾಧಿಸಿದ್ದರಿಂದ ಆಗಸ್ಟ್ 24ರಂದು ಈ ನೀಡಿಕೆಯನ್ನು ಮುಕ್ತಾಯಗೊಳಿಸಲಾಯಿತು.

ರಿಸರ್ಜೆಂಟ್ ಇಂಡಿಯಾ ಬಾಂಡುಗಳ ಪ್ರಮುಖ ಲಕ್ಷಣಗಳು ಇವು :

1 ಬಾಂಡು ಅಮೇರಿಕದ ಡಾಲರ್ ಬ್ರಿಟಿಷ್ ಪೌಂಡು ಮತ್ತು ಜರ್ಮನಿಯ ಮಾರ್ಕ್‌ಗಳಲ್ಲಿ ನಮೂದಿತ.

2 ಬಾಂಡಿನ ಅವಧಿ 5 ವರ್ಷಗಳು.

3 ಬಾಂಡಿನ ಬಡ್ಡಿದರ ಡಾಲರ್ 7.75%
ಪೌಂಡ್ 8,00%
ಮಾರ್ಕ್ 6.25%

4 ಬಡ್ಡಿಯನ್ನು 6 ತಿಂಗಳಿಗೊಮ್ಮೆ ಪಡೆಯಬಹುದು ಅಥವಾ ಬಡ್ಡಿಯನ್ನು ಅಸಲಿಗೆ ಸೇರಿಸಿ ಚಕ್ರಬಡ್ಡಿ ಪಡೆಯಬಹುದು,

5 ಬಾಂಡುಗಳನ್ನು ಅನಿವಾಸಿ ಭಾರತೀಯರು ತಮ್ಮ ಹೆಸರಿನಲ್ಲಿ ಇಲ್ಲವೆ ನಿವಾಸಿ ಭಾರತೀಯರೊಡನೆ ಜಂಟಿಯಾಗಿ ಪಡೆಯಬಹುದು.

6 ಬಾಂಡುಗಳನ್ನು ಸಾಗರೋತ್ತರ ನಿಗಮಿತ ಸಂಸ್ಥೆಗಳು ಮತ್ತು ಅನಿವಾಸಿ ಭಾರತೀಯ ಹಾಗೂ ಸಾಗರೋತ್ತರ ಸಂಸ್ಥೆಗಳ ಪರವಾಗಿ ಬ್ಯಾಂಕುಗಳು ಕಾಯಿದೆಗೊಳಪಟ್ಟ ಸಾಮರ್ಥ್ಯದಲ್ಲಿ ಕೊಳ್ಳಬಹುದು.

7 ಬಾಂಡುಗಳು ಭಾರತೀಯ ಆದಾಯ ತೆರಿಗೆ, ಆಸ್ತಿ ತೆರಿಗೆ, ದತ್ತಿ ತೆರಿಗೆಯಿಂದ ಮುಕ್ತವಾಗಿದೆ.

8 ಬಾಂಡುಗಳನ್ನು ಮುಕ್ತವಾಗಿ ವರ್ಗಾಯಿಸಬಹುದು.

9 ಬಾಂಡುಗಳನ್ನು ನಿವಾಸಿ ಭಾರತೀಯರಿಗೆ ದಾನವಾಗಿ ವರ್ಗಾಯಿಸಬಹುದು. ಆದರೆ ವರ್ಗಾವಣೆಯನ್ನು ಒಂದು ಸಲ ಮಾತ್ರ ಮಾಡಲು ಅವಕಾಶವಿದೆ.

10 ನಿವಾಸಿ ಭಾರತೀಯರೂ ಬಾಂಡುಗಳಿಗೆ ಸಂಬಂಧಿಸಿದಂತೆ ಎಲ್ಲಾ ತೆರಿಗೆ ಕಾಯ್ದೆಯಿಂದ ಮುಕ್ತವಾಗಿರುತ್ತಾರೆ.

11 ಬಾಂಡಿಗೆ ತೊಡಗಿಸಿದ ಹಣ ಅರ್ಜಿಯ ದಿನದಿಂದಲೇ ಬಡ್ಡಿಗೆ ಅರ್ಹವಾಗುವುದು.

13 ಬಾಂಡುಗಳನ್ನು ಅಡವಿಟ್ಟು ಸಾಲ ಹಾಗೂ ಮುಂಗಡಗಳನ್ನು ಬ್ಯಾಂಕುಗಳ ಮೂಲಕ ಪಡೆಯಬಹುದು.

13 ಬಾಂಡುಗಳ ಮಾಲೀಕನು ಅವಧಿಯ ಅನಂತರವೂ ಅನಿವಾಸೀ ಭಾರತೀಯನಾಗಿದ್ದರೆ ಬಾಂಡಿನ ಹಣವನ್ನು ಬಡ್ಡಿಸಹಿತ ಡಾಲರ್, ಪೌಂಡು ಅಥವಾ ಮಾರ್ಕ್‌ಗಳಲ್ಲಿ ಹಿಂಪಡೆಯಬಹುದು.

14 ಬಾಂಡುಗಳನ್ನು ಕೊಂಡ ಆರು ತಿಂಗಳ ಅನಂತರ ವಾಯಿದೆಗೆ ಮೊದಲೇ ಬಡ್ಡಿಸಹಿತ ಹಿಂಪಡೆಯಬಹುದು. ಆದರೆ ಇಂತಹ ಹಿಂಪಡೆತವನ್ನು ರೂಪಾಯಿಯಲ್ಲಿ ಮಾತ್ರ ಪಾವತಿ ಮಾಡಲಾಗುವುದು.

15 ಈ ಬಾಂಡುಗಳಿಂದ ಸಂಗ್ರಹಿಸಿದ ಮೊಬಲಗನ್ನು ಭಾರತದಲ್ಲಿ ಮೂಲ ಸೌಲಭ್ಯಗಳ ಅಭಿವೃದ್ಧಿಗಾಗಿ ಉಪಯೋಗಿಸಲಾಗುವುದು.

ವಿವಾದದ ಸುಳಿಯಲ್ಲಿ

ಬಾಂಡುಗಳ ಘೋಷಣೆಯ ದಿನದಿಂದ ಹಲವಾರು ವಿವಾದಗಳು ಎದ್ದಿವೆ. ಸರ್ಕಾರ ಬಾಂಡುಗಳನ್ನು ಭಾರತೀಯ ಸ್ಟೇಟ್ ಬ್ಯಾಂಕಿನ ಮೂಲಕ ಪ್ರಸ್ತುತಪಡಿಸಿದುದನ್ನು ಹಲವಾರು ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಪ್ರಶ್ನಿಸಿದವು. ಭಾರತೀಯ ಸ್ಟೇಟ್ ಬ್ಯಾಂಕ್ ಸರ್ಕಾರದ ಘೋಷಣೆಯ ಒಂದು ತಿಂಗಳೊಳಗಾಗಿ ಬಾಂಡುಗಳ ಸ್ವರೂಪವನ್ನು ನಿರ್ಧರಿಸಿ ಪತ್ರಿಕಾ ಪ್ರಕಟಣೆಯೊಂದಿಗೆ ಹೊರಬಿದ್ದಾಗ ಡಾಲರ್‌ಗೆ ಪ್ರತಿಶತ 7.75 ದರ ಅತಿ ಹೆಚ್ಚೆಂದೂ, (ಅಮೇರಿಕದಲ್ಲಿ ಅತಿ ಹೆಚ್ಚು ಬಡ್ಡಿದರ 5.50%) ಇದರಿಂದ ನಷ್ಟಸಂಭವ ಭಾರಿಯಾಯಿತೆಂದೂ ಇದು ಅನಿವಾಸಿ ಭಾರತೀಯರಿಗೆ ಭಾರತ ಸರ್ಕಾರದ ಉಡುಗೊರೆಯೆಂದೂ. ತೆರಿಗೆ ವಿನಾಯಿತಿಯಿಂದ ಕಪ್ಪುಹಣವನ್ನು ಬಿಳಿಯದನ್ನಾಗಿಸಲು

ಮತ್ತೊಂದು ಮಾರ್ಗವೆಂದೂ, ಹವಾಲಾ ಪ್ರಿಯರಿಗೆ ಬಡ್ಡಿಯೊಡನೆ ವಿದೇಶಿ ವಿನಿಮಯವನ್ನು ಗಳಿಸಲು ಸುಲಭೋಪಾಯವೆಂದೂ ಹಲವಾರು ಆರ್ಥಿಕ ತಜ್ಞರು ಮತ್ತು ಸಂಘ ಸಂಸ್ಥೆಗಳ ದೂರು ಬಂತು. ಈ ಬಾಂಡುಗಳ ಮರುಪಾವತಿಯ ವೇಳೆಗೆ ಡಾಲರಿನ ಬೆಲೆ ಕನಿಷ್ಠ 40% ರಷ್ಟು ಏರಿ ಆ ಖರ್ಚನ್ನು ಸರ್ಕಾರವೇ ಭರಿಸಬೇಕಾಗಿರುವುದರಿಂದ ಸಾಮಾನ್ಯ ಪ್ರಜೆಯ ಮೇಲೆ ತೆರಿಗೆಯ ಹೊರೆ ಹೆಚ್ಚಾಗುವುದೆಂಬುದು ಇನ್ನೊಂದು ವಾದ.

ಇದಲ್ಲದೆ, ಬಾಂಡುಗಳ ಮಾರಾಟದ ಸಮಯದಲ್ಲಿ ಅಮೆರಿಕನ್ ಸರ್ಕಾರ ಬಾಂಡುಗಳಿಗೆ ಪರವಾನಗಿ ನೀಡಲು ನಿರಾಕರಿಸಿತು. ಇದರಿಂದ ಆ ದೇಶದಲ್ಲಿ ಮಾರಾಟಕ್ಕೆ ಅಡ್ಡಿಯುಂಟಾಯಿತು.

ವಿವಾದಗಳು, ಅಡ್ಡಿ ಆತಂಕಗಳು ಏನೇ ಇದ್ದರೂ ಅನಿವಾಸಿ ಭಾರತೀಯರು ಒದಗಿಬಂದ ಸದವಕಾಶವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಅತಿ ಹೆಚ್ಚು ಠೇವಣಿಯನ್ನು ನೀಡಿದರು. ಗುರಿ ಮೀರಿ 4.16 ಬಿಲಿಯ ಡಾಲರ್ ಸಂಗ್ರಹವಾಗಿದೆ. ಬಾಂಡುಗಳ ಮಾರಾಟವನ್ನು ಆಗಸ್ಟ್ 24ರಂದು ಮುಕ್ತಾಯಗೊಳಿಸಲಾಯಿತು.

ಯಶಸ್ಸಿನ ಗುಟ್ಟು

ಬಾಂಡುಗಳ ಯಶಸ್ಸಿನ ಅನಿವಾಸಿ ಭಾರತೀಯರಿಗೆ ಸಲ್ಲುತ್ತದೆ. ಸುಮಾರು 75,000 ಅರ್ಜಿಗಳ ಮೂಲಕ ಸಂಗ್ರಹಿಸಿದ ಹಣ ಸುಮಾರು 4.16 ಬಿಲಿಯ ಡಾಲರ್‌ಗಳು. ಈ ಯಶಸ್ಸಿನ ಕಾರಣಗಳು ಹಲವಾರು.

ಬಾಂಡುಗಳ ಮೇಲಿನ ಆಕರ್ಷಕ ಬಡ್ಡಿ, ತೆರಿಗೆ ವಿನಾಯಿತಿ, ವರ್ಗಾವಣೆ ಸೌಲಭ್ಯ, ಹಾಗೂ ವಿದೇಶಿ ಮುದ್ರೆಯಲ್ಲಿಯೇ ಹಿಂಪಡೆವ ಸೌಲಭ್ಯ.

ಅನಿವಾಸಿ ಭಾರತೀಯರಿಗೆ ತಮ್ಮ ತಾಯ್ನಾಡಿನ ಮೇಲಿರುವ ಮಮತೆ, ಪ್ರೀತಿ—ಇತ್ಯಾದಿ.

ಬಾಂಡುಗಳ ಮಾರಾಟಕ್ಕೆ ನೇಮಿಸಲಾದ ಬ್ಯಾಂಕುಗಳಿಗೆ, ಅವರು ಸಂಗ್ರಹಿಸಿದ ಮೊತ್ತದ ಅರ್ಧದಷ್ಟು ಹಣ ಠೇವಣಿ ರೂಪದಲ್ಲಿ ಅತಿ ಕಡಿಮೆ ಬಡ್ಡಿ ದರದಲ್ಲಿ (ಶೇ. 9.50) ಸಿಗುವ ಕರಾರು.

ಹಲವಾರು ವಿದೇಶಿ ಬ್ಯಾಂಕುಗಳು ಅನಿವಾಸಿ ಭಾರತೀಯರಿಗೆ ಕಡಿಮೆ ಬಡ್ಡಿದರದಲ್ಲಿ (6.75%) ಬಾಂಡುಗಳನ್ನು ಕೊಳ್ಳಲು ನೀಡಿದ ಸಾಲ ಸೌಲಭ್ಯ.

ಮುಂದೇನು ?

ಭಾರತಕ್ಕೆ ಸುಮಾರು 4.16 ಕೋಟಿ ಡಾಲರ್‌ಗಳು ದೊರೆತಿವೆ (ಸುಮಾರು ರೂ 17500 ಕೋಟಿ). ಭಾರತಕ್ಕೆ ಒದಗಿದ ಆರ್ಥಿಕ ಬಿಕ್ಕಟ್ಟು ಸದ್ಯಕ್ಕೆ ಸಡಿಲವಾದಂತಿದೆ. ಅಂತರರಾಷ್ಟ್ರೀಯ ಉದರಿ ದರ್ಜೆಯನ್ನು ನಿರ್ಧರಿಸುವ ಸಂಸ್ಥೆಗಳು ನಮ್ಮ ರಾಷ್ಟ್ರದ ಆರ್ಥಿಕ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯ ದರ್ಜೆಯನ್ನು ಕಡಿಮೆ ಮಾಡಿದ್ದರೂ ಭಾರತ ಯಾವ ಬೆದರಿಕೆಗಳಿಗೂ ಅಂಜುವುದಿಲ್ಲವೆಂದು ತೋರಿಸಿಕೊಟ್ಟಂತಾಗಿದೆ. ರಿಸರ್ಜೆಂಟ್ ಇಂಡಿಯಾ ಬಾಂಡುಗಳ ಯಶಸ್ಸಿನಿಂದಾಗಿ ಮುಂದೆ ಯಾವುದೇ ಹಣಕಾಸು ಸಂಸ್ಥೆಗಳಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿದೇಶಿ ಬಂಡವಾಳ ಸಂಗ್ರಹಿಸಲು ಉತ್ತೇಜನ ದೊರೆತಂತಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ, ಅದರಲ್ಲೂ ಮುಖ್ಯವಾಗಿ ಆಗ್ನೇಯ ರಾಷ್ಟ್ರಗಳಲ್ಲಿ ಹಣಕಾಸಿನ ವ್ಯವಸ್ಥೆಯೇ ಕುಸಿದುಬೀಳುತ್ತಿರುವಾಗ ಭಾರತದ ಆರ್ಥಿಕ ಸ್ಥಿತಿ ಸುಭದ್ರವೆಂದು ಸಾಬೀತಾದಂತಿದೆ. ರೂಪಾಯಿಯ ಮೌಲ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಥಿರಗೊಂಡಿದೆ.

ಸರ್ಕಾರ ಘೋಷಿಸಿದಂತೆ ಬ್ಯಾಂಕುಗಳು ಈ ಹಣವನ್ನು ದೇಶದ ಮೂಲ ಸೌಕರ್ಯಗಳ ಅಭಿವೃದ್ಧಿ ಯೋಜನೆಗಳಿಗೆ ಸಾಲ ನೀಡಿ ಅದನ್ನು ಕಾರ್ಯಗತಗೊಳಿಸಬೇಕಾಗಿದೆ. ರಸ್ತೆ, ಸಂಪರ್ಕ ವಿದ್ಯುತ್ತು, ನೀರಾವರಿ, ವಾಯುಯಾನ, ಬಂದರುಗಳು ಇತ್ಯಾದಿ ಯೋಜನೆಗಳು ಕಾರ್ಯಗತವಾಗಬೇಕು. ಸರ್ಕಾರ ಈ ನಿಟ್ಟಿನಲ್ಲಿ ಹೇಗೆ ಕಾರ್ಯೋನ್ಮುಖವಾಗುತ್ತದೋ ನೋಡಬೇಕು. ಲಕ್ಷಾಂತರ ಅನಿವಾಸಿ ಭಾರತೀಯರ ಮತ್ತು ಕೋಟ್ಯಾಂತರ ಭಾರತೀಯರ ಕನಸುಗಳು ನನಸಾಗಬೇಕಾಗಿದೆ. ★

ಸಹಕಾರಿ ಚಳವಳಿಯಲ್ಲಿ ಆಸಕ್ತಿಯುಳ್ಳವರೆಲ್ಲ
ಓದಲೇಬೇಕಾದ ಪುಸ್ತಕ

ಕರ್ನಾಟಕದಲ್ಲಿ ಸಹಕಾರಿ ಬ್ಯಾಂಕುಗಳು

ಲೇಖಕರು :
ಮಲ್ಲಿಕಾರ್ಜುನ ವಗ್ಗನವರ

ಡೆಮಿ 176 ಪುಟಗಳು **ಬೆಲೆ : ರೂ 42**

ಪ್ರತಿಗಳಿಗೆ ಬರೆಯಿರಿ
ಬ್ಯಾಂಕಿಂಗ್ ಪ್ರತಿಷ್ಠಾನ
ಭಾರತೀಯ ಸ್ಟೇಟ್ ಬ್ಯಾಂಕ್, 22 ಜಯಚಾಮರಾಜೇಂದ್ರ ರಸ್ತೆ,
ಬೆಂಗಳೂರು 560 002

ವರ್ಗಾರ್ಹ ಉದರಿ ಪತ್ರ

ಮದನಮೋಹನರಾವ್

ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಕೃಷಿ ಅಭಿವೃದ್ಧಿ ಶಾಖೆ, ಮಾನವಿ 584123, ರಾಯಚೂರು ಜಿಲ್ಲೆ

ಅಂತರರಾಷ್ಟ್ರೀಯ ವ್ಯಾಪಾರದ ಎಲ್ಲ ಭಾಗೀದಾರರು 'ಉದರಿ ಪತ್ರ' ಶಬ್ದದ ಪರಿಚಯವುಳ್ಳವರೆ ಫಲಾನುಭವಿ (ಮಾರಾಟಗಾರ) ಉದರಿ ನಿಬಂಧನೆಗಳ ದೃಢೀಕರಣದ ದಾಖಲೆಗಳನ್ನು ಮಂಡಿಸಿದಾಗ ಒಂದು ನಿರ್ದಿಷ್ಟ ಮೊತ್ತದ ಹಣವನ್ನು ನೀಡುವುದಾಗಿ ಅರ್ಜಿದಾರನ (ಖರೀದಿದಾರನ) ಆದೇಶದ ಮೇರೆಗೆ ಬ್ಯಾಂಕು ನೀಡುವ ಲಿಖಿತ ಒಡಂಬಡಿಕೆಯೇ ಉದರಿ ಪತ್ರ ಎಂದು ವ್ಯಾಖ್ಯಾನಿಸಬಹುದು.

ಉದರಿ ಪತ್ರಗಳ ವಹಿವಾಟು ಅಂತರರಾಷ್ಟ್ರೀಯ ಚೇಂಬರ್ ಆಫ್ ಕಾಮರ್ಸ್‌ನಿಂದ ಪ್ರಕಟಿತ ದಸ್ತೈವಜಾಧಾರಿತ ಉದರಿಗಾಗಿ ಏಕರೂಪದ ಪದ್ಧತಿಗಳು ಮತ್ತು ಆಚರಣೆಗಳು ಎಂಬ ವಿಧಿಗಳ ಗುಚ್ಛದಿಂದ ನಿಯಂತ್ರಿಸಲ್ಪಡುತ್ತದೆ. ಈ ವಿಧಿಗಳನ್ನು ಕಾಲಕಾಲಕ್ಕೆ ಹೊಂದಾಣಿಕೆ ಮಾಡಲಾಗುತ್ತಿದೆ. ಇತ್ತೀಚಿನದೆಂದರೆ 1993ರಲ್ಲಿ ಬದಲಾವಣೆಮಾಡಲಾದ 1994ರ ಜನವರಿ 1ರಿಂದ ಚಾಲ್ತಿಯಲ್ಲಿರುವ ಯು.ಸಿ.ಪಿ. 500.

ಅಂತರರಾಷ್ಟ್ರೀಯ ವಹಿವಾಟಿನಲ್ಲಿ, ವಿಶೇಷವಾಗಿ ಸಕ್ಕರೆ, ಅಕ್ಕಿ, ಖಾದ್ಯತೈಲ ಮತ್ತು ಖನಿಜಗಳಂಥವುಗಳ ವಹಿವಾಟಿನಲ್ಲಿ ಉದರಿಯ ವರ್ಗಾವಣೆ ಒಂದು ಸುಪರಿಚಿತ ವಾಡಿಕೆಯಾಗಿದೆ. ವರ್ಗಾರ್ಹ ಉದರಿಯನ್ನು ಎರಡು ಪ್ರಕಾರಗಳಲ್ಲಿ ಬಳಸಲಾಗುತ್ತಿದೆ.

(1) ಮಾರಾಟಗಾರನೇ ಮಧ್ಯವರ್ತಿಯಾಗಿದ್ದು, ವಸ್ತುಗಳನ್ನು ಒಬ್ಬ ತಯಾರಕ ಅಥವಾ ಅನೇಕ ಪೂರೈಕೆದಾರರಿಂದ ಪಡೆಯುತ್ತಿದ್ದರೆ ಆತ ವರ್ಗಾರ್ಹ ಉದರಿಯನ್ನು ಬಳಸುತ್ತಾನೆ. ಕೆಲವೊಮ್ಮೆ ವರ್ಗಾರ್ಹ ಉದರಿಯನ್ನು ಭಾರತದಲ್ಲಿರುವ ವಿದೇಶಿ ಖರೀದಿದಾರರ ಮುಂತಾಲಿಕರು ನಿಜವಾದ ಪೂರೈಕೆದಾರರಲ್ಲಿ ಬೇಡಿಕೆಯನ್ನು ಸಲ್ಲಿಸಿ ಮೂಲ ವರ್ಗಾರ್ಹ ಉದರಿಯ ತತ್ಸಂಬಂಧಿ ಭಾಗವನ್ನು ನಿಜವಾದ ಪೂರೈಕೆದಾರರಿಗೆ ವರ್ಗಾಯಿಸುತ್ತಾರೆ. ಈ ರೀತಿಯ ಭಾಗಶಃ ವರ್ಗಾವಣೆಯು ಅನುಕೂಲ ಖರೀದಿದಾರರಿಗೆ ಸಣ್ಣ ಮೊತ್ತದ ಅನೇಕ ಉದರಿ ಪತ್ರಗಳನ್ನು ಪೂರೈಕೆದಾರರ ಪರವಾಗಿ ಆರಂಭಿಸುವ ತೊಂದರೆಯನ್ನು ನಿವಾರಿಸುತ್ತದೆ. ಈ ವ್ಯವಸ್ಥೆಯಿಂದಾಗಿ ಖರೀದಿದಾರನಿಗೆ ವಹಿವಾಟು ಹಾಗೂ ನಿರ್ವಹಣಾ ವೆಚ್ಚದಲ್ಲಿ ಗಣನೀಯ ಉಳಿತಾಯವಾಗುತ್ತದೆ. ನಿರ್ದಿಷ್ಟ ತಿಗಳ ಪ್ರಕಾರ ನಿಗದಿತ ಪ್ರಮಾಣದಲ್ಲಿ ವಸ್ತುಗಳನ್ನು ಪೂರೈಸಲು ಪೂರೈಕೆದಾರನ ಸಾಮರ್ಥ್ಯದ ಬಗ್ಗೆ ಖರೀದಿದಾರನ ಮುತಾಲಿಕ ಸಂಪೂರ್ಣವಾಗಿ ತೃಪ್ತನಾದನಂತರವೇ ಉದರಿಯ ವರ್ಗಾವಣೆಯಾಗುವಂತೆ ನೋಡಿಕೊಳ್ಳಲಾಗುವುದು.

ಉದರಿಯ ವರ್ಗಾವಣೆಯನ್ನು 1993ರ ಏಕರೂಪ ಪದ್ಧತಿಗಳು (ಯು.ಸಿ.ಪಿ.) ವಿಧಿ 48 ನಿಯಂತ್ರಿಸುತ್ತದೆ. ಈ ವಿಧಿ ಹತ್ತು ಉಪವಿಧಿಗಳನ್ನು ಒಳಗೊಂಡಿದೆ ವ್ಯಾಪ್ತಿಯಲ್ಲಿ ಇದು ತುಂಬ ವಿಸ್ತಾರವಾದದ್ದಾಗಿದೆ. ಸಾಂದರ್ಭಿಕವಾಗಿ, ವರ್ಗಾರ್ಹ ಉದರಿಪತ್ರಗಳನ್ನು ನಿರ್ವಹಿಸುವವರೆಲ್ಲ ವಿಧಿ 48ರ ಜೊತೆಗೆ ಯು.ಸಿ.ಪಿ. 500ರ ಇತರ ಎಲ್ಲ ವಿಧಿಗಳು ಅನ್ವಯವಾಗುತ್ತವೆಂಬುದನ್ನು ಗಮನದಲ್ಲಿಡಬೇಕು.

ಪ್ರಥಮ ಫಲಾನುಭವಿಯ ವಿನಂತಿಯ ಮೇರೆಗೆ ಪೂರ್ಣ ಅಥವಾ ಆರಿಳಿಗವಾಗಿ ದ್ವಿತೀಯ ಫಲಾನುಭವಿಗೆ ಒಬ್ಬ ಅಥವಾ ಹಲವು ಭಾಗೀದಾರರಿಗೆ ಉದರಿಯ ಲಭ್ಯತೆಯನ್ನು ವರ್ಗಾಯಿಸಬಹುದಾಗಿದ್ದರೆ ಅದನ್ನು ವರ್ಗಾರ್ಹ ಉದರಿಯೆಂದು ಹೇಳಬಹುದು. ಒಂದು ಉದರಿಯನ್ನು ನೀಡುವ ಬ್ಯಾಂಕು ಅದು 'ವರ್ಗಾರ್ಹ'ಶಬ್ದದ ಬದಲಾಗಿ ಬೇರಾವುದೇ ಶಬ್ದ ಅಥವಾ ನುಡಿಗಟ್ಟಿನ ಬಳಕೆಯನ್ನು ಮಾನ್ಯ ಮಾಡಲಾಗಿಲ್ಲ. ಈ ಹಿಂದೆ ಉದರಿಗಳನ್ನು ವರ್ಗಾರ್ಹ ಹಾಗೂ ವಿಭಜನಾರ್ಹ ಎಂದು ಹೇಳಲಾಗುತ್ತಿತ್ತು. ಈ ನುಡಿಗಟ್ಟು ಈಗ ವಿಧಿ 48ರ ಅಧಿನಿಯಮಗಳ ಪ್ರಭಾವದಿಂದ ಕೇವಲ ಒಂದೇ ಶಬ್ದವಾದ 'ವರ್ಗಾರ್ಹ'ದಲ್ಲಿ ಅಡಕವಾಗಿದೆ.

ಈ ವರ್ಗಾರ್ಹ ಉದರಿಯನ್ನು ಅದೇ ದೇಶದಲ್ಲಿರುವ ಅಥವಾ ಬೇರೆ ದೇಶದಲ್ಲಿರುವ ದ್ವಿತೀಯ ಫಲಾನುಭವಿಗೆ ವರ್ಗಾಯಿಸಬಹುದಾಗಿದೆ. ಉದಾ : ಸಿಂಗಪುರದಲ್ಲಿರುವ ಫಲಾನುಭವಿಯ ಪರವಾಗಿ ಜಪಾನಿನಲ್ಲಿರುವ ಒಂದು ಬ್ಯಾಂಕು ತೆರೆದ ವರ್ಗಾರ್ಹ ಉದರಿಯನ್ನು ಭಾರತದಲ್ಲಿರುವ ದ್ವಿತೀಯ ಫಲಾನುಭವಿಗೆ ವರ್ಗಾಯಿಸಬಹುದಾಗಿದೆ. ಉದರಿ ನೀಡುವ ಬ್ಯಾಂಕುಗಳು ಉದರಿಯ ವರ್ಗಾವಣೆಯನ್ನು ಪ್ರಥಮ ಫಲಾನುಭವಿಯ ವಿವೇಚನೆಗೆ ಬಿಡುವ ಬದಲು ಕೆಲವು ದೇಶಗಳಿಗೆ ಕೆಲವೊಮ್ಮೆ ಸೀಮಿತಗೊಳಿಸುತ್ತವೆ.

ನಿಯಂತ್ರಣ ಸೂತ್ರ/ನಿಯಮಗಳು/ಉಪಬಂಧಗಳು

1 ವರ್ಗಾಯಿಸುವ ಬ್ಯಾಂಕಿಗೆ ಉದರಿಯ ವರ್ಗಾವಣೆಗಾಗಿ ಕೇವಲ ಪ್ರಥಮ ಫಲಾನುಭವಿ ಮಾತ್ರ ವಿನಂತಿಸಬಹುದು.

2 ಮುಕ್ತ ಪರಕ್ರಾಮ್ಯ ಉದರಿಯನ್ನು, ಉದರಿಪತ್ರದಲ್ಲಿ ವರ್ಗಾಯಿಸುವ ಬ್ಯಾಂಕೆಂದು ವಿಶೇಷವಾಗಿ ನಮೂದಿಸಲಾದ ಬ್ಯಾಂಕು ಮಾತ್ರ ವರ್ಗಾಯಿಸಬಹುದು.

3 ಮುಕ್ತ ಪರಕ್ರಾಮ್ಯ ಉದರಿಪತ್ರದಲ್ಲಿ ಯಾವ ಬ್ಯಾಂಕನ್ನೂ ವರ್ಗಾಯಿಸುವ ಬ್ಯಾಂಕೆಂದು ನಿಯುಕ್ತಗೊಳಿಸಲಿಲ್ಲ. ಉದರಿಪತ್ರದಲ್ಲಿ ಸೂಕ್ತ ಬದಲಾವಣೆ ಮಾಡುವುದಕ್ಕಾಗಿ ಪ್ರಥಮ ಫಲಾನುಭವಿ ಅರ್ಜಿದಾರರನ್ನು ಸಂಪರ್ಕಿಸಬೇಕು. ಉದರಿಗಳು ಮುಕ್ತ ಪರಕ್ರಾಮ್ಯವಾಗಿಲ್ಲದಿದ್ದಲ್ಲಿ, ಪಾವತಿಸುವುದಕ್ಕೆ, ಮುಂತಳ್ಳಿದ ಪಾವತಿಯ ಒಪ್ಪಂದ ಮಾಡಿಕೊಳ್ಳಲು, ಒಪ್ಪಿಕೊಳ್ಳಲು ಅಥವಾ ಪರಕ್ರಾಮಣಗೊಳಿಸಲು ಅಧಿಕೃತವಾದ ಬ್ಯಾಂಕು ವರ್ಗಾಯಿಸುವ ಬ್ಯಾಂಕಾಗಿ ಕಾರ್ಯನಿರ್ವಹಿಸುವುದು. ರೂಢಿಯಲ್ಲಿ, ಉದರಿಯ ಪ್ರಕಾರವನ್ನು ಗಣನೆಗೆ ತೆಗೆದುಕೊಳ್ಳದೆ ಬಹುತೇಕ ವರ್ಗಾರ್ಹ ಉದರಿಗಳು (ಉದರಿ ಪತ್ರಗಳು) ವರ್ಗಾಯಿಸುವ ಬ್ಯಾಂಕನ್ನು ನಿಯುಕ್ತಗೊಳಿಸುತ್ತವೆ.

4 ವರ್ಗಾಯಿಸುವ ಬ್ಯಾಂಕು ಸ್ಪಷ್ಟವಾಗಿ ಒಪ್ಪಿಕೊಂಡ ವ್ಯಾಪ್ತಿ ಮತ್ತು ರೀತಿಗೂ ಮೀರಿ ಇದನ್ನು ವರ್ಗಾಯಿಸುವುದಕ್ಕೆ ಯಾವ ಹಂಗಿಗೂ ಒಳಗಾಗಿರುವುದಿಲ್ಲ. ಅದು ಉದರಿಯನ್ನು ವರ್ಗಾಯಿಸಲು ಒಪ್ಪಿದಲ್ಲಿ ತನ್ನಲ್ಲಿ ವೆಚ್ಚಗಳ ಪಾವತಿಯಾಗುವವರೆಗೂ ಕಾಯಬಹುದು. ಬೇರೆ ರೀತಿ ಒಪ್ಪಿರದಿದ್ದಲ್ಲಿ ಇಂಥ ವೆಚ್ಚಗಳು ಪ್ರಥಮ ಫಲಾನುಭವಿಯಿಂದ ಪಾವತಿಯಾಗಬೇಕು.

5 ವರ್ಗಾರ್ಹ ಉದರಿಯನ್ನು ಕೇವಲ ಒಂದು ಬಾರಿ ಮಾತ್ರ ವರ್ಗಾಯಿಸಬಹುದು. ತದನಂತರ ಇದನ್ನು ದ್ವಿತೀಯ ಫಲಾನುಭವಿಯ ವಿನಂತಿಯ ಮೇರೆಗೆ ಮೂರನೆಯ ಫಲಾನುಭವಿಗೆ ವರ್ಗಾಯಿಸಲಾಗದು. ದ್ವಿತೀಯ ಫಲಾನುಭವಿ ಹೇಗಾದರೂ ಪ್ರಥಮ ಫಲಾನುಭವಿಗೆ ಉದರಿಯನ್ನು ವರ್ಗಾಯಿಸಬಹುದು. ಇದು ನಿಷೇಧಿತ ವರ್ಗಾವಣೆಯೆನಿಸುವುದಿಲ್ಲ. ಇಂಥ ಸಂದರ್ಭದಲ್ಲಿ ಪ್ರಥಮ ಫಲಾನುಭವಿ ಉದರಿಯನ್ನು ತಾನೇ ಉಪಯೋಗಿಸಿಕೊಳ್ಳಬಹುದು ಅಥವಾ ಇನ್ನೊಬ್ಬ ದ್ವಿತೀಯ ಫಲಾನುಭವಿಗೆ ವರ್ಗಾಯಿಸಬೇಕೆಂದು ವರ್ಗಾಯಿಸುವ ಬ್ಯಾಂಕಿಗೆ ವಿನಂತಿಸಬಹುದು.

ಭಾಗಶಃ ಹಡಗು ರವಾನೆ ಹಾಗೂ ಡ್ರಾಯಿಂಗುಗಳನ್ನು ನಿಷೇಧಿಸದಿದ್ದಲ್ಲಿ, ವರ್ಗಾರ್ಹ ಉದರಿಯನ್ನು ಭಾಗಗಳಾಗಿ ಬೇರೆ ಬೇರೆ ದ್ವಿತೀಯ ಫಲಾನುಭವಿಗಳಿಗೆ ವರ್ಗಾಯಿಸಬಹುದು. ಇಂಥ ಒಟ್ಟು ಎಲ್ಲ ವರ್ಗಾವಣೆಗಳನ್ನು ಒಂದೇ ವರ್ಗಾವಣೆಯೆಂದು ಪರಿಗಣಿಸಲಾಗುವುದು.

ವರ್ಗಾಯಿತ ಉದರಿಯ ನಿಬಂಧನೆಗಳು

ಮೂಲ ಉದರಿ ಪತ್ರದಲ್ಲಿ ಸ್ಪಷ್ಟಪಡಿಸಲಾದ ನಿಯಮ ನಿಬಂಧನೆಗೊಳಪಟ್ಟಂತೆ ಮಾತ್ರ ಉದರಿಯನ್ನು ವರ್ಗಾಯಿಸಬಹುದು. ಆದಾಗ್ಯೂ ಈ ಕೆಳಗಿನ ವಿನಾಯಿತಿಗಳನ್ನು ನೀಡಲಾಗಿದೆ;

1 ಒಟ್ಟು ಉದರಿಯ ಮೊತ್ತ ಹಾಗೂ ವಸ್ತುವಿನ ಬೆಲೆಯನ್ನು ಕಡಿಮೆಗೊಳಿಸಬಹುದಾಗಿದೆ.

2 ಯುಸಿಪಿ 500ರ 44ನೆಯ ವಿಧಿಯಂತೆ ಮಾಲನ್ನು ಹಡಗಿಗೆ ತುಂಬುವ ಅವಧಿ, ಅಂತಿಮ ದಿನಾಂಕ ಹಾಗೂ ದಾಖಲೆಗಳನ್ನು ನೀಡಲು ಇರುವ ಕೊನೆಯ ದಿನಾಂಕ ಇವುಗಳಲ್ಲಿ ಒಂದು ಅಥವಾ ಎಲ್ಲವನ್ನು ನಿರ್ಬಂಧಿಸಬಹುದಾಗಿದೆ. ಅಥವಾ ಮೊಟಕುಗೊಳಿಸಬಹುದಾಗಿದೆ.

3 ವರ್ಗಾಯಿತ ಉದರಿಯಲ್ಲಿ ಒಟ್ಟು ಉದರಿಯ ಮೊತ್ತವನ್ನು ಕಡಿಮೆಗೊಳಿಸಿದಾಗ ವಿಮೆಯನ್ನೊಳಗೊಂಡ ನಿಬಂಧನೆಯ ಶಬ್ದಾವಳಿಗಳನ್ನು ಮೂಲ ಉದರಿಯ ವಿಮೆಯನ್ನು ನೀಡುವಂತೆ ಹೊಂದಿಸಿರಬೇಕು.

4 ವರ್ಗಾಯಿತ ಉದರಿಯಲ್ಲಿ ಪ್ರಥಮ ಫಲಾನುಭವಿಯ ಸ್ಪಷ್ಟ ವಿನಂತಿಯ ಮೇರೆಗೆ, ಪ್ರಥಮ ಫಲಾನುಭವಿಯ ಹೆಸರಿನ ಬದಲಾಗಿ ಮೂಲ ಉದರಿಯ ಅರ್ಜಿದಾರನ ಹೆಸರನ್ನು ನಮೂದಿಸಬಹುದಾಗಿದೆ.

5 ಬಿಕರಿಪಟ್ಟಿಯ ಹೊರತಾಗಿ ಬೇರಾವುದೇ ದಾಖಲೆಗಳಲ್ಲಿ ಅರ್ಜಿದಾರನ ಹೆಸರಿರಬೇಕೆಂಬುದು ಮೂಲ ಉದರಿಯಲ್ಲಿ ನಮೂದಿಸಿದ್ದರೆ ಈ ಬೇಡಿಕೆಯನ್ನು ಪೂರ್ತಿಗೊಳಿಸಬೇಕು.

ಮೂಲ ಉದರಿಯಲ್ಲಿ ತಿಳಿಸಿದ ಹೊರತು ವರ್ಗಾವಣೆಯನ್ನು ವರ್ಗಾಯಿಸುವ ಬ್ಯಾಂಕು ನೀಡುವ ಬ್ಯಾಂಕಿಗೆ ತಿಳಿಸುವ ಅಗತ್ಯವಿಲ್ಲ.

ಹಕ್ಕುಗಳು ಮತ್ತು ಹೊಣೆಗಳು

ಮೂಲ ಉದರಿಯಲ್ಲಿ ನಮೂದಿಸಿದ ಮೊತ್ತಕ್ಕೆ ಹೆಚ್ಚಿಲ್ಲದಂತೆ ಪ್ರಥಮ ಫಲಾನುಭವಿ ದ್ವಿತೀಯ ಫಲಾನುಭವಿಯ ಬಿಕರಿಪಟ್ಟಿ ಹಾಗೂ ದಾಖಲೆಗಳಿಗೆ ಬದಲಾಗಿ ತನ್ನವೇ ಆದ ಬಿಕರಿಪಟ್ಟಿ ಹಾಗೂ ದಾಖಲೆಗಳನ್ನು ನೀಡಬಹುದು ಮತ್ತು ಮಾಲಿನ ಬೆಲೆ ಹಾಗೂ ಪರ್ಯಾಯ ಬಿಕರಿಪಟ್ಟಿಯ ಮೊತ್ತದ ಅಂತರವನ್ನು ಉದರಿಯಲ್ಲಿ ಪಡೆದುಕೊಳ್ಳಬಹುದು.

ಪ್ರಥಮ ಫಲಾನುಭವಿ ತನ್ನದೇ ಆದ ಬಿಕರಿಪಟ್ಟಿ ಹಾಗೂ ದಾಖಲೆಗಳನ್ನು ಪ್ರಥಮ ಬಾರಿ ಬೇಡಿದಾಗಲೂ ವರ್ಗಾಯಿಸುವ ಬ್ಯಾಂಕು ನೀಡದಿದ್ದಾಗ, ಪ್ರಥಮ ಫಲಾನುಭವಿಗೆ ಯಾವುದೇ ಜವಾಬ್ದಾರಿಯಿಲ್ಲದಂತೆ, ವರ್ಗಾಯಿತ ಉದರಿಯಲ್ಲಿ ಪಡೆದ ದಾಖಲೆಗಳನ್ನು ನೀಡುವ ಬ್ಯಾಂಕಿಗೆ ನೀಡಲು ವರ್ಗಾಯಿಸುವ ಬ್ಯಾಂಕು ಅಧಿಕಾರ ಹೊಂದಿದೆ. ಈ ಕ್ರಮ ದ್ವಿತೀಯ ಫಲಾನುಭವಿಯ ಪರವಾಗಿ ಉದರಿ ತೆರೆದ ಕೂಡಲೆ ವರ್ಗಾವಣೆ ಚಲಾವಣೆಗೆ ಬರುವುದರಿಂದ ತೀರ ಅನಿವಾರ್ಯವಾಗಿದೆ.

ಪ್ರಥಮ ಫಲಾನುಭವಿಯ ಮಧ್ಯಸ್ಥಿಕೆಯಿಲ್ಲದೆ ವರ್ಗಾಯಿತ ಉದರಿಯ ಅಡಿಯಲ್ಲಿ ಪಾವತಿಪಡೆಯಲು ದ್ವಿತೀಯ ಫಲಾನುಭವಿ ಹಕ್ಕುಳ್ಳವನಾಗಿರುತ್ತಾನೆ. ಪ್ರಥಮ ಫಲಾನುಭವಿಯದೇ ಆದ ಬಿಕರಿಪಟ್ಟಿ ಹಾಗೂ ಇತರೆ ದಾಖಲೆಗಳನ್ನು ವರ್ಗಾಯಿಸುವ ಹಕ್ಕಿನಿಂದ ಈ ಹಕ್ಕು ಪ್ರತ್ಯೇಕ ಹಾಗೂ ಸ್ವತಂತ್ರವಾಗಿದೆ.

ಮೂಲ ಉದರಿಯ ಅಂತಿಮ ದಿನಾಂಕದ ವರೆಗೆ ಹಾಗೂ ಅದನ್ನೊಳಗೊಂಡಂತೆ ಉದರಿಯ ವರ್ಗಾಯಿತ ಸ್ಥಳದಲ್ಲಿ ಪಾವತಿ ಮಾಡಬೇಕೆಂದು ಅಥವಾ ದ್ವಿತೀಯ ಫಲಾನುಭವಿಗೆ ಪರಕ್ರಾಮಿಸಬೇಕೆಂದು ಪ್ರಥಮ ಫಲಾನುಭವಿ ವಿನಂತಿಸಬಹುದು. ಬೇರೆ ಮಾತಿನಲ್ಲಿ ಹೇಳುವುದಾದರೆ, ದ್ವಿತೀಯ ಫಲಾನುಭವಿ (ಫಲಾನುಭವಿಗಳು) ಮೂಲ ಉದರಿಯಲ್ಲಿ ನಮೂದಿಸಿದ ಅಂತಿಮ ದಿನಾಂಕದವರೆಗೂ ದಾಖಲೆಗಳನ್ನು ಮಂಡಿಸಬಹುದು. ಎಂದರೆ ಪ್ರಥಮ ಫಲಾನುಭವಿಯು ಯಾವ ದಿನಾಂಕದೊಳಗಾಗಿ ಪರ್ಯಾಯಿತ ದಾಖಲೆಗಳನ್ನು ಮಂಡಿಸಬೇಕೆನ್ನುವ ಪ್ರಶ್ನೆ ಬರುತ್ತದೆ. ನ್ಯಾಯೋಚಿತ ಉತ್ತರ ಹಾಗೂ ತಿಳಿವಳಿಕೆಯ ಪ್ರಕಾರ ಪ್ರಥಮ ಫಲಾನುಭವಿ ತನ್ನ ಬಿಕರಿಪಟ್ಟಿ ಹಾಗೂ ದಾಖಲೆಗಳನ್ನು ಅಂತಿಮ ದಿನಾಂಕದ ನಂತರವೂ ಮಂಡಿಸಿ ವ್ಯತ್ಯಾಸದ ಮೊತ್ತವನ್ನು ಪಡೆಯಬಹುದು.

ವರ್ಗಾಯಿಸುವ ಬ್ಯಾಂಕಿಗೆ ಪ್ರಥಮ ಫಲಾನುಭವಿ ವರ್ಗಾವಣೆಗಾಗಿ ಲಿಖಿತ ವಿನಂತಿಯನ್ನು ಸಲ್ಲಿಸಬೇಕು. ಈ ವಿನಂತಿಯಲ್ಲಿ ವರ್ಗಾವಣೆಯ ನಿಯಮಗಳು ವಿಶೇಷವಾಗಿ ದ್ವಿತೀಯ ಫಲಾನುಭವಿಯ ಹೆಸರು ಮತ್ತು ವಿಳಾಸ, ವರ್ಗಾವಣೆಯನ್ನು ದಾಖಲಿಸಬೇಕಾಗಿರುವ ಬ್ಯಾಂಕಿನ ಹೆಸರು ಮತ್ತು ವಿಳಾಸ ಹಾಗೂ ವರ್ಗಾವಣೆಯ ಮೊತ್ತ ಇರಬೇಕು. ವರ್ಗಾವಣೆಯ ಖರ್ಚನ್ನು ಯಾರು ಭರಿಸಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸಿರಬೇಕು. "ಉದರಿ ಪತ್ರದಲ್ಲಿಯ ಇತರ ಎಲ್ಲ ನಿಯಮನಿಬಂಧನೆಗಳು ಯಾವ ಬದಲಾವಣೆಯಿಲ್ಲದೆ ಮುಂದುವರಿಯುತ್ತವೆ" ಎನ್ನುವ ವಾಕ್ಯವನ್ನು ಈ ವಿನಂತಿಪತ್ರ ಒಳಗೊಂಡಿರಬೇಕು.

ವರ್ಗಾವಣೆಯ ವಿನಂತಿ ಬಂದನಂತರ ವರ್ಗಾಯಿಸುವ ಬ್ಯಾಂಕು ಅದು ತನಗೆ ಒಪ್ಪಿಗೆಯಾದಲ್ಲಿ ತನ್ನ ವೆಚ್ಚಗಳನ್ನು ಮುಂಗಡವಾಗಿ ಪಡೆದುಕೊಂಡು ಉದರಿಯನ್ನು ವರ್ಗಾಯಿಸಬಹುದು.

48ನೆಯ ವಿಧಿಯ ಪ್ರಮುಖ ಅಂಶವೆಂದರೆ ಪ್ರಥಮ ಫಲಾನುಭವಿ ವರ್ಗಾಯಿಸುವ ಬ್ಯಾಂಕು ದ್ವಿತೀಯ ಫಲಾನುಭವಿಗೆ ನೀಡುವ ಮೂಲ ಉದರಿಗೆ ತಂತಾನೇ ಹಾಗೂ ಏಕಪಕ್ಷೀಯವಾಗಿ ನೀಡುವ ಬದಲಾವಣೆಗಳ ಆದೇಶವನ್ನು ತಿರಸ್ಕರಿಸುವ ಹಕ್ಕನ್ನು ಪ್ರಥಮ ಫಲಾನುಭವಿ ಉಳಿಸಿಕೊಂಡಿದ್ದಾನೋ ಹೇಗೆ ಎಂಬುದನ್ನು ಸ್ಪಷ್ಟವಾದ ಶಬ್ದಗಳಲ್ಲಿ ತಿಳಿಸಬೇಕು. ವರ್ಗಾಯಿಸುವ ಬ್ಯಾಂಕು ಇಂತಹ ನಿಯಮವನ್ನು ಒಪ್ಪಿದರೆ, ವರ್ಗಾಯಿಸುವಾಗ, ಈ ಬದಲಾವಣೆಯ ಬಗ್ಗೆ ಪ್ರಥಮ ಫಲಾನುಭವಿಯ ಸೂಚನೆಗಳನ್ನು ದ್ವಿತೀಯ ಫಲಾನುಭವಿಗೆ ತಿಳಿಸಬೇಕು. ಇದರಿಂದ ದ್ವಿತೀಯ ಫಲಾನುಭವಿಗೆ ಇಂತಹ ಉದರಿಯನ್ನು ಒಪ್ಪಬೇಕೋ ಬೇಡವೋ ಎಂದು ನಿರ್ಧರಿಸಲು ಬಹಳ ಅನುಕೂಲವಾಗುತ್ತದೆ.

ಯುಸಿಪಿ 500ರ ವಿಧಿ 9ರಲ್ಲಿ ತಿಳಿಸಿರುವಂತೆ. ವರ್ಗಾಯಿತ ಉದರಿಗೆ ಬದಲಾವಣೆಗಳನ್ನು ಒಪ್ಪಲು ಅಥವಾ ತಿರಸ್ಕರಿಸಲು ದ್ವಿತೀಯ ಫಲಾನುಭವಿ ಹಕ್ಕನ್ನು ಹೊಂದಿದ್ದಾನೆ. ಉದರಿಯನ್ನು ಒಬ್ಬರಿಗಿಂತಲೂ ಹೆಚ್ಚು ದ್ವಿತೀಯ ಫಲಾನುಭವಿಗಳಿಗೆ ವರ್ಗಾಯಿಸಿದಾಗ ಯಾವೊಂದು ಬದಲಾವಣೆಯನ್ನೇ ಆಗಲಿ ಒಬ್ಬ ಅಥವಾ ಅದಕ್ಕೂ ಹೆಚ್ಚು ದ್ವಿತೀಯ ಫಲಾನುಭವಿಗಳು ತಿರಸ್ಕರಿಸಿದಾಗ್ಯೂ ಉಳಿದ ದ್ವಿತೀಯ ಫಲಾನುಭವಿಗಳಿಗೆ ಒಪ್ಪಿಗೆಯಾದ ಬದಲಾವಣೆ (ಒಪ್ಪಿದವರಿಗೆ) ಅನೂರ್ಜಿತವಾಗುವುದಿಲ್ಲ.

ಉದರಿ ಪತ್ರದಲ್ಲಿನ ಬದಲಾವಣೆಗಳ ಕುರಿತಾದ ಪ್ರಥಮ ಹಾಗೂ ದ್ವಿತೀಯ ಫಲಾನುಭವಿಗಳ ಹಕ್ಕುಗಳು ಕ್ಲಿಷ್ಟಕರವಾಗಿ ಕಂಡರೂ, ಮಾಡಿದ ಬದಲಾವಣೆಗಳನ್ನು ತಿರಸ್ಕರಿಸುವುದು ಭಾರತೀಯ ಪರಿಸರದಲ್ಲಿ ತೀರ ಅಪರೂಪವಾದ್ದರಿಂದ, ವರ್ಗಾರ್ಹ ಉದರಿಯ ವಹಿವಾಟು ಸುಸೂತ್ರವಾಗಿ ಸಾಗುತ್ತದೆ.

ಮಾರಾಟಗಾರರೇ ಎಚ್ಚರಿಕೆ! ಹುಷಾರಾಗಿರಿ

ಕೊನೆಯದಾಗಿ, ಒಂದು ಎಚ್ಚರಿಕೆಯ ಮಾತು ಅಪ್ರಾಸಂಗಿಕವೇನಲ್ಲ. ಅಂತರರಾಷ್ಟ್ರೀಯ ವಹಿವಾಟಿನಲ್ಲಿ ವರ್ಗಾರ್ಹ ಉದರಿ ಪತ್ರ ಉಪಯುಕ್ತ ಪಾತ್ರ ನಿರ್ವಹಿಸುತ್ತಿದ್ದಾಗ್ಯೂ ಕೆಲ ನಯವಂಚಕರು ಇದನ್ನು ದುರುಪಯೋಗಪಡಿಸಿಕೊಳ್ಳುವುದುಂಟು. ಈ ಮಧ್ಯವರ್ತಿಗಳು ರಫ್ತು ವ್ಯವಹಾರಕ್ಕೆ ಬರುವ ಅಮಾಯಕರನ್ನು ದುರುಪಯೋಗಪಡಿಸಿಕೊಳ್ಳುವುದುಂಟು; ವಿಶೇಷವಾಗಿ ಗ್ರಾನೈಟ್ ಮತ್ತು ಅಕ್ಕಿಯ ರಫ್ತು ವ್ಯವಹಾರದಲ್ಲಿ ಇವರು ತಮ್ಮ ಪರವಾಗಿ ವರ್ಗಾರ್ಹ ಉದರಿ ಪತ್ರವನ್ನು ತೆರೆಯುತ್ತಾರೆ ಹಾಗೂ ಇದನ್ನು ಅಮಾಯಕ ರಫ್ತುದಾರರಿಗೆ ಭಾರೀ ಮೊತ್ತದ ಹಣ ಪಡೆದು ವರ್ಗಾಯಿಸಲು ವ್ಯವಸ್ಥೆ ಮಾಡುತ್ತಾರೆ. ಉದರಿ ಪತ್ರಗಳು ನಿಜವಾಗಿರುತ್ತವೆ. ಆದರೆ ಅವುಗಳಲ್ಲಿ ದುರ್ಭರ ಹಾಗೂ ಪೂರ್ತಿಗೊಳಿಸಲಾಗದಂತಹ ನಿಯಮಗಳಿರಬಹುದು, ಅವನ್ನು ಬದಲಾವಣೆ ಮಾಡಿದ ಹೊರತು ಮಾಲನ್ನು ಹಡಗಿಗೆ ಕಳುಹಿಸಲಾಗದಂತೆ ಅದನ್ನು ನೀಡಲಾಗಿರುತ್ತದೆ. ಉದರಿಯನ್ನು ವರ್ಗಾಯಿಸುವಾಗ ಪ್ರಥಮ ಫಲಾನುಭವಿ ವರ್ಗಾವಣೆಯಾದನಂತರ ಬದಲಾವಣೆಗಳನ್ನು ಮಾಡುವುದಾಗಿ ಭರವಸೆ ನೀಡಿರುತ್ತಾನೆ ಆದರೆ ಈ ಬದಲಾವಣೆಗಳನ್ನೆಂದೂ ಮಾಡದೆ ಹೋಗಬಹುದು. ಹೀಗಾಗಿ ಈ ಉದರಿ ಪತ್ರ ದ್ವಿತೀಯ ಫಲಾನುಭವಿಗೆ ಒಂದು ನಿರುಪಯೋಗಿ ದಸ್ತಾವೇಜಾಗುತ್ತದೆ.

ಕೆಲವೊಮ್ಮೆ ಬ್ಯಾಂಕುಗಳೂ ಇಂಥ ಉದರಿ ಪತ್ರಗಳ ಆಧಾರದ ಮೇಲೆ ಮಾಲನ್ನು ಹಡಗಿಗೆ ಹೇರಲು ಮುಂಚಿನ ಉದರಿಯನ್ನು ಅವಸರದಿಂದ ಬಿಡುಗಡೆಮಾಡಿ ವಂಚನೆಯ ಜಾಲದಲ್ಲಿ ಸಿಕ್ಕಿಬೀಳುವುದುಂಟು. ವರ್ಗಾರ್ಹ ಉದರಿ ಪತ್ರವನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ಖರೀದಿದಾರರು ಹಾಗೂ ಮಧ್ಯವರ್ತಿಗಳ ಬಗ್ಗೆ ವಿಶದವಾಗಿ ವಿಚಾರಣೆ ಮಾಡದೆ ಅನ್ಯಮಾರ್ಗವಿಲ್ಲ. ★

With best compliments from

Phone : 6650234
6650569
8422828

M.T.R. DISTRIBUTORS P. LTD.,
No. 2971, I FLOOR,
'ESTURI TOWERS', K. R. ROAD,
BSK II STAGE,
BANGALORE-560 070

M.T.R. FOOD PRODUCTS
No. 2971, I FLOOR,
'ESTURI TOWERS', K. R. ROAD,
BSK II STAGE,
BANGALORE-560 070

PRODUCTS

INSTANT FODD MIXES	:	Rava Idli, Gulab Jamun, Rava Dosa, Vada, Dosa, Bisibelebath, Rasam, Sambar, Kharabath, Rice Idli, Badam Feast.
POWDERS	:	Sambar, Rasam, Puliyogare, Vanghibath, Chatney.
SPICES	:	Chilli, Turmerio, Dhaniya, Jeera, Pepper.
MASALAS	:	Garam Masala, Channa, Bisibelebath, Pav-Bhaji, Pulao, Spiced Dhal.
PICKLES	:	Mango Full, Mango Sliced, Mango Avakai, Mixed Vegetable, Lemon, Gongura, Hog-Plum, Tomato.

With Best Compliments From

M/s Welfab Technologies (P.) Ltd.

Engineers and Fabricators

NO. 357 BILEKAHALLI LAYOUT
BANNERGHATTA ROAD
BANGALORE–560 076

Phone : **663 2473, 644 296**
Fax : **91–80–664 2606**

ರಫ್ತು ಸಾಲಗಳಲ್ಲಿ ನಿಷ್ಕ್ರಿಯ ಆಸ್ತಿಗಳು ಹೆಚ್ಚೇಕೆ?

ಎಸ್. ಸೀತಾರಾಮು

ಸಹಾಯಕ ಪ್ರಧಾನ ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ವಿದೇಶಿ ವ್ಯಾಪಾರ ಶಾಖೆ, ಬೆಂಗಳೂರು-1

ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಪ್ರಗತಿಯಲ್ಲಿ ಆ ರಾಷ್ಟ್ರದ ರಫ್ತು ವ್ಯಾಪಾರ ಮಹತ್ವದ ಪಾತ್ರವನ್ನು ವಹಿಸುತ್ತದೆ. ಒಂದು ದೇಶದ ಪ್ರಾಕೃತಿಕ ಸಂಪನ್ಮೂಲ, ಕೃಷಿ ಉತ್ಪಾದನ ವಿಶೇಷಗಳು, ತಾಂತ್ರಿಕತೆಯ ಹಂತ—ಇವು ಆ ದೇಶದ ರಫ್ತು ವ್ಯಾಪಾರವನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ. ನಮ್ಮ ದೇಶದಲ್ಲಿ ಅಭಿವೃದ್ಧಿಗೆ ಬೇಕಾಗುವ ಅತ್ಯಮೂಲ್ಯ ವಿದೇಶೀ ವಿನಿಮಯವನ್ನು ತಂದು ಕೊಡುವುದರಿಂದ ರಫ್ತು ವ್ಯಾಪಾರಕ್ಕೆ ಬ್ಯಾಂಕುಗಳು ಆದ್ಯತೆಯ ಮೇಲೆ ಸಾಲ ನೀಡುತ್ತಾ ಬಂದಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳನ್ನು ಕಾಡುತ್ತಿರುವ ನಿಷ್ಕ್ರಿಯ ಆಸ್ತಿಗಳ ಸಮಸ್ಯೆ ರಫ್ತು ವ್ಯಾಪಾರದಲ್ಲಿ ಸ್ವಲ್ಪ ಹೆಚ್ಚಾಗಿರುವುದರಿಂದ ಬ್ಯಾಂಕುಗಳು ಹೆಚ್ಚು ತಲೆ ಕೆಡಿಸಿಕೊಳ್ಳುವಂತಾಗಿದೆ. ರಫ್ತು ಸಾಲಗಳಲ್ಲಿ ನಿಷ್ಕ್ರಿಯ ಆಸ್ತಿಗಳೇಕೆ ಹೆಚ್ಚುತ್ತಿವೆ, ಈ ಹೆಚ್ಚಳಿಕೆಯನ್ನು ತಡೆಯಲು ಬ್ಯಾಂಕುಗಳು ಯಾವ ಮಾರ್ಗೋಪಾಯಗಳನ್ನು ಅನುಸರಿಸಬಹುದು ಹಾಗೂ ನಿಷ್ಕ್ರಿಯ ಆಸ್ತಿಗಳಾದ ರಫ್ತು ಸಾಲಗಳ ವಸೂಲಿಯ ಮುನ್ನ ಹೇಗೆ ತ್ವರಿತಗೊಳಿಸಬಹುದು ಎಂಬ ಬಗ್ಗೆ ಈ ಲೇಖನದಲ್ಲಿ ವಿವೇಚಿಸಲಾಗಿದೆ.

ರಫ್ತು ಸಾಲಗಳಲ್ಲಿ ನಿಷ್ಕ್ರಿಯ ಆಸ್ತಿಗಳು ಹೆಚ್ಚಲು ಕಾರಣಗಳು

ರಫ್ತು ವ್ಯಾಪಾರ ಎರಡು ದೇಶಗಳ ನಡುವೆ ನಡೆಯುವ ವ್ಯವಹಾರವಾದ್ದರಿಂದ, ಆಮದು ಮಾಡಿಕೊಳ್ಳುವ ದೇಶದ ಆರ್ಥಿಕ ನೀತಿ, ನಿಯಮ, ನಿಬಂಧನೆಗಳು ಮತ್ತು ಅಲ್ಲಿನ ರಾಜಕೀಯ ಸ್ಥಿರತೆ, ಇವು ನಮ್ಮ ದೇಶದಿಂದಾಗುವ ರಫ್ತುಗಳ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ ಎಚ್.ಎಂ.ಟಿ. ಸಂಸ್ಥೆ ಈಥಿಯೋಪಿಯ ದೇಶಕ್ಕೆ ಸುಮಾರು ಹತ್ತು ಕೋಟಿ ರೂಪಾಯಿ ಮೌಲ್ಯದ ಯಂತ್ರೋಪಕರಣಗಳನ್ನು ರಫ್ತು ಮಾಡಿತ್ತು. ಆ ರಫ್ತಿನ ಹಣ ಪಾವತಿಯಾಗುವ ಮುನ್ನವೇ ಅಲ್ಲಿನ ಸರಕಾರ ಹೋಗಿ ಕ್ರಾಂತಿ ದಳದ ಸರಕಾರ ಬಂದಾಗ, ಹೊಸ ಸರಕಾರ ಎಚ್.ಎಂ.ಟಿ.ಯಿಂದ ಆಮದಾದ ಯಂತ್ರೋಪಕರಣಗಳನ್ನು ಹಿಂದಿನ ಸರಕಾರ ತಮ್ಮ ಮೇಲೆ ಉಪಯೋಗಿಸುವ ಅಸ್ತ್ರ ತಯಾರಿಕೆಯಲ್ಲಿ ಬಳಸುತ್ತಿತ್ತೆಂದು ಹೇಳಿ, ಆ ಆಮದಿನ ಹಣವನ್ನು ಪಾವತಿ ಮಾಡಲೇ ಇಲ್ಲ. ಸುಮಾರು ಈಗ ಒಂದೂವರೆ ವರ್ಷಗಳಿಂದ ಉಂಟಾಗಿರುವ ಪೂರ್ವ ಏಷ್ಯಾ ರಾಷ್ಟ್ರಗಳ ಆರ್ಥಿಕ ನಷ್ಟದಿಂದಾಗಿ ಅಲ್ಲಿಗೆ ನೂಲು ಮತ್ತು ಬಟ್ಟೆಗಳನ್ನು ರಫ್ತು ಮಾಡುತ್ತಿದ್ದ ಅನೇಕ ಉದ್ದಿಮೆಗಳು ಇಂದು ತೀವ್ರ ನಷ್ಟಕ್ಕೆ ಒಳಗಾಗಿವೆ. ಆರೋಗ್ಯದ ದೃಷ್ಟಿಯಿಂದಲೋ ಪರಿಸರ ಮಾಲಿನ್ಯದ ದೃಷ್ಟಿಯಿಂದಲೋ ಕೆಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಜಾರಿಗೊಳಿಸುವ ತಡೆಗಳು, ನಿಷೇಧಗಳು ನಮ್ಮ ದೇಶದ ರಫ್ತಿನ ಮೇಲೆ ಪ್ರಭಾವ ಬೀರಬಹುದು. ಉದಾಹರಣೆಗೆ 1994–95ರಲ್ಲಿ ಅಮೆರಿಕ ದೇಶ ಭಾರತದಿಂದ ರಫ್ತಾಗುತ್ತಿದ್ದ ಘಾಗ್ರಾ (ಒಂದು ಬಗೆಯ ಸಿದ್ಧಪಡಿಸಿದ ಹೆಂಗಸರ ಉಡುಪು) ಬೇಗೆ, ಬೆಂಕಿ ಹೊತ್ತುಕೊಳ್ಳುವಂಥವು ಎಂದು ಅವುಗಳ ಆಮದು ಮತ್ತು ಮಾರಾಟವನ್ನು ನಿಷೇಧಿಸಿತು. ಈ ಬಟ್ಟೆಗಳನ್ನು ಆಗಲೇ ರಫ್ತು ಮಾಡಿದ್ದ ಹಾಗೂ ರಫ್ತಿಗಾಗಿ ತಯಾರಿಸಿ ಇಟ್ಟಿದ್ದ ಅನೇಕ ಘಟಕಗಳು ಇದರಿಂದಾಗಿ ತೊಂದರೆಗೊಳಗಾಗಬೇಕಾಯಿತು.

ಕೆಲವೊಮ್ಮೆ ಒಂದು ಉದ್ದಿಮೆಯ ಪರಿಸರದಲ್ಲಾಗುವ ಬದಲಾವಣೆಯಿಂದಾಗಿ, ಇಡೀ ಉದ್ದಿಮೆಯ ಮೇಲೆ ತೀವ್ರ ಪರಿಣಾಮ ಉಂಟಾಗಿ, ಆ ಉದ್ದಿಮೆಗೆ ಸಂಬಂಧಪಟ್ಟ ರಫ್ತು ಘಟಕಗಳು ಅಸ್ವಸ್ಥವಾಗಬಹುದು. ಈ ರಫ್ತಿನಿಂದ ಹೊರ ಬಂದ ನಂತರ ಪೋಲೆಂಡ್, ಅಲ್ಬೇನಿಯ, ಲಾಟ್ವಿಯ ಮುಂತಾದ ಪಶ್ಚಿಮ ಯುರೋಪ್ ರಾಷ್ಟ್ರಗಳಲ್ಲಿ ಉಂಟಾದ ಪ್ರತಿಸ್ಪರ್ಧೆ, ಯುರೋಪಿನ ರಾಷ್ಟ್ರಗಳು ಜಾರಿಗೆ ತಂದ "ಅಜೋ" ರಸಾಯನಿಕಗಳನ್ನು ಉಪಯೋಗಿಸಿ ಬಣ್ಣ ಕೊಟ್ಟ ಚರ್ಮದಿಂದ ಮಾಡಿದ ವಸ್ತುಗಳ ಆಮದಿನ ನಿಷೇಧ, ಆ ರಾಷ್ಟ್ರಗಳಲ್ಲಿನ ಆರ್ಥಿಕ ಹಿಂಜರಿತ ಚರ್ಮ ಹದ ಮಾಡುವ ಘಟಕಗಳು ಕಡ್ಡಾಯವಾಗಿ ಕೊಳಚೆ ಸಂಸ್ಕರಣ ಮಾಡುವ ಯಂತ್ರಗಳನ್ನು ಹೊಂದಿರಬೇಕೆಂದು ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಮಾಡಿದ ಆದೇಶದಿಂದ, ಚರ್ಮ ಹದ ಮಾಡುವ ಅನೇಕ ಘಟಕಗಳು ಮುಚ್ಚಲ್ಪಟ್ಟು, ಹದ ಮಾಡಿದ ಚರ್ಮದ ಅಭಾವ ಉಂಟಾಗಿ ಅವುಗಳ ಬೆಲೆ ಬಹಳ ಮೇಲೇರಿದ್ದು, ಮುಂತಾದ ಅನೇಕ ಕಾರಣಗಳಿಂದಾಗಿ, ಮೂರು ವರ್ಷಗಳಿಂದ ಚರ್ಮದ ರಫ್ತು ವ್ಯಾಪಾರ ತೀವ್ರವಾಗಿ ಕುಂಠಿತವಾಯಿತು. ಪರಿಸ್ಥಿತಿ ಇನ್ನೂ ಹಾಗೆಯೇ ಮುಂದುವರೆದಿದ್ದು, ಇಡೀ ದೇಶದಲ್ಲಿ ಕೇವಲ ಬೆರಳೆಣಿಕೆಯಷ್ಟು ಘಟಕಗಳು ಮಾತ್ರ ರಫ್ತು ಮಾಡಲು ಸಮರ್ಥವಾಗಿವೆ. ಈ ಕಾರಣದಿಂದಾಗಿ ಚರ್ಮೋದ್ಯಮಕ್ಕೆ ಸಾಲ ನೀಡಿದ್ದ ಬ್ಯಾಂಕ್ ಶಾಖೆಗಳಲ್ಲೆಲ್ಲಾ ನಿಷ್ಕ್ರಿಯ ಆಸ್ತಿಗಳು ವಿಶೇಷವಾಗಿ ಬೆಳೆದು ನಿಂತಿವೆ.

ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಿಂದ

ರಫ್ತಾಗುವ ವಸ್ತುಗಳಲ್ಲಿ ಗ್ರಾನೈಟ್ ಕಲ್ಲುಗಳು ಮುಖ್ಯವಾದವು. ಆದರೆ ಈ ರಾಜ್ಯ ಸರಕಾರಗಳು ಗ್ರಾನೈಟ್ ಕಲ್ಲುಗಳ ಉತ್ಪಾದನೆಯ ಸಹಿ, ನೀತಿ ನಿಯಮವನ್ನು ಹೊಂದಿರದೆ, ಪದೇ ಪದೇ ನಿಯಮವನ್ನು ಬದಲಾಯಿಸುವುದು, ಉತ್ಪಾದನಾ ಶುಲ್ಕವನ್ನು ಹೆಚ್ಚಿಸುವುದು ಈ ಉದ್ಯಮಕ್ಕೆ ತೊಡಕಾಗಿದೆ. ಅದರಲ್ಲೂ ಗ್ರಾನೈಟ್ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲು ಹೆಚ್ಚಿನ ಬಂಡವಾಳ ಹೂಡಬೇಕಾಗುತ್ತದೆ. ಆ ಹೂಡಿಕೆಗೆ ತಕ್ಕದಾದ ಲಾಭ ಬರಬೇಕಾದರೆ, ಅವುಗಳ ವಾರ್ಷಿಕ ವಹಿವಾಟು ಹೆಚ್ಚಿನದಾಗಿರಬೇಕಾಗುತ್ತದೆ. ಆದರೆ ಈ ತರಹದ ಬಹಳಷ್ಟು ಘಟಕಗಳು ಸರಿಯಾದ ಒರಟು ಬಂಡೆಗಳ ತಾರುಗಳು ದೊರೆಯದೆ ಇಂದು ನಿಷ್ಕ್ರಿಯವಾಗಿವೆ.

ಸಂಪರ್ಕ ಸಾಧನಗಳು ಉತ್ತಮಗೊಳ್ಳುತ್ತಿರುವಂತೆಯೆ, ಇಂದು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಹೆಚ್ಚು ಹೆಚ್ಚು ಸ್ಪರ್ಧೆಯನ್ನು ಕಾಣುತ್ತಿದ್ದೇವೆ. ಈ ಸ್ಪರ್ಧೆಯನ್ನು ಎದುರಿಸುವ ಮಾರ್ಗವೆಂದರೆ ರಫ್ತು ಮಾಡುವ ವಸ್ತುಗಳ ಶೀಘ್ರ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದು ಮತ್ತು ಕರಾರು ಸಮಯದಲ್ಲಿ ವಸ್ತುಗಳನ್ನು ರವಾನಿಸುವುದು. ಆದರೆ ನಮ್ಮ ದೇಶದ ಬಹಳ ರಫ್ತುದಾರರು, ಈ ಎರಡು ದಿಶೆಯಲ್ಲಿ ವಿಫಲರಾಗಿದ್ದು, ತೊಂದರೆಗೆ ಒಳಗಾಗಿದ್ದಾರೆ. ಒಮ್ಮೆ ರಫ್ತು ಮಾಡಿದ ಮಾಲನ್ನು ಗುಣಮಟ್ಟದ ಆಧಾರದ ಮೇಲೆ ವಿದೇಶಿ ಖರೀದಿದಾರ ನಿರಾಕರಿಸಿದರೆ, ಆ ಮಾಲನ್ನು ನಮ್ಮ ದೇಶಕ್ಕೆ ವಾಪಸ್ಸು ತರಲು ಬಹಳ ವೆಚ್ಚವಾಗುವುದರಿಂದ ವಾಪಸ್ಸು ತರಲೂ ಆಗದೆ, ಅಲ್ಲಿ ಮಾರಲೂ ಆಗದೆ ರಫ್ತುದಾರ ನಷ್ಟ ಅನುಭವಿಸಬೇಕಾಗುತ್ತದೆ. ಕೆಲವು ರಫ್ತು ಘಟಕಗಳು ವಿದೇಶದಲ್ಲಿ ಒಬ್ಬನೇ ಖರೀದಾರನೊಡನೆ ವ್ಯವಹಾರ ಮಾಡುವುದುಂಟು. ರಫ್ತು ಮಾಡಬೇಕೆಂಬ ಉತ್ಸಾಹದಲ್ಲಿ ಉದರಿ ಪತ್ರದ ಸಹಾಯವನ್ನೂ ಯಾಚಿಸದೆ ನೇರ ವ್ಯವಹಾರ ಮಾಡಿ ಕಷ್ಟಕ್ಕೊಳಗಾಗುವುದನ್ನು ನೋಡುತ್ತೇವೆ.

ರಫ್ತು ಮಾಡಬಯಸುವ ವ್ಯಕ್ತಿಗೆ, ಆ ಉದ್ದಿಮೆಯ ಸಂಪೂರ್ಣ ವ್ಯವಹಾರಜ್ಞಾನವಿರಬೇಕು. ಯಾರೊಡನೆ ವಿದೇಶದಲ್ಲಿ ವ್ಯವಹಾರ ಮಾಡುತ್ತಾರೋ ಅವರ ಆರ್ಥಿಕ ಕ್ಷಮತೆ, ಮಾರುಕಟ್ಟೆ ಜಾಲ ಮುಂತಾದ ವಿವರ ತಿಳಿದಿರಬೇಕು. ಹಾಗಿಲ್ಲದೆ ಯಾರೋ ರಫ್ತು ವ್ಯಾಪಾರದಿಂದ ಹಣ ಸಂಪಾದಿಸಿದರೆಂದು ಮುಂದೆಯು ಬುದ್ಧಿಯಿಂದ ಈ ಉದ್ಯಮದಲ್ಲಿ ಧುಮುಕಿದ ಬಹಳಷ್ಟು ಮಂದಿ ನಷ್ಟಕ್ಕೀಡಾಗಿದ್ದಾರೆ (ಸಿದ್ಧಪಡಿಸಿದ ಉಡುಪು ಹಾಗೂ ಗ್ರಾನೈಟ್ ರಫ್ತು ವ್ಯಾಪಾರದಲ್ಲಿ ಇದನ್ನು ಹೆಚ್ಚಾಗಿ ಕಾಣುತ್ತೇವೆ). ಈ ತರಹದ ರಫ್ತುಗಾರರಿಗೆ ಸಾಲ ಕೊಡುವುದರಿಂದ ಬ್ಯಾಂಕಿನಲ್ಲಿ ನಿಷ್ಕ್ರಿಯ ಆಸ್ತಿಗಳೂ ಬೆಳೆಯುತ್ತವೆ.

ಸರಕಾರ ರಫ್ತು ವ್ಯಾಪಾರಕ್ಕೆ ಪ್ರಾಮುಖ್ಯ ಕೊಡುತ್ತಿದ್ದರೂ ಆದರ ಕೆಲವೊಂದು ನೀತಿ ನಿಯಮಗಳು, ಕಾರ್ಯ ವಿಧಾನ ರಫ್ತುದಾರರನ್ನು ತೊಂದರೆಗೀಡಾಗಿಸುತ್ತವೆ. ಉದಾಹರಣೆಗೆ :

(ಅ) ರೇಷ್ಮೆ ರಫ್ತುದಾರರು ತಮಗೆ ಬೇಕಾದ ಕಚ್ಚಾ ರೇಷ್ಮೆಯನ್ನು ಚೀನಾ ದೇಶದಿಂದ ಆಮದು ಮಾಡಿಕೊಳ್ಳುತ್ತಾರೆ. ಹೀಗೆ ಆಮದು ಮಾಡಿಕೊಂಡ ನೂರು ರೂಪಾಯಿ ಮೌಲ್ಯದ ರೇಷ್ಮೆಗೆ ಕನಿಷ್ಠ ಇನ್ನೂರು ರೂ. ಮೌಲ್ಯ ಹೆಚ್ಚಳ ಮಾಡಿ ಅಂದರೆ ಮುನ್ನೂರು ರೂ.ಗೆ ರಫ್ತು ಮಾಡಬೇಕೆಂಬ ನಿಯಮವನ್ನು ಸರಕಾರ ಮಾಡಿತು. ಈ ಎಲ್ಲಾ ಹೆಚ್ಚಳ ಅನುಪಾತ ಬಹಳ ಹೆಚ್ಚಿದ್ದು ನಮ್ಮ ದೇಶದ ರಫ್ತುದಾರರು ಅನ್ಯ ದೇಶದ ರಫ್ತುದಾರರೊಂದಿಗೆ ಸ್ಪರ್ಧಿಸಲು ಕಷ್ಟವಾಗುತ್ತದೆ.

(ಆ) ಸುಂಕ ವಾಪಸಾತಿ ಯೋಜನೆಯಲ್ಲಿ/ರಫ್ತುಗಾರರಿಗೆ ಬಿಡುಗಡೆ ಮಾಡಬೇಕಾದ ಆಮದು ಶುಲ್ಕವನ್ನು ಬಹಳ ತಡ ಮಾಡಿ ಬಿಡುಗಡೆ ಮಾಡುವುದರಿಂದ ಉಂಟಾಗುವ ದುಡಿಯುವ ಬಂಡವಾಳದ ಕೊರತೆ.

(ಇ) ಬಿದಿರು ಮರಗಳನ್ನು ಕಡಿಯಬಾರದೆಂಬ ಆದೇಶದಿಂದ ಅಗರಬತ್ತಿ ತಯಾರಿಸುವ ಘಟಕಗಳಿಗೆ ಆವಶ್ಯಕವಾದ ಬಿದಿರು ಕಡ್ಡಿ ದೊರಕದೇ ಹೋಗಿದ್ದು.

ಈ ಮೇಲೆ ಹೇಳಿದ ಕಾರಣಗಳಲ್ಲದೇ ದೇಶೀಯ ಘಟಕಗಳು ಎದುರಿಸುವಂಥ ಕಾರ್ಮಿಕ ಸಮಸ್ಯೆಗಳು, ಬೇಡಿಕೆ ಇಲ್ಲದಿದ್ದರೂ ಉತ್ಪಾದನಾ ಕ್ಷಮತೆಯನ್ನು ಹೆಚ್ಚಿಸುವಲ್ಲಿ ಹೂಡಿದ ಬಂಡವಾಳ, ಪರಿಯೋಜನೆ ಜಾರಿಗೊಳಿಸುವಲ್ಲಿನ ವಿಳಂಬದಿಂದ ಉಂಟಾಗುವ ಹೆಚ್ಚಿನ ಖರ್ಚು ಮತ್ತು ನಷ್ಟ, ಕೆಳಮಟ್ಟದ ತಾಂತ್ರಿಕತೆ ಮುಂತಾದ ಸಮಸ್ಯೆಗಳಿಂದ ರಫ್ತು ಘಟಕಗಳು ನಿಷ್ಕ್ರಿಯವಾಗುತ್ತವೆ.

ರಫ್ತು ಸಾಲಗಳು ನಿಷ್ಕ್ರಿಯ ಆಸ್ತಿಗಳಾಗದಂತೆ ತಡೆಗಟ್ಟುವುದು ಹೇಗೆ?

ಮೇಲೆ ತಿಳಿಸಿದ ಬಹಳಷ್ಟು ಬಾಹ್ಯ ಕಾರಣಗಳಿಂದ ರಫ್ತುದಾರ ತೊಂದರೆಗೀಡಾಗಿ, ಬ್ಯಾಂಕಿನ ಸಾಲ ನಿಷ್ಕ್ರಿಯ ಆಸ್ತಿಯಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲದಿದ್ದರೂ ಕೆಲವು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವುದು ಹಾಗೂ ರಫ್ತುದಾರನ ವ್ಯವಹಾರದ ಮೇಲೆ ನಿಗಾ ಇಡುವುದರಿಂದ ಪರಿಸ್ಥಿತಿಯನ್ನು ಸುಧಾರಿಸಲು ಬರುತ್ತದೆ. ಈ ದಿಶೆಯಲ್ಲಿ ಬ್ಯಾಂಕುಗಳು ತೆಗೆದುಕೊಳ್ಳಬೇಕಾದ ಕೆಲವು ಹೆಜ್ಜೆಗಳೆಂದರೆ :

(ಅ) ರಫ್ತು ಸಾಲಕ್ಕಾಗಿ ಬಂದ ಒಂದು ಪರಿಯೋಜನೆಯ ಸಹಿ ವಿಶ್ಲೇಷಣೆ. ರಫ್ತುದಾರನ ಜ್ಞಾನ, ಅನುಭವ, ಆರ್ಥಿಕ ಕ್ಷಮತೆ ಮತ್ತು ರಫ್ತು ಆದೇಶವನ್ನು ಪೂರೈಸಲು ಅವನಲ್ಲಿರುವ ಉತ್ಪಾದನಾ ಕ್ಷಮತೆಯ ಬಗ್ಗೆ ಕೂಲಂಕುಷವಾಗಿ ವಿಚಾರಿಸಿ ತಿಳಿದುಕೊಳ್ಳಬೇಕು.

(ಆ) ಸಂಬಂಧಪಟ್ಟ ವಿದೇಶಿ ಖರೀದಿದಾರನ ಆರ್ಥಿಕ ಕ್ಷಮತೆ ಬಗ್ಗೆ ಅವನ ಬ್ಯಾಂಕರಿನಿಂದಲೋ ಡನ್ ಮತ್ತು

ಬ್ರಾಡ್ ಸ್ಟ್ರೀಟ್ ಮುಂತಾದ ಅಂತರರಾಷ್ಟ್ರೀಯ ಸಂಸ್ಥೆಗಳ ಮುಖಾಂತರ ಅಭಿಪ್ರಾಯ ಸಂಗ್ರಹ ಮಾಡಬೇಕು. ಕೆಲವೊಮ್ಮೆ ರಫ್ತುದಾರನೇ ವಿದೇಶದಲ್ಲಿ ತನ್ನದೇ ಒಂದು ಸಂಸ್ಥೆಯ ಅಥವಾ ಸೋದರ ಸಂಸ್ಥೆಯ ಮುಖಾಂತರ ಆಮದು ಮಾಡಿಕೊಂಡು ಮಾರಾಟ ಮಾಡಬಯಸಬಹುದು. ಹಾಗಾದಲ್ಲಿ ಸಾಲ ಕೊಡುವ ಬ್ಯಾಂಕಿಗೆ ಹೆಚ್ಚಿನ ಅಪಾಯ ಸಂಭಾವ್ಯತೆಯಿರುವುದರಿಂದ ಆ ವ್ಯವಹಾರವನ್ನು ಹೆಚ್ಚು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಬ್ಯಾಂಕು ಹೆಚ್ಚಿನ ಜಮಾನತ್ತು ತೆಗೆದುಕೊಳ್ಳಬಹುದು.

(ಇ) ರಫ್ತು ಮಾಡಿ ಬ್ಯಾಂಕಿಗೆ ಸಲ್ಲಿಸಿದ ರಫ್ತು ಹುಂಡಿಗಳ ಪಾವತಿ ಬಗ್ಗೆ ಕಾಳಜಿ ವಹಿಸಿ, ಅವುಗಳ ಪಾವತಿಯನ್ನು ಸಕಾಲದಲ್ಲಿ/ಶೀಘ್ರವಾಗಿ ತರಿಸಿಕೊಳ್ಳಬೇಕು.

(ಈ) ನಿಯಮಿತವಾಗಿ ರಫ್ತು ಘಟಕದ ನಿರೀಕ್ಷಣೆ ಮಾಡಿ ಅದರ ಕೈಯಲ್ಲಿ ಇರುವ ರಫ್ತು ಆದೇಶಗಳನ್ನು ಸರಿ ಸಮಯದಲ್ಲಿ ರವಾನಿಸಲು ಬೇಕಾದ ಉತ್ಪಾದನೆ ಮಾಡುತ್ತಿದೆಯೋ, ಇಲ್ಲವೋ, ಇಲ್ಲ ಏನಾದರೂ ಅಡಚಣೆಗಳಿವೆಯೋ ಎನ್ನುವುದನ್ನು ತಿಳಿದುಕೊಳ್ಳಬೇಕು. (ಈ ಅಡಚಣೆಗಳು ನಾನಾ ತರಹದ್ದಾಗಿರುತ್ತವೆ. ಕಾರ್ಮಿಕರ ಸಂಪು, ಬಂದರು ಕಟ್ಟೆಯಲ್ಲಿನ ಕೂಲಿಗಾರರ ಸಂಪು, ವ್ಯತಿರಿಕ್ತ ಹವಾಮಾನದಿಂದಾಗಿ ಉತ್ಪಾದನೆ ಕುಂಠಿತವಾಗುವುದು. ಉದಾ : ಅತಿ ಮಳೆಯಿಂದ ಗ್ರಾನೈಟ್ ಕಲ್ಲುಗಳ ಉತ್ಪಾದನೆ ಕಷ್ಟವಾಗುತ್ತದೆ. ಉತ್ಪಾದನೆಗೆ ಬೇಕಾದ ಕಚ್ಚಾ ಮಾಲು ತರುತ್ತಿದ್ದ ಹಡಗು ವಿಳಂಬವಾಗಿ ಬಂದು, ಬೇಕಾದಷ್ಟು ಮಾಲು ತಯಾರಿಸಲು ಕಾಲಾವಕಾಶವಿಲ್ಲದೇ ಇರುವುದು, ತಡವಾಗಿ ರಫ್ತು ಮಾಡುವುದರಿಂದ ವಿದೇಶಿ ಖರೀದಿದಾರನಿಗೆ ತನ್ನ ಮಾರಾಟದ ಒಪ್ಪಂದ ನಿಭಾಯಿಸಲಾಗದಿದ್ದರೆ ಅವನು ರಫ್ತಾದ ಮಾಲನ್ನು ಸ್ವೀಕರಿಸದೇ ಇರಬಹುದು. ಇಲ್ಲವೇ, ಬೆಲೆ ಕಮ್ಮಿ ಮಾಡುವಂತೆ ಒತ್ತಾಯಿಸಬಹುದು) ಹೀಗೆ ಯಾವುದೇ ಅಡಚಣೆ ಕಂಡುಬಂದರೆ ರಫ್ತುದಾರ ಅವನ್ನು ನಿವಾರಿಸಲು ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ಮಾರ್ಗೋಪಾಯಗಳನ್ನು ಚರ್ಚಿಸುವುದು.

ರಫ್ತು ನಿಷ್ಕ್ರಿಯ ಆಸ್ತಿಗಳ ವಸೂಲಿ

ಮೇಲಿನ ವಿವರಗಳಿಂದ ದೇಶಿ ವ್ಯಾಪಾರಕ್ಕಿಂತ ರಫ್ತು ವ್ಯಾಪಾರ ಹೆಚ್ಚು ಅಪಾಯದ್ದಾಗಿದ್ದು, ಹೆಚ್ಚು ಬಾಹ್ಯ ಕಾರಣಗಳಿಂದಾಗಿ ನಷ್ಟಕ್ಕೊಳಗಾಗುತ್ತವೆ ಎಂಬುದನ್ನು ಮನಗಂಡಿದ್ದೇವೆ. ಬ್ಯಾಂಕುಗಳು ಎಷ್ಟೇ ಜಾಗರೂಕವಾಗಿದ್ದರೂ, ಈ ಬಾಹ್ಯ ಕಾರಣಗಳಿಂದಾಗಿ ರಫ್ತು ಸಾಲಗಳು ಹೆಚ್ಚಿನಂಶ ನಿಷ್ಕ್ರಿಯವಾಗುವುದನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಹಾಗೆ ನಿಷ್ಕ್ರಿಯವಾಗದ ಸಾಲಗಳನ್ನು ಆದಷ್ಟೂ ಶೀಘ್ರವಾಗಿ, ಕಾನೂನು ಮತ್ತು ಕಾನೂನೇತರ ಮಾರ್ಗಗಳನ್ನು ಅನುಸರಿಸಿ ವಸೂಲಿ ಮಾಡಬೇಕಾಗುತ್ತದೆ. ಏಕೆಂದರೆ ವಸೂಲಾತಿ ಶೀಘ್ರವಾಗಿ ಆದರೆ ಆ ಹಣವನ್ನು ಮತ್ತೆ ಬ್ಯಾಂಕು ಚಾಲನೆಯಲ್ಲಿ ಬಿಡಬಹುದು. ತಡವಾಗಿ ವಸೂಲಾಗುವ ಹಣದಿಂದ ಅದರ ಮೇಲೆ ತಗಲುವ ಕಾನೂನಿನ ಹಾಗೂ ಇನ್ನಿತರ ಖರ್ಚುಗಳು ಹೆಚ್ಚಾಗಿ ಬ್ಯಾಂಕಿನ ನಿವ್ವಳ ಆದಾಯ ಕಡಿಮೆಯಾಗುತ್ತದೆ. ರಫ್ತು ಸಾಲಗಳ ನಿಷ್ಕ್ರಿಯ ಆಸ್ತಿಗಳ ವಸೂಲಾತಿಗೆ ಅನುಸರಿಸಬೇಕಾದ ಕೆಲವು ಮುಖ್ಯ ಪ್ರಯತ್ನಗಳೆಂದರೆ :

(ಅ) ಕೊಟ್ಟ ಸಾಲ ನಿಷ್ಕ್ರಿಯ ಆಸ್ತಿಯಾಗಿ, ಆ ರಫ್ತು ಘಟಕದ ಪುನರ್ ವಸತಿ ಸಾಧ್ಯವಿಲ್ಲವೆಂದಾದರೆ, ತಡಮಾಡದೆ ಕಾನೂನು ಕ್ರಮ ಕೈಗೊಳ್ಳಬೇಕು. ಸಿವಿಲ್ ನ್ಯಾಯಾಲಯದಲ್ಲಾಗಲಿ, ಅಥವಾ ಸಾಲದ ಬಾಕಿ ರೂ. ಹತ್ತು ಲಕ್ಷಕ್ಕಿಂತ ಅಧಿಕವಿದ್ದಲ್ಲಿ ಸಾಲ ವಸೂಲಾತಿ ನ್ಯಾಯಮಂಡಲಿಯಲ್ಲಿ ದಲ್ಲೆ ಸಾ.ವ.ನ್ಯಾ.) ದಾವೆ ಮಾಡಿ, ದಾವೆಯ ಪುನರ್ ವರ್ತನೆ ಮಾಡಿ ಡಿಕ್ರಿ ಕೊಟ್ಟು ತಕ್ಷಣ ವಿಳಂಬ ಮಾಡದೆ, ಡಿಕ್ರಿಯನ್ನು ಜಾರಿ ಮಾಡಿ ಸಾಲ ವಸೂಲಿ ಮಾಡಬೇಕು.

(ಆ) ಅಡವಿಟ್ಟ ಚರ ವಸ್ತುಗಳನ್ನು ಶೀಘ್ರವಾಗಿ ಜಪ್ತಿ ಮಾಡಿ, ಅವಶ್ಯವಿದ್ದರೆ, ಹೊರಗಿನ ಸಂಸ್ಥೆಗಳ ನೆರವಿಂದ ಜಪ್ತಿ ಮಾಡಿ, ಬಿಕರಿ ಮಾಡಬೇಕು.

(ಇ) ರಫ್ತು ವ್ಯಾಪಾರದಲ್ಲಿನ ಅಪಾಯದಿಂದ ಪಾರಾಗಲು ಭಾರತೀಯ ರಫ್ತು ಉದರಿ ಭರವಸೆ ನಿಗಮದ ಜಾಮೀನು ಯೋಜನೆಗಳಲ್ಲಿ ಬ್ಯಾಂಕುಗಳು ಹಾಗೂ ರಫ್ತುಗಾರರು ತಮಗಾಗಬಹುದಾದ ನಷ್ಟಗಳಿಗೆ ಜಾಮೀನು ಪಡೆದುಕೊಂಡಿರುತ್ತವೆ. ಕೊಟ್ಟ ಸಾಲ ನಿಷ್ಕ್ರಿಯವಾಗಿ, ವಸೂಲಿ ಮಾಡಬೇಕಾದಾಗ, ತಡಮಾಡದೆ ಬ್ಯಾಂಕುಗಳು ಈ ನಿಗಮಕ್ಕೆ ತಮ್ಮ ಹಕ್ಕು ಅರ್ಜಿ ಮುನ್ನ ಸಲ್ಲಿಸಿ ಜಾಮೀನು ಮೊತ್ತವನ್ನು ಪಡೆಯಬೇಕು.

(ಈ) ಕಾನೂನು ಕಾರ್ಯವಾಹಿ ಹೆಚ್ಚು ವೆಚ್ಚ ಮತ್ತು ವಿಳಂಬದ್ದಾಗಿದ್ದು, ಬ್ಯಾಂಕಿಗೆ ಅಡವಿಟ್ಟ ಸ್ಥಿರ ಚರ ಆಸ್ತಿಗಳ ಮಾರಾಟದಿಂದ ಹೆಚ್ಚು ಹಣ ಬರುವ ಸಂಭವವಿಲ್ಲದಿದ್ದಾಗ, ಮತ್ತು ರಫ್ತುದಾರ ಬ್ಯಾಂಕಿನ ಸಾಲವನ್ನು ಮರುಪಾವತಿ ಮಾಡುವ ಉದ್ದೇಶವುಳ್ಳವನಾಗಿದ್ದರೆ, ಬ್ಯಾಂಕುಗಳ ರಾಜಿ ವಿಧಾನವನ್ನು ಅನುಸರಿಸಬಹುದು.

ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ರಫ್ತು ವ್ಯಾಪಾರದ ಅವಶ್ಯಕತೆಯನ್ನು ತಡೆಹಿಡಿಯಲು ಸಾಧ್ಯವೇ ಇಲ್ಲ. ಆದ್ದರಿಂದ ರಫ್ತು ಸಾಲಗಳಲ್ಲಿ ನಿಷ್ಕ್ರಿಯ ಆಸ್ತಿಗಳು ಹೆಚ್ಚುತ್ತಿವೆ ಎಂಬ ಕಾರಣಕ್ಕಾಗಿ ಬ್ಯಾಂಕುಗಳು ಈ ಸಾಲಗಳನ್ನು ಕೊಡುವುದನ್ನು ಕಡಿಮೆ ಮಾಡಲಾಗುವುದಿಲ್ಲ. ಬ್ಯಾಂಕುಗಳು ರಫ್ತು ಸಾಲಗಳ ಮಂಜೂರಾತಿ ಮತ್ತೆ ನಿರ್ವಹಣೆಯಲ್ಲಿ ಇನ್ನು ಹೆಚ್ಚು ಮುಂಜಾಗ್ರತೆ ವಹಿಸಿ ಈ ಸಾಲಗಳು ನಿಷ್ಕ್ರಿಯ ಆಸ್ತಿಗಳಾಗುವುದನ್ನು ತಡೆಗಟ್ಟಬೇಕೆಂದಷ್ಟೇ ಹೇಳಬಹುದು. ★

With best compliments of

Dharmadeep
Powerdrive Industries Ltd.

6, Swasthi Road, Shanthi Nagar
Bangalore—560 027

ಶುಭಾಶಯಗಳೊಂದಿಗೆ

ಕೆನರಾ ಎಲೆಕ್ಟ್ರಿಕ್ ಸ್ಟೋರ್ಸ್

304, 4ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು—560 010

ವಿದ್ಯುತ್ ಉಪಕರಣ ಮಾರಾಟಗಾರರು ಮತ್ತು ಗುತ್ತಿಗೆದಾರರು
ಕ್ರಾಂಪ್ಟನ್ ಗ್ರೀವ್ಸ್ ಉತ್ಪನ್ನಗಳ ಮಾರಾಟಗಾರರು

With best compliments from

Leela Scottish Lace Ltd.

$26/1-A_1$, $26/1-B_2$

8th Mile, Mysore Road

BANGALORE—560 059

भारत INDIA
RUPEES
01.00
MYSORE H.P.O.
12 III 99

R. N. 36702/83

With best compliments from

Karle Exports
&
Karle International
(100 % E.O.U.)

Manufacturers and Exporters of
Readymade Garments and Textiles

46/1, C. M. Babumohan Building
Tumkur Road, Yeswanthpur
BANGALORE-560 022

Phone: 3378353, 3373992, 3376558, 3379327
Fax: 91-80-3374729, *Telex:* 0845-2554 LTK IN
E-Mail: LT.KARLE @ SM5. Sprintrpg. Sprint. Com.

PRINTED BY G. H. KRISHNAMURTHY, MYSORE PRINTING AND PUBLISHING HOUSE, ASHOKA ROAD, MYSORE-1